ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

17 ಮೇ 2017 ಪುಟ 16 ರೂ. 15/-

ಕೆ.ಎಸ್.ಭಗವಾನ್




ರಾಮಮಂದಿರ ಯಾಕೆ ಬೇಡ?



ವಿಕ್ರಮ ಮೆರೆದ ಬಾಹುಬಲಿ-2

ಮಂಡ್ಯ ಜೈಲಿನಿಂದಲೇ ಡೇಂಜರ್ ಶಿವನ ಹಾವಳಿ!





ಶಿವಮೊಗ್ಗ

ಆರೆಸ್ಸೆಸ್‌ನ ಜೋಡಿ ಮುಹೂರ್ತ!

ದಕ್ಷಿಣ ಕನ್ನಡ ಹಿಂದೂ ಡಾನ್ ವಿಕ್ಕಿ ಶೆಟ್ಟಿ ಜನಪರ ಜಲೀಲನ ಬಲಿ ಪಡೆದನೇಕೆ?!



ಮೈಸೂರು ಕುವೆಂಪು ಕನ್ನಡ ಅಧ್ಯಯನದಲ್ಲಿ ಅಂಬೇಡ್ಕರ್ ಮುಖಗಳ



ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮ ಆಯೋಜಿಸಿದ್ದ ಡಾ. ಪ್ರೀತಿ ಶುಭಚಂದ್ರ ಅವರು ಚಿಂತನಶೀಲ ಮಹಿಳೆಯಾದ್ದರಿಂದ ದಲಿತ ವಿದ್ಯಾರ್ಥಿಗಳು ವೇದಿಕೆಗೆ ಬಂದು ತಮಗಾದ ಅಸ್ಪೃಶ್ಯತೆ ಅನುಭವಗಳನ್ನು ಹೇಳಿಕೊಳ್ಳುವ ಅವಕಾಶ ಕಲ್ಪಿಸಿದ್ದರು. ಈ ವಿದ್ಯಾರ್ಥಿಗಳು ತಮಗಾದ ಅನುಭವಗಳನ್ನು ಹೇಳುತ್ತಿರುವಂತೆ ನಮ್ಮ ಪುರೋಹಿತಶಾಹಿ ಮನುಸಿದ್ಧಾಂತ ಸ್ಥಗಿತಗೊಳಿಸಿರುವ ಮನಸ್ಸು ಇನ್ನು ಹಾಗೇ ಇವೆ ಎಂಬುದು ಅರಿವಾಗತೊಡಗಿತು.

ಲಂಕೇಶ್ ಪತ್ರಿಕೆ ಹೊರಬಂದ ಆರಂಭದಲ್ಲಿ ಹಾಸ್ಯಲೇಖನಗಳನ್ನೆ ಬರೆಯುತ್ತಿದ್ದ ಏಚ್.ಎಲ್. ಕೇಶವಮೂರ್ತಿಯವರು, ಕದಬಹಳ್ಳಿ ಎಂಬ ಊರಿನ ಘಟನೆಯೊಂದನ್ನು ದಾಖಲಿಸಿ ನಮ್ಮಲ್ಲಿ ಪ್ರತಿಭಟನೆಯ ಕಿಚ್ಚು ಹತ್ತಿಸಿದ್ದರು. ಅದೇನೆಂದರೆ, ಊರಿನ ಹಬ್ಬಕ್ಕೆ ದಲಿತರು ತಮಟೆ ಬಡಿಯಬೇಕಿತ್ತು. ಹಸಿವು ಮತ್ತು ಬಡತನ ಹಾಗು ಕೂಲಿಗಾಗಿ ಎಲ್ಲೆಲ್ಲೋ ಹೋಗಿಬರುತ್ತಿದ್ದ ದಲಿತರ ಯಾವ ಕಷ್ಟಗಳನ್ನು ಪರಿಗಣಿಸದ ಊರಿನ ಮೇಲ್ಜಾತಿ ಜನ "ತಮಟೆ ಬಡಿಯಕ್ಕಾಗಲಿಲ್ಲ ಅಂದ್ರೆ ಊರುಬಿಡಿ" ಎಂಬ ಸಂದೇಶ ಕಳುಹಿಸಿದ್ದರು. ಅದಕ್ಕೂ ಹಿಂದೆ, ಅಂದರೆ ಎಪ್ಪತ್ತರ ದಶಕದಲ್ಲಿ, ದಲಿತರ ಗುಡಿಸಲಿಗೇ ನುಗ್ಗಿ, ಹಲ್ಲೆ ಮಾಡಿ, ಎಳೆದು ತಂದು ತಮಟೆ ಬಡಿಸಿಕೊಂಡಿದ್ದರು.

ಆಗ ನಾನು ಆ ಊರಿನಲ್ಲಿ ಎಸ್‌ಎಸ್‌ಎಲ್‌ಸಿ ಓದುತ್ತಿದ್ದೆ. ಹೈಸ್ಕೂಲಿನ ಯೂನಿಯನ್ ಡೇ ದಿನ ಎಲ್ಲ ವಿದ್ಯಾರ್ಥಿಗಳೂ ಖುಷಿಯಿಂದ ಹೋಟಲಿಗೆ ಹೋಗಿ ಕಾಫಿ ಕುಡಿಯುತ್ತಿದ್ದೆವು. ನಮ್ಮ ಜೊತೆ ಬೊಮ್ಮೆನಹಳ್ಳಿ ಗಂಗ ಎಂಬುವವನಿದ್ದ. ಆತ ದಲಿತರ ಹುಡುಗ ಎಂದು ಪತ್ತೆ ಹಚ್ಚಿದ ನೀಲಗಿರಿ ನಿಂಗಣ್ಣ ಎಂಬ ಊರ ಯಜಮಾನ ಹೋಟೆಲಿಗೆ ಬಂದು "ನೀನು ಯಾವ ಜಾತಿಲಾ" ಎಂದ. ಗಂಗ "ನನಿಗೆ ಗೊತ್ತಿಲ್ಲ" ಎಂದ. ಕೂಡಲೇ ನೀಲಗಿರಿ ನಿಂಗಣ್ಣ ಗಂಗನನ್ನ ಎಳೆದು ಹೊಡೆದು ಹೋಟೆಲಿನಿಂದ ಹೊರನೂಕಿದ. ನಮಗೆಲ್ಲಾ ಕೈಕಾಲು ನಡುಕ ಬಂದು ಅಲ್ಲಿ ಗಂಗ ಒಬ್ಬನನ್ನೇ ಬಿಟ್ಟು ಸ್ಕೂಲ್ ಕಡೆ ಬಂದೆವು. ಯೂನಿಯನ್ ಡೇ ಖುಷಿಯಲ್ಲಿ ನಾವದನ್ನು ಮರೆತುಬಿಟ್ಟೆವು. ಆದರೆ ಗಂಗನ ಅಂದಿನ ಮನಸ್ಥಿತಿ ಅರಿಯುವ ಶಕ್ತಿ ನಮಗಿರಲಿಲ್ಲ.

ಆ ಸಮಯದಲ್ಲೇ ಗದ್ದೆಯ ಬದ ಸವರುತ್ತಿದ್ದಾಗ, ಪಕ್ಕದ ಗದ್ದೆಯಲ್ಲಿದ್ದ ಏತದ ಬಾವಿಗೆ ಹನುಮಯ್ಯ ನೀರು ಕುಡಿಯಲು ಬಂದ. ಈ ಹನುಮಯ್ಯ ನಾನು ಆ ಸಮಯದಲ್ಲಿ ಎಂದೂ ನೋಡದಿದ್ದ ಪ್ರತಿಭಾವಂತ. ಬುಡುಬುಡಿಕೆ ಶೈಲಿಯಲ್ಲಿ ಆತ ನೂರಾರು ಹೂವಿನ ಹೆಸರೇಳುತ್ತಿದ್ದ. ದೇವಾನುದೇವತೆಗಳ ಹೆಸರನ್ನು ಪಟಪಟನೆ ಹೇಳಿ ಅವರುಗಳ ಬಗ್ಗೆ ಕತೆಗಳನ್ನು ಹೇಳುತ್ತಿದ್ದ. ಜೊತೆಗೆ ಶಾಸ್ತ್ರವನ್ನು ಹೇಳುತ್ತಿದ್ದ. ಮೈಲಾರಪಟ್ಟಣದಿಂದ ಬಂದು ನಮ್ಮೂರಿನ ಹೆಣ್ಣುಮಗಳನ್ನು ಮದುವೆಯಾಗಿ ಇಲ್ಲೇ ಉಳಿದುಬಿಟ್ಟಿದ್ದ. ಬಿರುತ್ತಲೇ ತನ್ನೆದುರಿನ ದೃಶ್ಯ ಕುರಿತು ಏನಾದರೊಂದು ಹೇಳುತ್ತಿದ್ದ ಆತ ನಮ್ಮ ಪ್ರಾಂತ್ಯದ ಸರ್ವಜ್ಞನಂತಿದ್ದ. ಅಂತಹ ವಿದ್ವಾಂಸನಿಗೆ ಬಾಯಾರಿದ ಕಾರಣಕ್ಕೆ ಏತದ ಬಾವಿ ಹತ್ತಿರ ಬಂದು ಬಾವಿ ಮಾಲೀಕನಿಗೆ "ನೀರು ಕುಡಿಬೌದ ಗೌಡ್ರೆ" ಎಂದ. "ಕುಡಿಯೋ ನಿನಿಗೇ ಅಲವ ಬಾವಿ ತಗಿಸಿರದು. ಹಿಂಗೆ ವಕ್ಕಲಿಗರ ಜಾತಿ ಕೆಡಸಕ್ಕೆ ಬರೊವತ್ತಿಗೆ ಮಳೆ ಅಟ್ಕ ಸೇರಿಕೊಂಡಿರದು" ಎಂದ. ಹನುಮಯ್ಯ ಹುಸಿ ನಗುತ್ತ "ಅದ್ನೆ ಕೇಳಿದೆ ಗೌಡ್ರೆ. ನಾನೇನು ಕುಡದೆ ಬುಟ್ನೆ. ನಾನು ಬಾವಿ ನೀರು ಕುಡಿಯದ್ರಿಂದ ಮಳೆಯೇ ಹೊಂಟೋಯ್ತು ಅನ್ನದಾದ್ರೆ ಲೋಕಕಲ್ಯಾಣಕ್ಕಾಗಿ ನಾವು ನೀರು ಕುಡಿಯದೆ ಬದುಕೋದನ್ನ ಕಲ್ತಗಬೇಕು" ಎಂದು ನಾಟಕೀಯವಾಗಿ ಹೇಳುತ್ತ ಊರ ಕಡೆ ಹೊರಟುಹೋದ. ಹನುಮಯ್ಯನ ಬದುಕಿನಲ್ಲಿ ಇದೊಂದೇ ಘಟನೆಯಲ್ಲ, ಇಂತಹ ನೂರಾರು ಕತೆಗಳಿವೆ. ಅವನ್ನೆಲ್ಲಾ ಕೇಳಿದರೆ ತಮಾಷೆಯಾಗಿ ಹೇಳುತ್ತಾನೆ.

ನಾವು ಮಿಡ್ಲ್ ಸ್ಕೂಲಿನಲ್ಲಿ ಓದುವಾಗ ಹೆಡ್ಮಾಸ್ಟರ್ ತಂಗಿಯ ಮದುವೆ ಜರುಗಿತು. ಆ ಪ್ರಯುಕ್ತ ಸ್ಕೂಲ ಹುಡುಗರೆಲ್ಲಾ ಹೋಗಿ ಮದುವೆಯಲ್ಲಿ ಉಂಡುಬರುವ ಆಜ್ಞೆ ಹೆಡ್ಮಾಸ್ಟರ್ ನಂಜುಂಡೇಗೌಡರಿಂದಲೇ ಹೊರಬಿದ್ದಿತ್ತು. ಸ್ಕೂಲ್ ಮಕ್ಕಳೆಲ್ಲಾ ಹದ್ದಳಿಗೆ ದೌಡಾಯಿಸಿ ಯಾರ್‍ಯಾರದೊ ಮನೆಯ ಜಗುಲಿಯ ಮೇಲೆ ಕುಳಿತೊ. ರಾಮದಾಸ ಎನ್ನುವ ಹುಡುಗನೂ ಜಗುಲಿಯಲ್ಲಿ ತನ್ನ ಸಹಪಾಠಿಗಳೊಂದಿಗೆ ಕುಳಿತಿದ್ದ. ಹುಡುಗನ ಜಾತಿ ಪತ್ತೆ ಹಚ್ಚಿದವನ್ನೊಬ್ಬ ಗದರಿ ಜಾತಿ ಹೆಸರಿಡಿದು ಹಲ್ಕ ಮಾತಿನಲ್ಲಿ ಬೈದು ಅಲ್ಲಿಂದ ಓಡಿಸಿದ. ಅಂದು ಹೋದ ರಾಮದಾಸನ ಬೆನ್ನು ಭಾಗ ನನಗಿನ್ನು ನೆನಪಿದೆ. ಕತ್ತು ಬಗ್ಗಿಸಿಕೊಂಡು ನಡೆದು ಹೋದ ಆತ ಮತ್ತೆಂದೂ ಸ್ಕೂಲಿಗೆ ಬರಲಿಲ್ಲ, ಬಹಳ ವರ್ಷಗಳ ನಂತರ ವಿಚಾರಿಸಿದಾಗ ಶಿವಮೊಗ್ಗದ ಹಾಲಿನ ಡೈರಿಯಲ್ಲಿ ಇದ್ದಾನೆಂದು ತಿಳಿಯಿತು. ಅಲ್ಲಿಗೋಗಿ ವಿಚಾರಿಸಲಾಗಿ ಈಗ ಮಂಗಳೂರಲ್ಲಿದ್ದಾನೆ ಎಂದು ಹೇಳಿದರು.

ಇವೆಲ್ಲ ಅರ್ಧ ಶತಮಾನದ ಹಿಂದಿನ ಘಟನೆಗಳು. ಆದರೆ ಮೊನ್ನೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಡೆಸಿದ ಅಂಬೇಡ್ಕರ್ ಜಯಂತಿಯಂದು ಕನ್ನಯ್ಯ ವೇಮುಲನಂತೆ ಕಾಣುತ್ತಿದ್ದ ಹುಡುಗರು ತಮಗಾದ ಅಸ್ಪೃಶ್ಯತೆ ಅನುಭವ ಹೇಳುತ್ತ ಒಂದಿಬ್ಬರು ಗಂಭೀರವಾದರು. ಮತ್ತಿಬ್ಬರು ಹಾಸ್ಯ ಮಾಡಿದರು.


ಜಾತಿ ಒಂದು ಮೂಢನಂಬಿಕೆ, ಆ ಮೂಢನಂಬಿಕೆ ಆಚರಿಸುತ್ತಿರುವ ಮೂಢರನ್ನು ಆಡಿಕೊಳ್ಳದೆ ಬೇರೆ ದಾರಿಯಿಲ್ಲ, ಜೊತೆಗೆ ಕಣ್ಣು ತೆರೆಸುವ ಜವಾಬ್ದಾರಿ ಕೂಡ ಮುಟ್ಟಿಸಿಕೊಳ್ಳದವರ ಮೇಲೆ ಬಿದ್ದಿದೆ.

ಒಬ್ಬ ವಿದ್ಯಾರ್ಥಿ ಹೇಳಿದ: ಊರಲ್ಲಿ ಉಳಿದ ಮಕ್ಕಳ ಜೊತೆ ಆತ ಕುಳಿತಿರುವಾಗ ಬಂದ ಹೆಂಗಸೊಂದು "ಏ ದೂರ ಕೂತಗಳೊ ನಮ್ಮ ಹುಡುಗರ ಜೊತೇಲಿ ಕುಂತಿದ್ದಿಯಲ್ಲ" ಎಂದಳಂತೆ. ಆಗ ಈತ ಅದನ್ನು ತಮಾಷೆಯಾಗಿ ಗ್ರಹಿಸಿದ್ದನಂತೆ. ಆ ಮಹಿಳೆ ನಿಜಕ್ಕೂ ಹಾಗೆ ಹೇಳುತ್ತಿದ್ದಾಳೆಂದು ಗೊತ್ತಾದಾಗ ಬೇಸರವಾಗಿ ಮನೆ ಕಡೆ ಹೋದನಂತೆ.

ಬಸ್ಸಿನಲ್ಲಿ ಮಹಿಳೆಯೊಬ್ಬಳು ಜ್ಞಾನತಪ್ಪಿ ಬಿದ್ದಳಂತೆ. ಅವಳಿಗೆ ನೀರು ಚಿಮುಕಿಸಿ ಕಣ್ಣು ಬಿಡುವಂತೆ ಮಾಡಿದನಂತೆ. ಕಣ್ಣು ಬಿಟ್ಟ ಆಕೆ "ನೀನು ಯಾವ ಜಾತಿ" ಎಂದು ಕೇಳಿದಳಂತೆ. ಕಡೆಗೆ ಬಸ್ಸಲ್ಲಿದ್ದವರು ಆಕೆಗೆ ಗದರಿದರಂತೆ. ಇದೇ ಹುಡುಗ ಬಸ್ಸಿನಲ್ಲಿ ನಿಂತಿದ್ದಾಗ ಮಹಿಳೆಯೊಬ್ಬಳು ಮುಟ್ಟಿಸಿಕೊಳ್ಳದಂತೆ ಜಾಗರೂಕವಾಗಿ ನಿಂತಿದ್ದಳಂತೆ. ಆದರೆ ಡ್ರೈವರ್ ಹಠಾತ್ತನೆ ಹೊಡೆಯುವ ಬ್ರೇಕಿನಿಂದ ಆಕೆಯ ಮಡಿಯೆಲ್ಲಾ ಹಾಳಾಗಿ ಅಂಟಿಕೊಂಡ ಹುಡುಗ ಬಿಡಿಸಿಕೊಳ್ಳುವಂತಾಗುತ್ತಿತ್ತಂತೆ.

ಮತ್ತೊಬ್ಬ ವಿದ್ಯಾರ್ಥಿ ಅಸ್ಪೃಶ್ಯತೆ ಅನುಭವದಿಂದ ರೋಸಿ ಕ್ರಿಶ್ಚಿಯನ್ ಧರ್ಮೀಯನಾದನಂತೆ. ಅಲ್ಲಿ ಎರಡು ವರ್ಷವಿದ್ದು ತನ್ನವರು ಅನುಭವಿಸುತ್ತಿರುವ ಅಸ್ಪೃಶ್ಯತೆ, ಜಾತೀಯತೆ ನೋಡಲಾಗದೆ ಹೋರಾಡುವ ಸಲುವಾಗಿ ಮತ್ತೆ ಮರಳಿ ಬಂದಿದ್ದಾನೆ. ಆದರೆ ಎರಡು ವರ್ಷ ಕ್ರಿಸ್ತ ಧರ್ಮದ ಸಂಸ್ಕಾರ ಅವನನ್ನು ಪಕ್ವಗೊಳಿಸಿದೆಯಂತೆ.

ಹಾಗೆ ನೋಡಿದರೆ ಇಲ್ಲಿನ ಪ್ರತಿ ವಿದ್ಯಾರ್ಥಿಯರ ಬಳಿಯೂ ಹೇರಳವಾದ ಅನುಭವಗಳಿವೆ. ಇಲ್ಲಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರತಿಭಾವಂತ




ಹಾಗು ಕನ್ನಯ್ಯನಂತ ವಿದ್ಯಾರ್ಥಿಗಳನ್ನ ನೋಡಿದೆ.

ಕನ್ನಯ್ಯನ ಒಂದು ಭಾಷಣಕ್ಕೆ ಪುರೋಹಿತಶಾಹಿಗಳ ಚಡ್ಡಿ, ಕಚ್ಚೆಯೆಲ್ಲ ಒದ್ದೆಯಾಗಿ ಬೊಬ್ಬೆ ಹೊಡೆದುಬಿಟ್ಟರು. ಎಲ್ಲವೂ ಸುಮ್ಮನಾದಂತೆ ಕಂಡರೂ ಹಾಗೇನೂ ಆಗಿಲ್ಲ; ಬರೋಡದ ಮಹಾರಾಜ ಸಯ್ಯಾಜಿರಾವ್ ಗಾಯಕವಾಡ ಅಂಬೇಡ್ಕರ್ ಒಬ್ಬರನ್ನು ಅಮೆರಿಕದ ಕೊಲಂಬಿಯಾ ಯೂನಿವರ್ಸಿಟಿಗೆ ಓದಲು ಕಳುಹಿಸಿದರೆ, ಸಿದ್ದರಾಮಯ್ಯರ ಸರಕಾರ ನೂರಾರು ಜನರನ್ನು ಕಳುಹಿಸಿಕೊಟ್ಟಿದೆ. ಕಳೆದ ವರ್ಷ ವಿಧಾನಸೌಧದ ಬಾಂಕ್ವೆಟ್ ಹಾಲಿನಲ್ಲಿ ಸುಮಾರು 185 ಜನ ಪ್ರತಿಭಾವಂತ ವಿದ್ಯಾರ್ಥಿಗಳು ಮುಖ್ಯಮಂತ್ರಿಯಿಂದ ಸನ್ಮಾನಗೊಂಡು ವಿದೇಶದಲ್ಲಿ ವ್ಯಾಸಂಗ ಮಾಡಿ ಬರಲು ಹೋಗಿದ್ದಾರೆ. ಇದೆಲ್ಲೂ ಒಂದು ಸಣ್ಣ ಸುದ್ದಿ ಕೂಡ ಆಗಿಲ್ಲ, ಮಾಧ್ಯಮದವರ ಸುದ್ದಿಗಳೇ ಬೇರೆ.

ಅಸ್ಪೃಶ್ಯತೆ, ಜಾತೀಯತೆಯ ಭೀಕರತೆ ಅಂಬೇಡ್ಕರ್ ಅನುಭವಕ್ಕೆ ಬಂದರೆ ಕುವೆಂಪು ಕಣ್ಣಾರೆ ನೋಡಿ ಗ್ರಹಿಸಿದರು. ಅಂಬೇಡ್ಕರ್ ಅನುಭವ ದಾಖಲಿಸುವುದಾದರೆ, ಅವರು ಕೊಲಂಬಿಯಾ ಯೂನಿವರ್ಸಿಟಿಯಲ್ಲಿ ಎಂ.ಎ ಡಿಗ್ರಿ ಪಡೆದು ಕರಾರಿನಂತೆ ಬರೋಡ ಮಹಾರಾಜನ ಸೇನಾ ಕಾರ್ಯದರ್ಶಿಯಾಗಿ ನೇಮಕಗೊಳ್ಳುತ್ತಾರೆ. ಆದರೆ ಸಿಬ್ಬಂದಿ ಅವರ ಕುರ್ಚಿ, ಟೇಬಲ್ ಸಮೀಪ ಸುಳಿಯದೆ ದೂರದಿಂದಲೇ ಫೈಲ್ ಎಸೆಯುತ್ತಾರೆ. ಅವರು ಕುಡಿಯುವ ನೀರಿನ ವ್ಯವಸ್ಥೆಯೇ ಬೇರೆ ಇರುತ್ತದೆ. ಈ ಭೀಕರ ಅಸ್ಪೃಶ್ಯತೆ ಸಹಿಸಲಾರದ ಅಂಬೇಡ್ಕರ್ ಮಹಾರಾಜನಿಗೆ ದೂರು ಹೇಳುತ್ತಾರೆ. ಮಹಾರಾಜ ಅಸಹಾಯಕತೆ ಪ್ರದರ್ಶಿಸುತ್ತಾನೆ. ಹನ್ನೊಂದೇ ದಿನಕ್ಕೆ ಅಂಬೇಡ್ಕರ್ ಕೆಲಸ ಬಿಟ್ಟು ಬರುತ್ತಾರೆ.

ಅಷ್ಟರಲ್ಲಿ ಬಾಡಿಗೆ ಮನೆ ಕೊಟ್ಟವರಿಗೆ ಅಂಬೇಡ್ಕರ್ ತಾವು ಮುಟ್ಟಿಸಿಕೊಳ್ಳಲಾರದ ಮಹರ್ ಜಾತಿಯವರೆಂದು ಗೊತ್ತಾಗಿ ಮನೆಯ ಸಾಮಾನುಗಳನ್ನೆಲ್ಲಾ ಹೊರಗೆಸೆದಿರುತ್ತಾರೆ. ಅಂಬೇಡ್ಕರ್



ಬಂದು ನೋಡಿ ಸಾಮಾನುಗಳನ್ನೆಲ್ಲಾ ತೆಗೆದುಕೊ… ಹೋಗಿ ಒಂದು ಮರದ ಕೆಳಗೆ ಇಟ್ಟುಕೊಂಡು… ಯೋಚನೆಗೆ ತುತ್ತಾಗಿ "ಅದು ಹೇಗೆ ಈ ದೇಶ… ಬದುಕುವುದು" ಎಂಬ ಆಲೋಚನೆಯೊಟ್ಟಿಗೆ ದುಃಖವೂ ಮುಖದಲ್ಲಿ ಹೆಪ್ಪುಗಟ್ಟಿ ಬಿಡುತ್ತದೆ. ಸನ್ನಿವೇಶ ಭಾರತದ ಮನಸ್ಸನ್ನು ಕರಗಿಸಬೇಕಿತ್ತು…

ಕೊಲಂಬಿಯಾ ಯೂನಿವರ್ಸಿಟಿಯಲ್ಲಿ ರಾಜ… ಶಾಸ್ತ್ರ ಸಮಾಜ ಶಾಸ್ತ್ರ, ಅರ್ಥಶಾಸ್ತ್ರ ತತ್ವಶಾಸ್ತ್ರ ಹಾ… ಮಾನವಶಾಸ್ತ್ರ ಓದಿಕೊಂಡು ಡಿಗ್ರಿ ಪಡೆದು ಬ… ಅಪರೂಪದ ವಿದ್ವಾಂಸನನ್ನು ಭಾರತದ ಅಸ್ಪೃಶ್ಯ… ಹೊರದೂಡಿ ಮರದ ಕೆಳಗೆ ಕೂರಿಸಿತ್ತು. ಈ ಹಿನ್ನೆಲೆಯಿಲ್ಲದಿದ್ದರೆ ಅಂಬೇಡ್ಕರ್ ಏನಾಗುತ್ತಿದ್ದರ… ಏನೊ. ಮರದ ಕೆಳಗಿನ ಅವರ ಸಂಕಲ್ಪ ಮಹಾ… ಮರವಾಗಿಸಿತು. ಗಾಂಧಿಯವರೂ ಕೂಡ ಅಸ್ಪೃ… ಬಗ್ಗೆ ಗಾಢವಾಗಿ ಚಿಂತಿಸಿದ ಫಲವಾಗಿ ಅಸ್ಪೃಶ್ಯತೆ… ಆಚರಣೆ 'ಕ್ರೈಂ' ಎಂದು ಕರೆದುದಲ್ಲದೆ, ಆ ಬಗ್… ಸುಧಾರಣಾ ಕಾರ್ಯಕ್ರಮವನ್ನು ಹಾಕಿಕೊಂಡರು…

ಇನ್ನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕುವೆಂ… ತರಹ ಅಸ್ಪೃಶ್ಯತೆ, ಜಾತೀಯತೆಯನ್ನು ಗುರುತಿಸಿ… ವ್ಯಾಖ್ಯಾನಿಸಿದ ಇನ್ನೊಬ್ಬ ಲೇಖಕನಿಲ್ಲ, ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಹೊಲೆಯರ ಗುತ್ತಿಯನ್ನು ನೋಡಿದೆ ಮೇಲು ಜಾತಿಯ ಕಾವೇರಿ ಮೆಚ್ಚುಗೆಯಿಂದ ನೋಡುತ್ತಾ… ಏಕೆಂದರೆ ಗುತ್ತಿ ದೃಢಕಾಯನಾಗಿ ಆಕರ್ಷಕವಾಗಿರುತ್ತಾನೆ. ಆದರೆ ಅಸ್ಪೃಶ್ಯತೆ ಕಾರಣ… ಅವನನ್ನು ಕೂಡಲಾಗುವುದಿಲ್ಲ. ಆದ್ದರಿಂದ ಗು… ಅವಳಿಗೆ ಚೆಲುವಾದ ಕೊಂಬಿನ ಹೋರಿಯಂತೆ… ಕಾಣುತ್ತಾನೆ. ಅಸ್ಪೃಶ್ಯತೆ ಮನಸ್ಸುಗಳು ನಮ್ಮಂತ ನರಮನುಷ್ಯರನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣುವ ಈ ನಿದರ್ಶನವನ್ನು ಕುವೆಂಪು ತೋರ…

ಈ ಸಮಾರಂಭದಲ್ಲಿ ಲಂಕೇಶರ 'ಮುಟ್ಟಿಸಿಕೊಂಡವನು' ಕತೆಯನ್ನು ನಾಟಕ ನಿ… ಸುಮತಿ ವಾಚಿಸಿದರು. 'ಮುಟ್ಟಿಸಿಕೊಂಡವನು' ಪ್ರಖ್ಯಾತ ಕತೆಗಳಲ್ಲೊಂದು. ಲಂಕೇಶರಿಗೆ ಜಾತಿ… ಅಸ್ಪೃಶ್ಯತೆ ತುಂಬ ಗಾಢವಾಗಿ ಕಾಡಿದ ಸಂಗತಿಗ… ಅವರು ತಾರುಣ್ಯದಲ್ಲಿ ಬರೆದ ನಾಟಕ ಸಂಕ್ರಾಂ… ಹನ್ನೆರಡನೇ ಶತಮಾನದಿಂದ ಎತ್ತಿಕೊಂಡು ರೂ… ಅವರ ಮಹತ್ ಕಾದಂಬರಿ 'ಮುಸ್ಸಂಜೆ ಕಥಾ… ಪ್ರಸಂಗ' ಕೊನೆಗೆ ಬ್ಯಾಡರ ಮಂಜ ಲಿಂಗಾಯ… ಸಾವಂತ್ರಿಯನ್ನು ಒಟ್ಟಾಗಿಸುವುದು. ಹಾಗೆಯೇ … ಕರಗುವ ಸಮಯ' ಕಥೆ ಕೂಡ ಬ್ಯಾಡರ ತಿಪ್ಪ… ಮತ್ತು ಜಂಗಮರ ಶಾಮಲ ತಣ್ಣಗೆ ಒಂದಾಗು… ವಸ್ತುವಿನಿಂದ ಕೂಡಿದೆ.

ಇಂತಹ ಪ್ರಕರಣಗಳು ಸಂಭವಿಸುತ್ತಿರುವುದರಿಂದಲೇ ಜಾತಿಗಳು ಎಚ್ಚೆತ್ತುಕೊಂಡು ಅಬ್ಬರಿಸುತ್ತಿವೆ. ಈಗ ಪುರೋಹಿತಶಾಹಿಗಳು ಏಕೆ ಬೊಬ್ಬೆ ಹೊಡೆಯುತ್ತಿದ್ದಾರೆಂದರೆ ನಮ್ಮ ನಡುವಿನ ದಲಿ… ಸಂಘರ್ಷ ಸಮಿತಿ ಹೊಡೆದು ಚೂರಾಗಿಹೋಗಿ… ರೈತಸಂಘ ಹೋಳುಗಳಾಗಿ ಬಿದ್ದಿದೆ. ಭಾಷಾ … ಕೂಡ ಭಿನ್ನ ಹಾದಿ ಹಿಡಿದಿವೆ. ಲೇಖಕರಲ್ಲಿ … ಬಲ ಮತ್ತು ಯಡಬಿಡಂಗಿ ಚರ್ಚೆ ನಡೆದಿದೆ. ಚೆಡ್ಡಿಗಳಿಗಿದು ಪ್ರಶಸ್ತವಾದ ಸಮಯ. ಆದರೆ ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ… ವಿದ್ಯಾರ್ಥಿಗಳ ಉತ್ಸಾಹ ನೋಡಿದರೆ, ನಾವಷ್ಟು… ನಿರಾಶರಾಗಬೇಕಿಲ್ಲ, ಅವರಿಗೆ ಬೇಕಾದ ನಾಯಕ… ಒದಗಿಸಿದರೆ ಸಾಕು ಅನ್ನಿಸುತ್ತದೆ.

■ ಬಿ. ಚಂದ್ರ…

ಟಿವಿ ಚಾನೆಲ್‌ಗಳ ಹುಚ್ಚಾಟ, ಚೆಡ್ಡಿಗಳ ಇಬ್ಬಂದಿತನ



ನಂದಿತಾ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಪ್ರತಿಭಟನೆ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಜಮ್ಮು ಮತ್ತು ಕಾಶ್ಮೀರ ರಾಜ್ಯದ ಪೂಂಚ್ ಪ್ರದೇಶದಲ್ಲಿ ಮೇ 1ರಂದು ಪಾಕಿಸ್ತಾನದ ಸೈನಿಕರು ನಿಯಂತ್ರಣ ರೇಖೆ ದಾಟಿ ಭಾರತದ ಇಬ್ಬರು ಯೋಧರನ್ನು ಕೊಂದಿದ್ದಲ್ಲದೆ ಅವರ ಶಿರಚ್ಛೇದನ ಮಾಡಿದ್ದು ಖಂಡನೀಯ. ಈ ಹೇಯಕೃತ್ಯದಲ್ಲಿ ಮಡಿದ ಬಿಎಸ್‌ಎಫ್ ಹೆಡ್‌ಕಾನ್‌ಸ್ಟೇಬಲ್ ಪ್ರೇಮ್ ಸಾಗರ್ ಅವರ ಮಗಳು "ಪ್ರತೀಕಾರವಾಗಿ ಶತ್ರುಗಳ 50 ತಲೆ ತೆಗೆದರೆ ಸಂತೋಷವಾಗುತ್ತದೆ" ಎಂದು ಹೇಳಿರುವುದರಲ್ಲಿ ಅಚ್ಚರಿ ಇಲ್ಲ. ಎಷ್ಟೇ ಆದರೂ ತಂದೆಯನ್ನು ಕಳೆದುಕೊಂಡ ನೋವಿನಲ್ಲಿ ಆಕೆ ಇದ್ದಾಳೆ. ಆದರೆ ಪಾಕಿಸ್ತಾನದ ಈ ಅಮಾನವೀಯ ಕೃತ್ಯಕ್ಕೆ ನಮ್ಮ ಮಾಧ್ಯಮಗಳು ಸೃಷ್ಟಿಸಿರುವ 'ಪ್ರತೀಕಾರ'ಗಳು ಮಾತ್ರ ಜಿಗುಪ್ಸೆ ಹುಟ್ಟಿಸುವಂತಿದೆ.

ಇವತ್ತು ಇದನ್ನು ಬರೆಯಲು ಕೂತಾಗ ಕನ್ನಡದ ಒಂದು ಸುದ್ದಿ ವಾಹಿನಿಯಲ್ಲಿ ಈ ದುರ್ಘಟನೆ ಕುರಿತು ಹೀಗೆ ವರದಿ ಪ್ರಸಾರವಾಗುತ್ತಿತ್ತು; "ತಲೆಗೆ ತಲೆ. ಸೇಡಿನ ಜ್ವಾಲೆ ಧಗ ಧಗ. ಪಾಕ್‌ಗೆ ತಕ್ಕ ಪಾಠ. ಭಾರತಕ್ಕೆ ಮನ್ ಕಿ ಬಾತ್, ಪಾಕಿಸ್ತಾನಕ್ಕೆ ಗನ್ ಕಿ ಬಾತ್. ಭಾರತದ ರಾಕೆಟ್ ದಾಳಿಯಲ್ಲಿ 7 ಪಾಕ್ ಯೋಧರು ಬಲಿ. ನಡೆಯಲಿದೆ 10 ದಿನಗಳ ಯುದ್ಧ..." ಇದಕ್ಕೆ ಸರಿಯಾಗಿ ತೆರೆಯ ಮೇಲೆ 'ಹಿಂದೂಸ್ತಾನ್ ವರ್ಸಸ್ ಪಾಕಿಸ್ತಾನ್' ಎಂಬ ಪದಗಳು ಬೇರೆ. ಅದೂ ಸಾಲದೆಂಬಂತೆ 'ಹಿಂದೂಸ್ತಾನ್' ಪದ ಕೇಸರಿ ಬಣ್ಣದಲ್ಲಿದ್ದರೆ, 'ಪಾಕಿಸ್ತಾನ್' ಪದ ಹಸಿರು ಬಣ್ಣದಲ್ಲಿ.

ವಾಸ್ತವಾಗಿ ಪಾಕಿಸ್ತಾನದ ಸೈನಿಕರು ಭಾರತೀಯ ಯೋಧರನ್ನು ಕೊಂದದ್ದು ನಿಜವಾದರೂ ಭಾರತೀಯ ಸೈನ್ಯ ಇಲ್ಲಿಯತನಕ ಪಾಕಿಸ್ತಾನದ ಮೇಲೆ ಪ್ರತಿ ದಾಳಿ ಮಾಡಿ ಏಳು ಪಾಕ್ ಸೈನಿಕರನ್ನು ಕೊಂದದ್ದು ಇರಲಿ, ಅಂತಹ ಯಾವ ದಾಳಿಯನ್ನೇ ಮಾಡಿಲ್ಲ. ಇದು ನಿನ್ನೆಯೇ ಸ್ಪಷ್ಟವಾಗಿದ್ದರೂ ಈ ಕನ್ನಡ ಸುದ್ದಿ ವಾಹಿನಿಯ 'ಶೂರರಿಗೆ' ಈಗಲೇ ತಲೆಗೆ ತಲೆ ತೆಗೆಯಬೇಕು, ಯುದ್ಧ ನಡೆಯಬೇಕು, ಅದು ಹಿಂದೂ ಮತ್ತು ಮುಸಲ್ಮಾನರ ನಡುವಿನ ಸಮರ ಎಂದು ಬಿಂಬಿಸಬೇಕು... ಯಾಕೆಂದರೆ ಹೀಗೆ 'ವೀರಾವೇಶದ ಸುದ್ದಿ' ಮಾಡಿದರೆ ಮಾತ್ರ ಅವರ ಟಿಆರ್‌ಪಿ ಹೆಚ್ಚಾಗುತ್ತದೆ.

ಈ ಮನೋಸ್ಥಿತಿ ನಮ್ಮ ಸ್ಥಳೀಯ ಸುದ್ದಿವಾಹಿನಿಗಳಿಗೆ ಸೀಮಿತವಾಗಿಲ್ಲ. ಇದು ಎಲ್ಲಾ ಟಿಆರ್‌ಪಿ ವ್ಯಾಮೋಹಿಂಗಳ ಮನಸ್ಥಿತಿಯಾಗಿದೆ. ಉದಾಹರಣೆಗೆ, ಪಾಕ್ ಸೈನಿಕರ ಅಮಾನವೀಯ ಕೃತ್ಯ ಹೊರಬೀಳುತ್ತಿದ್ದಂತೆ ಆಜ್‌ತಕ್ ಎಂಬ ಹಿಂದಿ ಸುದ್ದಿ ವಾಹಿನಿಯು "ಭಾರತದ ಸೇನೆ ಪ್ರತೀಕಾರದ ದಾಳಿ ಮಾಡಿದ್ದು ಪಾಕಿಸ್ತಾನದ ಎರಡು ಕಾವಲು ಠಾಣೆಗಳ ಮೇಲೆ ದಾಳಿ ಮಾಡಿ ಪಾಕಿಸ್ತಾನದ ಏಳರಿಂದ ಹತ್ತು ಸೈನಿಕರ ಬಲಿ ಪಡೆದಿದೆ" ಎಂದು ವರದಿ ಮಾಡಿತು. ಅಷ್ಟು ಸಾಲದೆಂಬಂತೆ "ಕಿರ್ಪನ್ ಮತ್ತು ಪಿಂಪಲ್ ಎಂಬ ಕಾವಲು ಠಾಣೆಗಳನ್ನು ನಾಶಪಡಿಸಲಾಗಿದೆ" ಎಂದೂ ಪ್ರಸಾರ ಮಾಡಿತ್ತು.

ಇಂತಹದ್ದೇ ಸುದ್ದಿಯನ್ನು ಇಂಡಿಯಾ ಟುಡೆ, ಝೀ ನ್ಯೂಸ್, ಎಬಿಪಿ ನ್ಯೂಸ್ ಮತ್ತು ಇಂಡಿಯಾ ಟಿವಿಗಳೂ ಪ್ರಸಾರ ಮಾಡಿದವು. ಇವನ್ನೆಲ್ಲ ಗಮನಿಸಿದ ಎಕನಾಮಿಕ್ ಟೈಮ್ಸ್ ಪತ್ರಿಕೆಯ ಪತ್ರಕರ್ತ ಮನು ಪಬ್ಬಿ ಎಂಬುವವರಿಗೆ ಅನುಮಾನ ಮೂಡಿತು. ಯಾಕೆಂದರೆ ರಕ್ಷಣಾ ಕ್ಷೇತ್ರ ಕುರಿತು ವರದಿ ಮಾಡುವ ಪಬ್ಬಿಗೆ ಕಿರ್ಪನ್ ಎಂಬಲ್ಲಿ ಇರುವ ಕಾವಲು ಠಾಣೆ ಭಾರತದ್ದೇ ಹೊರತು ಪಾಕಿಸ್ತಾನದ್ದಲ್ಲ ಎಂಬುದು ಗೊತ್ತಿತ್ತು, ಆದ್ದರಿಂದ ಭಾರತೀಯ ಸೇನೆ ಪ್ರತೀಕಾರದ ದಾಳಿ ಮಾಡಿದ್ದರ ಬಗ್ಗೆಯೇ ಅವರು ಸಂಶಯ ವ್ಯಕ್ತಪಡಿಸಿದರು.

ಪಬ್ಬಿ ಅವರು ತಮ್ಮ ಗುಮಾನಿಯನ್ನು ವ್ಯಕ್ತಪಡಿಸುತ್ತಿದ್ದಂತೆ ಇಂಡಿಯಾ ಟುಡೆ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದ ಎರಡು ಕಾವಲು ಠಾಣೆಗಳ ಹೆಸರುಗಳನ್ನು ತೆಗೆದುಹಾಕಿತೆ ಹೊರತು ಅಂತಹ ದಾಳಿ ನಡೆದಿಲ್ಲ ಎಂದು ಸ್ಪಷ್ಟಪಡಿಸಲಿಲ್ಲ.

ಭಾರತದಿಂದ ಪ್ರತೀಕಾರದ ದಾಳಿ ನಡೆಯಿತೇ, ಇಲ್ಲವೇ ಎಂದು ವಿಚಾರಿಸಿದ ಹಿಂದೂಸ್ತಾನ್ ಟೈಮ್ಸ್ ಪತ್ರಿಕೆ "ಇದೆಲ್ಲದರ ಮೂಲ ಇರುವುದೇ ಟಿವಿ ಚಾನೆಲ್‌ಗಳು ತಮಗೆ ಸಿಕ್ಕ ಮಾಹಿತಿ ಸರಿಯಾದದ್ದೋ ಇಲ್ಲವೋ ಎಂದೂ ವಿಚಾರಿಸದೆ ಪ್ರಸಾರ ಮಾಡುವುದರಿಂದ" ಎಂದು ಹೇಳಿತು. ಮಾತ್ರವಲ್ಲ, ಹಿರಿಯ ಸೈನ್ಯಾಧಿಕಾರಿಯೊಬ್ಬರನ್ನೂ ಈ ಕುರಿತು ಮಾತನಾಡಿಸಿತು. ಸೈನ್ಯಾಧಿಕಾರಿಯು "ಸೋಮವಾರ ರಾತ್ರಿ (ಮೇ 1ರಂದು) ನಮ್ಮ ಕಡೆಯಿಂದ ಕೃಷ್ಣಾಘಾಟಿ ಸೆಕ್ಟರ್‌ನಲ್ಲಿ ಯಾವುದೇ ಪ್ರತೀಕಾರದ ದಾಳಿ ನಡೆದಿಲ್ಲ. ಅವರು (ಟಿವಿ ಚಾನೆಲ್‌ನವರು) ನಮ್ಮನ್ನು ಒಂದು ಮಾತೂ ಕೇಳದೆ ಇಲ್ಲಸಲ್ಲದ್ದನ್ನು ಪ್ರಸಾರ ಮಾಡುತ್ತಾರೆ. ನಾವು ಸೇಡು ತೀರಿಸಿಕೊಳ್ಳುತ್ತೇವೆ ಮತ್ತು ಹಾಗೆ ಮಾಡಿದ ನಂತರ ಅಧಿಕೃತವಾಗಿ ಅದನ್ನು ತಿಳಿಸುತ್ತೇವೆ" ಎಂದು ಹೇಳಿದ್ದಾರೆ.

ಟಿವಿ ಚಾನೆಲ್‌ಗಳದ್ದು ಇಂತಹ ದುಸ್ಥಿತಿಯಾದರೆ ಬಿಜೆಪಿಯ ವಕ್ತಾರ ಸಂಬಿತ್ ಪಾತ್ರ ಎಂಬಾತನದ್ದು ಇನ್ನೂ ಹೇಯವಾದ ವರ್ತನೆ. ಅದೇ ಆಜ್ ತಕ್ ಟಿವಿ ವಾಹಿನಿಯಲ್ಲಿ ಪಾಕಿಸ್ತಾನದ ದಾಳಿ ಕುರಿತು ಚರ್ಚೆ ನಡೆಯುತ್ತಿತ್ತು. ಅದರಲ್ಲಿ ಪಾಕಿಸ್ತಾನದ ದಾಳಿಯಲ್ಲಿ ಹುತಾತ್ಮರಾದ ಸುಬೇದಾರ್ ಪರಮ್‌ಜಿತ್ ಸಿಂಗ್ ಅವರ ಪತ್ನಿ ಪರಮ್‌ಜಿತ್ ಕೌರ್ ಜೊತೆಗೆ ಪಾತ್ರ ಕೂಡ ಭಾಗವಹಿಸಿದ್ದರು. ಆಗ ಈ ಪಾತ್ರ ಏನೆಂದ ಗೊತ್ತೆ? ಬಿಜೆಪಿ ವಕ್ತಾರನಾದ ಪಾತ್ರನಿಗೆ ಭಾರತೀಯ ಸೇನೆ ಪ್ರತೀಕಾರದ ದಾಳಿ ಮಾಡಿಲ್ಲ ಎಂದು ಗೊತ್ತಿದ್ದರೂ ಆತ ಕೌರ್ ಅವರಿಗೆ "ಭಾರತದ ಸೇನೆ ಈಗಾಗಲೇ ಪಾಕಿಸ್ತಾನದ ಸೇನೆಯ ಮೇಲೆ ದಾಳಿ ಮಾಡಿ ಎರಡು ಕಾವಲು ಠಾಣೆಗಳನ್ನು ನಾಶಮಾಡಿದೆಯಲ್ಲದೆ ಏಳು ಜನ ಪಾಕಿಸ್ತಾನದ ಸೈನಿಕರನ್ನು ಕೊಂದು ಹಾಕಿದೆ" ಎಂದು 'ಸುಳ್ಳು' ಸಮಾಧಾನದ ಮಾತುಗಳನ್ನಾಡಿದ. ಹೋಗಲಿ, ಪಾತ್ರನಿಗೆ ಅಲ್ಲಿಯತನಕ ನಿಜವಾದ ಮಾಹಿತಿ ಸಿಕ್ಕಿರಲಿಲ್ಲ ಎಂದೇ ಭಾವಿಸಿದರೂ ಇದೇ ಪಾತ್ರ ಆ ನಂತರ ಇನ್ನೊಂದು ಸಂದರ್ಶನದಲ್ಲೂ ಇದೇ ಸುಳ್ಳನ್ನ ಮತ್ತೆ ಉಚ್ಚರಿಸಿದ.

ಮುದ್ರಣ ಮಾಧ್ಯಮಗಳೂ ಇಂತಹ ವೀರಾವೇಶದ ವರದಿಗಳಿಂದ ದೂರವೇನಿಲ್ಲ. ಇತ್ತೀಚೆಗೆ ಉತ್ತರ ಪ್ರದೇಶದ ಚುನಾವಣೆಗಳ ಹೊತ್ತಿನಲ್ಲಿ ಚುನಾವಣಾ ಆಯೋಗದ ನಿಯಮಗಳನ್ನು ಗಾಳಿಗೆ ತೂರಿ ಮುಂಚಿತವಾಗಿಯೇ ಎಕ್ಸಿಟ್ ಪೋಲ್ ಪ್ರಕಟಿಸಿ, ಆ ಮೂಲಕ ತನ್ನ ಬಿಜೆಪಿ ಪರ ನಿಲುವನ್ನು ಸಾಬೀತುಪಡಿಸಿ ತನ್ನ ಸಂಪಾದಕನ ಬಂಧನಕ್ಕೆ ಗುರಿಯಾಗಿದ್ದ 'ದೈನಿಕ್ ಜಾಗ್ರಣ್' ಎಂಬ ಹಿಂದಿ ಪತ್ರಿಕೆಯೂ ಮುಖಪುಟದಲ್ಲಿ ಇಂತಹದ್ದೇ ಸುಳ್ಳು ವರದಿಯನ್ನು ಪ್ರಕಟಿಸಿತ್ತು.

ಇನ್ನು 'ಕನ್ನಡಪ್ರಭ' ಕೂಡ ತನ್ನ ಮುಖಪುಟದ ವರದಿಯ ಎರಡನೆ ಪ್ಯಾರಾದಲ್ಲಿ "ಇದರ (ಪಾಕ್ ದಾಳಿಯ) ಬೆನ್ನಲ್ಲೇ ಭಾರತ ಕೂಡ ಸೇಡಿನ ದಾಳಿ ಆರಂಭಿಸಿದ್ದು, ಗಡಿ ಬಳಿ ಪಾಕಿಸ್ತಾನದ ಎರಡು ಬಂಕರ್‌ಗಳನ್ನು ಭಾರತ ನಾಶಪಡಿಸಿದೆ. 7 ಪಾಕಿಸ್ತಾನದ ಯೋಧರನ್ನು ಭಾರತದ ಸೇನೆ ಹತ್ಯೆ ಮಾಡಿರುವುದಾಗಿ ವರದಿಯಾಗಿದೆ. ಭಾರತ ಸರ್ಕಾರವು ಭಾರತೀಯ ಸೇನೆಗೆ ಪಾಕ್ ಮೇಲೆ ದಾಳಿ ಮಾಡಲು 'ಫ್ರೀ ಹ್ಯಾಂಡ್' (ಮುಕ್ತ ಅಧಿಕಾರ) ನೀಡಿದೆ ಎಂದು ವರದಿಗಳು ಹೇಳಿವೆ" ಎಂದಿತ್ತು.

ವಿಚಿತ್ರವೆಂದರೆ, ಮೇ 2ರ ಹೊತ್ತಿಗೆ ಹೆಚ್ಚಿನ ಮಾಧ್ಯಮಗಳಿಗೆ ಭಾರತದ ಕಡೆಯಿಂದ ಪ್ರತೀಕಾರದ ದಾಳಿ ನಡೆದಿಲ್ಲ ಎಂದು ಸ್ಪಷ್ಟವಾಗಿದ್ದು ಅವೆಲ್ಲವೂ ತಮ್ಮ ವೆಬ್‌ಸೈಟ್‌ಗಳಲ್ಲಿದ್ದ ತಪ್ಪು ಮಾಹಿತಿಯನ್ನು ತೆಗೆದು ಹಾಕಿದವಲ್ಲದೆ ಮೇ 3ರ ತಮ್ಮ ವರದಿಗಳಲ್ಲಿ ಪ್ರತೀಕಾರದ ದಾಳಿಯ ಬಗ್ಗೆ ಪ್ರಸ್ತಾಪಿಸದಿದ್ದರೂ ನಮ್ಮ ಕಡ್ಡಿ ರಂಗನ ಚಾನೆಲ್ ಮಾತ್ರ ಇವತ್ತಿಗೂ 'ತಲೆಗೆ ತಲೆ' ಎಂದು ಅರಚುತ್ತಿದೆಯಲ್ಲದೆ, ಈಗ ಭಾರತ ಮತ್ತು ಪಾಕಿಸ್ತಾನಿ ಸೈನ್ಯಗಳ ಬಲಾಬಲಗಳ ವಿವರಗಳನ್ನು ಬಿತ್ತರಿಸುತ್ತಿದೆ!

ಪಾಕಿಸ್ತಾನದ ಸೈನ್ಯ ಮಾಡಿದ್ದು ಹೇಯಕೃತ್ಯ ನಿಜ. ಭಾರತೀಯ ಸೈನಿಕರ ಮರಣವೂ ಒಂದು ದುರಂತ. ಆದರೆ ಅದನ್ನೇ ಬಂಡವಾಳ ಮಾಡಿಕೊಂಡು ತಮ್ಮ ಟಿಆರ್‌ಪಿಯನ್ನು ಹೆಚ್ಚಿಸಲು ಸುಳ್ಳು ವರದಿಗಳನ್ನು ಟಿವಿ ಚಾನೆಲ್‌ಗಳು ಪ್ರಸಾರ ಮಾಡುವ ಮೂಲಕ ಜನರನ್ನು ಅನವಶ್ಯಕವಾಗಿ ಉದ್ರೇಕಗೊಳಿಸುವುದು ಸರಿಯೇ? ಇಂತಹ ಹುಚ್ಚಾಟಗಳು ಅಂತ್ಯಗೊಳ್ಳುವುದು ಎಂದು?

* * * *

ಎಲ್ಲ ಹೀನಕೃತ್ಯಗಳ ಹಿಂದೆ ಮುಸಲ್ಮಾನರ ಕೈಗಳನ್ನೇ ಕಾಣುವ ಚೆಡ್ಡಿಗಳಿಗೆ ಮತ್ತೊಮ್ಮೆ ಮುಖಭಂಗವಾಗಿದೆ. ಆದರೇನಂತೆ ಅವರಿಗೆ ಬುದ್ಧಿ ಮಾತ್ರ ಎಂದೂ ಬರುವುದಿಲ್ಲ ಎನಿಸುತ್ತದೆ. ನೆನಪಿದೆಯೇ, 2014ರ ನವೆಂಬರ್‌ನಲ್ಲಿ ನಂದಿತಾ ಎಂಬ ಬಾಲಕಿ ತೀರ್ಥಹಳ್ಳಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಾಗ ಯಡಿಯೂರಪ್ಪ, ಶೋಭಾ ಕರಂದ್ಲಾಜೆ ಮತ್ತು ಇತರೆ ಬಿಜೆಪಿ ನಾಯಕರು ನಂದಿತಾಳ ಮೇಲೆ ಮುಸಲ್ಮಾನ ಯುವಕರು ಅತ್ಯಾಚಾರ ಎಸಗಿದ್ದರಿಂದ ಆಕೆ ಆತ್ಮಹತ್ಯೆ ಮಾಡಿಕೊಂಡಳು ಎಂದು ಚೀರಾಡಿದ್ದರು. ಈಶ್ವರಪ್ಪನಂತೂ "ಕಾಂಗ್ರೆಸ್ ಸರ್ಕಾರ ಯಾಕೆ ಅತ್ಯಾಚಾರಿಗಳನ್ನು ಬಂಧಿಸುತ್ತಿಲ್ಲ? ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಮಂತ್ರಿ ಜಾರ್ಜ್ ಅವರ ಹೆಣ್ಣುಮಕ್ಕಳ ಮೇಲೆಯೂ ಅತ್ಯಾಚಾರ ನಡೆದರೆ ಅವರಿಗೆ ಗೊತ್ತಾಗುತ್ತದೆ" ಎಂಬ ಕೀಳುಮಟ್ಟದ ಮಾತುಗಳನ್ನಾಡಿದ್ದ. ತನಿಖೆಯ ನಂತರ ನಂದಿತಾಳ ಮೇಲೆ ಅತ್ಯಾಚಾರ ನಡೆದೇ ಇಲ್ಲವೆಂದೂ, ಆಕೆ ಬೇರೆ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಂಡಳೆಂದೂ ಸ್ಪಷ್ಟವಾದರೂ ಆ ಅಮಾಯಕ ಬಾಲಕಿಯ ಮಾನ ಕಳೆದದ್ದರ ಬಗ್ಗೆ ಈ ಬಿಜೆಪಿ ನಾಯಕರನ್ನು ಕಿಂಚಿತ್ತೂ ಪಾಪ ಪ್ರಜ್ಞೆ ಕಾಡಲಿಲ್ಲ.

ಐಎಎಸ್ ಅಧಿಕಾರಿ ಡಿ.ಕೆ.ರವಿಯ ಆತ್ಮಹತ್ಯಾ ಪ್ರಕರಣದಲ್ಲೂ ಬಿಜೆಪಿ ರಾಜಕೀಯ ಲಾಭ ಪಡೆಯಲು ಯತ್ನಿಸಿತ್ತು. ರವಿಯದ್ದು ಆತ್ಮಹತ್ಯೆಯಲ್ಲ, ಬದಲಾಗಿ ಕೊಲೆ, ಅದರ ಹಿಂದೆ ಕಾಂಗ್ರೆಸ್ ನಾಯಕರ ಪಾತ್ರವಿದೆ, ರವಿಯನ್ನು ಕೊಲ್ಲಲು ದುಬೈಯಿಂದ ಮುಸಲ್ಮಾನ ಸುಪಾರಿ ಕೊಲೆಗಡುಕರು ಬಂದಿದ್ದರು ಎಂದೆಲ್ಲ ಭೂಮಿ ಆಕಾಶ ಒಂದು ಮಾಡಿದ್ದ ಚೆಡ್ಡಿ ಸಂಸದರು ದೆಹಲಿ ಸಂಸತ್ ಭವನದ ಮುಂದೆಯೂ ಪ್ರತಿಭಟಿಸಿದ್ದರು. ಆದರೆ ಕೊನೆಗೆ ಸಿಬಿಐ ತನಿಖೆ ರವಿಯದ್ದು ಆತ್ಮಹತ್ಯೆ ಎಂದಾಗ ಈ ಚೆಡ್ಡಿಗಳ ಸದ್ದೇ ಇರಲಿಲ್ಲ.

ಈಗ ಅಂತಹದ್ದೇ ಇನ್ನೊಂದು ಪ್ರಕರಣ ಬಯಲಿಗೆ ಬಂದಿದೆ. ಹೋದ ವರ್ಷ ಅಕ್ಟೋಬರ್ ತಿಂಗಳಲ್ಲಿ ಮಂಗಳೂರಿನ ಕೊಣಾಜೆ ಎಂಬಲ್ಲಿ ಕಾರ್ತಿಕ್ ರಾಜ್ ಎಂಬಾತನ ಕೊಲೆ ನಡೆದಿತ್ತು. ಕಾರ್ತಿಕ್ ಬಿಜೆಪಿ ಕಾರ್ಯಕರ್ತನ ಮಗನಾಗಿದ್ದರಿಂದ ಆತನ ಕೊಲೆಯ ಹಿಂದೆ ಮುಸಲ್ಮಾನರ ಕೈವಾಡವಿದೆ ಎಂದು ಚೆಡ್ಡಿಗಳು ಆರೋಪಿಸಿದ್ದರು. ಸಂಸದ ನಳಿನ್ ಕುಮಾರ್ ಕಟೀಲನಂತೂ "ಈ ಕೊಲೆಯ ಹಿಂದೆ ಕೇರಳದ ಭಯೋತ್ಪಾದಕರ ಕೈವಾಡ ಇದೆ. ಇದರ ತನಿಖೆಯನ್ನು ಹತ್ತು ದಿನಗಳಲ್ಲಿ ಮುಗಿಸದಿದ್ದರೆ ದಕ್ಷಿಣ ಕನ್ನಡ ಜಿಲ್ಲೆಗೇ ಬೆಂಕಿ ಹಚ್ಚುತ್ತೇವೆ" ಎಂದಿದ್ದ.

ಯಡಿಯೂರಪ್ಪ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ಇದು ಜಿಹಾದಿಗಳು ಎಸಗಿರುವ ಕೊಲೆ. ಕಾರ್ತಿಕ್ ಹಿಂದೂತ್ವವಾದಿಯಾಗಿದ್ದರಿಂದ ಆತನನ್ನು ಕೊಲ್ಲಲಾಗಿದೆ. ರುದ್ರೇಶ ಎಂಬ ಆರೆಸ್ಸೆಸ್ ಕಾರ್ಯಕರ್ತನನ್ನೂ ಕಾರ್ತಿಕ್‌ನನ್ನು ಕೊಂದಂತೆ ತಲ್ವಾರ್ ಉಪಯೋಗಿಸಿ ಕೊಲ್ಲಲಾಗಿತ್ತು. ಇಂತಹ ಕೊಲೆಗಳ ಹಿಂದೆ ಪಾಪುಲರ್ ಫ್ರಂಟ್ ಆಫ್ ಇಂಡಿಯಾ ಎಂಬ ಸಂಶಯಾಸ್ಪದ ಸಂಘಟನೆಯ ಪಾತ್ರವಿದೆ" ಎಂದು ಒಂದು ಕಣ್ಣಿನಿಂದ ಕಣ್ಣೀರು ಸುರಿಸಿದ್ದರು. ಹಾಗೆಯೇ "ಇದು ಕಾಂಗ್ರೆಸ್ ಸರ್ಕಾರದಿಂದ ಸಿಕ್ಕ ಮರ್ಡರ್ ಭಾಗ್ಯ" ಎಂದೂ ಯಡ್ಡಿ ಟ್ವೀಟ್ ಮಾಡಿದ್ದರು. ಸಿ.ಟಿ.ರವಿ ಎಂಬ ಚಾಲಾಕಿ ನಾಯಕ "ಈ ಹಿಂದೂತ್ವ ಕಾರ್ಯಕರ್ತನ ಕೊಲೆಗೆ ಗೃಹ ಸಚಿವ ರಾಜೀನಾಮೆ ಕೊಡಬೇಕು" ಎಂದು ಆಗ್ರಹಿಸಿದ್ದ.

ಆದರೀಗ, ಆರು ತಿಂಗಳ ಕಾಲ ತನಿಖೆ ಮಾಡಿದ ಮಂಗಳೂರಿನ ಪೊಲೀಸರು ಕಾರ್ತಿಕ್ ರಾಜ್ ಕೊಲೆಯ ಹಿಂದೆ ಯಾವ ಮುಸಲ್ಮಾನನೂ ಇರಲಿಲ್ಲ, ಬದಲಾಗಿ ಅದಕ್ಕೆ ಕಾರಣ ಆತನ ಸಹೋದರಿಯೇ ಎಂದು ಬಹಿರಂಗಪಡಿಸಿದ್ದಾರೆ. ಅಂದು ಮುಸಲ್ಮಾನರು, ತಲ್ವಾರು, ಪಾಪುಲರ್ ಫ್ರಂಟ್ ಆಫ್ ಇಂಡಿಯಾ, ಜಿಲ್ಲೆಗೆ ಬೆಂಕಿ ಎಂದೆಲ್ಲ ಅಬ್ಬರಿಸಿದ್ದ ಚೆಡ್ಡಿ ನಾಯಕರು ಇವತ್ತು ತುಟಿಪಿಟಿಕ್ ಎನ್ನದೆ ಸುಮ್ಮನಿದ್ದಾರೆ. ಆದರೆ ಅವರ ಮೌನ ಇನ್ನೊಂದು ಹೆಣ ಬೀಳುವ ತನಕ. ಅದು ರವಿಯಂತಹ ಐಎಎಸ್ ಅಧಿಕಾರಿ ಇರಬಹುದು, ಗಣಪತಿ ತರಹದ ಐಪಿಎಸ್ ಅಧಿಕಾರಿ ಇರಬಹುದು, ನಂದಿತಾಳಂತಹ ಅಮಾಯಕ ಬಾಲಕಿಯರಿರಬಹುದು... ಹೆಣದ ಸುತ್ತ ಕೋಮುವಾದಿ ರಾಜಕೀಯ ಮಾಡುವುದರಲ್ಲಿ ಎತ್ತಿದ ಕೈ ಆಗಿರುವ ಚೆಡ್ಡಿಗಳು ಆಗ ಮತ್ತೊಮ್ಮೆ ಗಂಟಲು ಹರಿಯುವಂತೆ ಚೀರಾಡುತ್ತಾರೆ.

ಈ ಚೆಡ್ಡಿಗಳು ಎಂತಹ ನೀಚರೆಂದರೆ ಧರ್ಮಸ್ಥಳದಲ್ಲಿ ಸೌಜನ್ಯ ಎಂಬ ಯುವತಿಯ ಮೇಲೆ ಅತ್ಯಾಚಾರ ನಡೆದು ಆಕೆಯ ಕೊಲೆಯಾದರೂ ಶೋಭಕ್ಕ ಪ್ರತಿಭಟಿಸುವುದಿಲ್ಲ. ರಘುಪತಿ ಭಟ್ಟನ ಹೆಂಡತಿ ಪದ್ಮಪ್ರಿಯಾ ಸಂಶಯಾಸ್ಪದವಾಗಿ ಸತ್ತರೂ ಸಿ.ಟಿ.ರವಿ ಚಕಾರವೆತ್ತುವುದಿಲ್ಲ. ಅಷ್ಟೆಲ್ಲ ಯಾಕೆ, ನಿನ್ನೆ ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಮಹಂತೇಶ್ ಕವಟಗಿಮಟ್ ಎಂಬಾತ 50ಕ್ಕೂ ಹೆಚ್ಚು ನಗ್ನ ಹುಡುಗಿಯರ ಫೋಟೋಗಳನ್ನು ವಾಟ್ಸ್‌ಆಪ್ ಗುಂಪಿಗೆ ಅಪ್ ಲೋಡ್ ಮಾಡಿ ಆ ಚಿತ್ರಗಳಿಗೆ 'ಹಾಲಿನ ಡೈರಿ' ಎಂಬ ಶೀರ್ಷಿಕೆಯನ್ನು ಇಟ್ಟರೆ ಈಶ್ವರಪ್ಪ ತುಟಿಪಿಟಿಕ್ ಎನ್ನುವುದಿಲ್ಲ.

ಇಂತಹ ದಗಲುಬಾಜಿಗಳು ಮತ್ತೆ ಅಧಿಕಾರಕ್ಕೆ ಬರಬೇಕಂತೆ, ಕರ್ನಾಟಕವನ್ನು ರಾಮರಾಜ್ಯ ಮಾಡಬೇಕಂತೆ, ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕಂತೆ, ಮಹಿಳೆಯರಿಗೆ ರಕ್ಷಣೆ ಕೊಡಬೇಕಂತೆ. ಅಂತಹ ದುರ್ದಿನ ನಮ್ಮ ರಾಜ್ಯಕ್ಕೆ ಬಾರದಿರಲಿ ಎಂದು ಆಶಿಸೋಣ.

(ಇಲ್ಲಿರುವ ಎರಡೂ ಟಿಪ್ಪಣಿಗಳಿಗೆ ಹಲವು ಮಾಹಿತಿಗಳನ್ನು ಪ್ರತೀಕ್ ಸಿನ್ಹಾ ಅವರ 'ಆಲ್ಟ್ ನ್ಯೂಸ್' ವೆಬ್ ಸೈಟಿನಿಂದ ತೆಗೆದುಕೊಳ್ಳಲಾಗಿದೆ)



B.S. Yeddyurappa
@BSYBJP

Visited the family of murdered Hindu Karyakarta Sh.Karthik.Raj at Mangaluru to offer condolences.
#MurderBhagya by Congress govt



Following

C.T.Ravi
@CTRavi_BJP


I strongly condemn the murder of Hindu Activist Karthik near Mangaluru. Demand @CMofKarnataka to sack incompetent State HM Parameshwara

BJP Karnataka ITCell
@BJPKarITCell


One more activist from Konaje Mangaluru Shri Karthik Raj was killed by Jihadi forces. @BJP4Karnataka condemns same & Shri @BSYBJP statement:

ದಕ್ಷಿಣ ಕನ್ನಡ:

ಹಿಂದೂ ಡಾನ್ ವಿಕ್ಕಿ ಶೆಟ್ಟಿ ಜನಪರ ಜಲೀಲನ ಬಲಿ ಪಡೆದನೇಕೆ?!


ಜಲೀಲ್ ಕರೋಪಾಡಿ


ಡೆಡ್‌ಬಾಡಿ ಫೋಟೋ


ಐಜಿಪಿ ಹರಿಶೇಖರನ್


ಅದು ಹಿಂದೂತ್ವದ ಬಲಿಪೀಠದಂತಾಗಿರುವ ದಕ್ಷಿಣ ಕನ್ನಡದ ಕರೋಪಾಡಿ ಎಂಬ ಪುಟ್ಟ ಹಳ್ಳಿ; ಆತ ಎಲ್ಲ ಜಾತಿ-ಧರ್ಮದ ಎಲ್ಲೆ ಮೀರಿ ಜನರ ಪ್ರೀತಿ-ವಿಶ್ವಾಸ ಗಳಿಸಿದ್ದ ಸಾಬರ ಪೋರ. ಜನಪರ ತುಡಿತ-ಮಿಡಿತ-ನ್ಯಾಯ ನಿಷ್ಠುರತೆ-ಸಾಮಾಜಿಕ ಬದ್ಧತೆಯ ಎ. ಅಬ್ದುಲ್ ಜಲೀಲ್ ಜನನಾಯಕನಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದಾತ. ಹುಟ್ಟಿನಿಂದ ಸಾಬಿಯಾದರೂ ಆತನೆಂದರೆ ಹಿಂದೂ ಸಂಘಟನೆಯ ಜಗಳಗಂಟರಿಗೂ ಅಚ್ಚು-ಮೆಚ್ಚು. ಸ್ಥಳೀಯ ಒಡಿಯೂರು ಸ್ವಾಮಿ ಕಂಡಕಂಡಲ್ಲಿ ಜಲೀಲನ ಕೊಂಡಾಡುತ್ತಿದ್ದರು.

ಇಂಥ ಒಳ್ಳೆಯ ಮನುಷ್ಯನನ್ನೂ ಕೊಂದು ತಿನ್ನುವ ಬರ್ಬರ-ಹೀನ ನರ ರಕ್ಕಸರು ಇರುತ್ತಾರಾ ಎಂಬ ಚರ್ಚೆ ಕಳೆದ ಏಪ್ರಿಲ್ 20ರಂದು ದಕ್ಷಿಣ ಕನ್ನಡದಲ್ಲಿ ಶುರುವಾಗಿದ್ದು ಇವತ್ತಿಗೂ ನಿಂತಿಲ್ಲ! ಊರಿಗೆ ಏನೇ ಅನ್ಯಾಯವಾಗಲಿ ಅಲ್ಲಿ ಎದೆಯೊಡ್ಡಿ ನಿಂತು ಹೋರಾಡುತ್ತಿದ್ದ ನಿಷ್ಪಾಪಿ ಜಲೀಲನನ್ನು ಮಚ್ಚಿನಿಂದ ಕೊಚ್ಚಿ ಖತಮ್ ಮಾಡಲಾಗಿತ್ತು!! ಆ ದಿನ ಇಡೀ ವಿಟ್ಲ ಪರಿಸರದ ಮನೆ-ಮನೆಯಲ್ಲೂ ದುಃಖ ಮಡುಗಟ್ಟಿತ್ತು, ಇಂಥ ಅಜಾತಶತ್ರುವನ್ನು ಆಹುತಿ ಪಡೆಯಲು ಇದ್ದ ಕಾರಣವಾದರೂ ಏನು? ಆತನ ಜೀವ ತೆಗೆದವರು ಅದೆಂಥ ಪಾಪಿಗಳಿರಬಹುದು? ಯಾರಿಗೂ ಎಂದೂ ಕೇಡು ಬಯಸದ ಪರೋಪಕಾರಿ ಪಾಪಣ್ಣನಂತಿದ್ದ ಜಲೀಲನ ಕೊಲ್ಲಲು ಮನಸ್ಸಾದರೂ ಹೇಗೆ ಬಂತು? ಜನಸಾಮಾನ್ಯರಷ್ಟೇ ತಲೆ ಕೆಡಿಸಿಕೊಂಡ ದಕ್ಷಿಣ ಕನ್ನಡದ ಪೊಲೀಸರು ಹಂತಕರ ಬೇಟೆಗೆ ಇಳಿದಿದ್ದರು.

ಐದಾರು ಅನುಮಾನಗಳ ಸುತ್ತ ಹತ್ತಾರು ಟೀಮುಗಳನ್ನು ಕಟ್ಟಿಕೊಂಡು ತನಿಖೆ ಮಾಡಿದ ಐಜಿಪಿ ಹರಿಶೇಖರನ್ ಬಳಗ ಈಗೊಂದು ಕರಾರುವಾಕ್ಕಾದ ತೀರ್ಮಾನಕ್ಕೆ ಬಂದಿದೆ. ವಿದೇಶದಲ್ಲಿ ತಲೆ ಮರೆಸಿಕೊಂಡು ಕರಾವಳಿಯ ಹಿಂದೂತ್ವದ ಭೂಗತ ಲೋಕದ ದೊರೆಯಾಗಲು ಹವಣಿಸುತ್ತಿರುವ ವಿಕ್ಕಿ ಶೆಟ್ಟಿ ಯಾನೆ ವಿಕ್ರಮ್ ಶೆಟ್ಟಿ ಉರುಫ್ ಬಾಲಕೃಷ್ಣ ಶೆಟ್ಟಿಯೇ ಕಂಟ್ರಿ ಪಾಲಿಟಿಕ್ಸ್‌ನ ತೆವಲಿಗೆ ಬಿದ್ದು ಜಲೀಲನ ಬಲಿ ಪಡೆದಿದ್ದಾನೆಂದು ಪೊಲೀಸರು ಪಕ್ಕ ಮಾಡಿಕೊಂಡಿದ್ದಾರೆ. ಆತನ ಬರೋಬ್ಬರಿ ಹನ್ನೊಂದು ಹಿಂಬಾಲಕರ ಹೆಡೆಮುರಿ ಕಟ್ಟಿ ಕಾರಾಗೃಹಕ್ಕೆ ತುಂಬಿದ್ದಾರೆ!!

ಜಲೀಲ್ ಜೀವನದ ಗ್ರಾಫು

ಬಂಟ್ವಾಳ ತಾಲ್ಲೂಕು ಪಂಚಾಯ್ತಿಯ ಜನಪ್ರಿಯ ಸದಸ್ಯ ಹಾಜಿ ಎ. ಉಸ್ಮಾನ್ ಸಾಹೇಬರ ಮಗ ಜಲೀಲ್‌ಗಿನ್ನೂ


ಉಸ್ಮಾನ್ ಕರೋಪಾಡಿ

42 ವರ್ಷದ ಪ್ರಾಯವಾಗಿತ್ತು. ನಿವೃತ್ತ ಬ್ಯಾಂಕ್ ಅಧಿಕಾರಿಯೊಬ್ಬರ ಮಗಳನ್ನು ಮದುವೆಯಾಗಿದ್ದ ಆತ ಮೂರು ಪುಟ್ಟ ಮಕ್ಕಳ ತಂದೆಯಾಗಿದ್ದರು. ತಂದೆಯ ದಾರಿಯಲ್ಲೇ ರಾಜಕಾರಣ ಶುರು ಮಾಡಿದ್ದ ಜಲೀಲ್ ಕರೋಪಾಡಿ-ವಿಟ್ಲದ ಸುತ್ತಮುತ್ತಲಲ್ಲಿ ಬೇರುಮಟ್ಟದ ಸಂಪರ್ಕ ಸಾಧಿಸಿದ್ದರು. ಆರಂಭದಲ್ಲಿ ಅಪ್ಪ-ಮಗ ಜನತಾದಳದಲ್ಲಿದ್ದರು. ಆ ನಂತರ ಬಂಟ್ವಾಳ ಶಾಸಕ ಕಂ ಮಂತ್ರಿ ರಮಾನಾಥ ರೈಗಳ ಕಾಂಗ್ರೆಸ್ ತಂಡ ಸೇರಿದ್ದರು. ಈ ಅಪ್ಪ-ಮಗನ ಜೋಡಿಯ ಜನ ಬಳಕೆ ಕಂಡೇ ದಂಗಾಗಿದ್ದರು ರೈಗಳು.

ದಿನದ ಬಹಳ ಸಮಯ ಸಾರ್ವಜನಿಕ ಕೆಲಸ-ಕಾರ್ಯ-ಕಾಮಗಾರಿಗಾಗಿಯೇ ವ್ಯಯಿಸುತ್ತಿದ್ದ ಜಲೀಲ್ ತನ್ನ ಹುಡುಕಿಕೊಂಡು ಬಂದವರಿಗೆಂದೂ ಮೋಸ-ವಂಚನೆ ಮಾಡುತ್ತಿರಲಿಲ್ಲ, ಹೀಗಾಗಿ ಆತ ಕರೋಪಾಡಿ ಗ್ರಾಮ ಪಂಚಾಯ್ತಿ ಚುನಾವಣೆಗೆ ನಿಂತಾಗ ಧರ್ಮದ ಮುಖ ನೋಡದೇ ಜನರು ಈ ಸಾಬಿಯ ಕ್ರಿಯಾಶೀಲತೆ-ಪ್ರಾಮಾಣಿಕತೆ-ಬದ್ಧತೆಗೆ ಓಟು ಕೊಟ್ಟು ಪ್ರಚಂಡ ಬಹುಮತದಿಂದ ಗೆಲ್ಲಿಸಿಕೊಂಡಿದ್ದರು. ಸದಸ್ಯನಾದ ಹೊಸದರಲ್ಲೇ ಈತ ಗ್ರಾಪಂ ಅಧ್ಯಕ್ಷನಾಗಿಯೂ ಬಿಟ್ಟಿದ್ದರು. ಇದರಲ್ಲಿ ಆತನ ತಂದೆ ಹಿರಿಯ ರಾಜಕಾರಣಿ ಉಸ್ಮಾನ್ ಕರೋಪಾಡಿಯ ಪ್ರಭಾವ-ಪ್ರತಿಷ್ಠೆಯೂ ಕೆಲಸ ಮಾಡಿತ್ತು, 2015ರ ಗ್ರಾಪಂ ಚುನಾವಣೆಯಲ್ಲೂ ಗೆದ್ದು ಬಂದ ಜಲೀಲ್ ಮೀಸಲಾತಿ ನಿಯಮದಿಂದಾಗಿ ಮತ್ತೆ ಅಧ್ಯಕ್ಷನಾಗಲು ಆಗಲಿಲ್ಲ, ಆದರೆ ಉಪಾಧ್ಯಕ್ಷನಾಗಿ ಆತ ಆಯ್ಕೆಯಾಗಿದ್ದ.

ಈ ಉಪಾಧ್ಯಕ್ಷತೆ ಪೈಪೋಟಿಯಲ್ಲಿ ದಿನೇಶ್ ಶೆಟ್ಟಿ ಎಂಬಾತ ಜಲೀಲ್‌ಗೆ ಸೆಡ್ಡು ಹೊಡೆದು ಪಲ್ಟಿಯಾಗಿದ್ದ. ಭೂಗತ ಲೋಕದ ಬೆದರಿಕೆ ಅಸ್ತ್ರ ಬಳಸಿದರೂ ಗೆಲ್ಲಲಾಗದ ಈ ದಿನೇಶ್ ಶೆಟ್ಟಿ ಅವಮಾನಿತನಾಗಿದ್ದ ಜಲೀಲ್‌ನ ಕಂಡರೆ ಬುಸುಗುಡುತ್ತಿದ್ದ. ದಿನೇಶ್ ಊರಿಗೆ ಮಾರಿಯಂಥ ಪುಂಡ. ಮರಳು-ಟಿಂಬರ್-ಗಾಂಜಾ-ಬಡ್ಡಿ- ನಿಧಿ ಶೋಧದಂಥ ನಾನಾ ನಮೂನಿಯ ಮಾಫಿಯಾದ ನಂಟು ದಿನೇಶ್‌ಗಿತ್ತು, ಆದರೆ ಇಂಥ ಅಕ್ರಮ-ಅನ್ಯಾಯ-ಅವಾಂತರ ಜಲೀಲ್ ಕಂಡಲ್ಲಿ ವಿರೋಧಿಸುತ್ತಿದ್ದ, ಇದು ಹಗೆಯಾಗಿ ಹೊಗೆಯಾಡುತ್ತಿತ್ತು.

ಊರಲ್ಲಿ ಎಷ್ಟು ಉತ್ಸಾಹದಿಂದ ಜಲೀಲ್ ಕೆಲಸ ಮಾಡುತ್ತಿದ್ದರೋ ಅಷ್ಟೇ ನಿಷ್ಠೆಯಿಂದ ಕಾಂಗ್ರೆಸ್ ಸಂಘಟನೆಯಲ್ಲಿ ತೊಡಗಿಕೊಂಡಿದ್ದರು. ಯುವ ಕಾಂಗ್ರೆಸ್‌ನ ಪದಾಧಿಕಾರಿಯಾಗಿದ್ದ ಜಲೀಲ್ ಹಲವು ಧಾರ್ಮಿಕ-ಸಾಮಾಜಿಕ ಚಟುವಟಿಕೆಯಲ್ಲೂ ಭಾಗವಹಿಸುತ್ತ ಬಂದಿದ್ದರು. ತಮಿಳುನಾಡಿನಲ್ಲಿ ನಡೆದ ಯುವ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ವೀಕ್ಷಕನಾಗಿದ್ದ ಈತ ಹಿಂದೂಗಳ ಉತ್ಸವ-ಹಬ್ಬ-ಪೂಜೆಗಳಲ್ಲೂ ಮುಂಚೂಣಿಯಲ್ಲಿ ನಿಲ್ಲುತ್ತಿದ್ದರು. ಒಡಿಯೂರು ಮಠದ ಗ್ರಾಮವಿಕಾಸ ಯೋಜನೆಯಲ್ಲಿ ಸಕ್ರಿಯವಾಗಿದ್ದರು. ಕರೋಪಾಡಿಯ ಹಿಂದೂಗಳ ಶ್ರದ್ಧೆಯ ಜಲದುರ್ಗಾ ಪರಮೇಶ್ವರಿ ದೇವಸ್ಥಾನದ ಸುಧರ್ಮ ಸಭೆಯಲ್ಲಿ ಜಲೀಲ್ ಇದ್ದೇ ಇರುತ್ತಿದ್ದರು. ಇದು ರಾಜಕೀಯ ಸ್ಟಂಟ್ ಆಗಿರಲಿಲ್ಲ, ಆತನ ಅಸಲೀ ಮಾನವೀಯ-ಸ್ನೇಹಪರ ವ್ಯಕ್ತಿತ್ವವೇ ಅಂಥದ್ದಾಗಿತ್ತು.

ಡಾಕೂಗಳ ಕೆಂಗಣ್ಣು

ಜಲೀಲ್ ಎಂದೂ ಸ್ವಾರ್ಥಕ್ಕಾಗಿ ಇಲ್ಲವೇ ಒಣಪ್ರತಿಷ್ಠೆಗಾಗಿ ಅಥವಾ ರಾಜಕೀಯದ ತೆವಲಿಗಾಗಿ ಯಾರನ್ನೂ ವಿರೋಧಿಸಿದವರಲ್ಲ, ಊರಿಗೆ ತೊಂದರೆ ಕೊಡುವವರು ಅದೆಷ್ಟೇ ಪಾತಕಿಗಳೂ-ಕ್ರೌರ್ಯದ ವಿಷಜಂತುಗಳಾದರೂ ಕೇರ್ ಮಾಡುತ್ತಿರಲಿಲ್ಲ, ಹೀಗಾಗಿ ಈ ಸಜ್ಜನ ತನಗೆ ಗೊತ್ತಿಲ್ಲದಂತೆಯೇ ದೋ ನಂಬರ್ ದಂಧೆ ದುಷ್ಟರು, ಕ್ರಿಮಿನಲ್‌ಗಳನ್ನು ಎದುರು ಹಾಕಿಕೊಂಡಿದ್ದರು. ಇದು ಊರಿನವರಿಗೂ ಗೊತ್ತಿರಲಿಲ್ಲ, ಜಲೀಲಣ್ಣ ಜನರ ಒಳಿತಿಗಾಗಿ ಕೆಲಸ ಮಾಡುತ್ತಿರುವುದರಿಂದ ಆತನ ಉಸಾಬರಿಗೆ ಯಾರೂ ಬರಲಾರರೆಂದೇ ಮಂದಿ ನಂಬಿದ್ದರು.

ಎಲ್ಲರೊಂದಿಗೆ ಯಾವುದೇ ಹಮ್ಮು-ಬಿಮ್ಮು ಇಲ್ಲದೆ ಒಡನಾಡುತ್ತಿದ್ದ ಜಲೀಲ್ ಟಿಂಬರ್, ಮರಳು, ಗಾಂಜಾ, ಬಡ್ಡಿ ಮತ್ತು ನಿಧಿ ಶೋಧ ದಂಧೆದಾರರ ಬುಡಕ್ಕೇ ಕೈಹಾಕಿದ್ದರು. ಇವರು ಊರು ಕೆಡಿಸುತ್ತಾರೆಂಬ ನಂಬಿಕೆ ಆತನದಾಗಿತ್ತು, ಕಳ್ಳ ಕಟ್ಟಿಗೆ ಬಿಸ್ನೆಸ್‌ದಾರರ ವಿರುದ್ಧ ಅರಣ್ಯ-ಪೊಲೀಸ್ ಇಲಾಖೆಗೆ ಆತ ಆಗಾಗ ತಿಳಿಸುತ್ತಿದ್ದರಂತೆ! ಕಳ್ಳ ಮರಳು ವಹಿವಾಟಿಗೆ ಆಸ್ಪದ ಕೊಡುತ್ತಿರಲಿಲ್ಲ, ಗಾಂಜಾ ಜಾಲದ ಬೆನ್ನಿಗೆ ಬಿದ್ದು ರಿಸ್ಕ್ ತೆಗೆದುಕೊಂಡಿದ್ದರು. ಜಲೀಲ್ ಹತ್ಯೆಯಾಗುವ ಎರಡು ತಿಂಗಳ ಹಿಂದೆ ಕರೋಪಾಡಿಯ ಮನೆಯೊಂದರಲ್ಲಿ ನಿಧಿ ಶೋಧದ ಭಾನಗಡಿ ಆಗಿತ್ತು. ಮನೆಯ ಯಜಮಾನನನ್ನೇ ಕಟ್ಟಿ ಹಾಕಿ ನಿಧಿಗಾಗಿ ಅಗೆದು ಹುಡುಕಾಡಿದ್ದರು. ನಿಧಿ ರೌಡಿಗಳು ಯಾರ ಕೈಗೂ ಸಿಗದೇ ಪರಾರಿಯಾಗಿದ್ದರು. ಈ ತಂಡದ ಜಾತಕ ಪೊಲೀಸರಿಗೆ ಕೊಟ್ಟದ್ದೇ ಜಲೀಲಾಗಿತ್ತು,

ಈ ದ್ವೇಷ ನಿಧಿಶೋಧಕರಲ್ಲಿತ್ತು. ಜಲೀಲ್ ಕೊಲೆಯಾಗುವ ಮೂರು ದಿನ ಮೊದಲಷ್ಟೇ ಈ ಪಾಪಿಷ್ಟರು ಜಾಮೀನು ಪಡೆದು ಹೊರಬಂದಿದ್ದರು. ಇಂಥದ್ದೇ ಸಮಾಜ ವಿರೋಧಿ ಕುಕೃತ್ಯಕ್ಕೆ ಹೆಂಡದ ವ್ಯಾಪಾರಿಯೊಬ್ಬ ಕೈಹಾಕಿದಾಗಲೂ ಜಲೀಲ ಸಿಡಿದೆದ್ದರು. ಬಾರ್ ಮತ್ತು ರೆಸ್ಟೋರೆಂಟ್ ತೆರೆಯಲು ಖದೀಮನೊಬ್ಬ ನೆಲ-ಮುಗಿಲು ಒಂದು ಮಾಡಿ ಹಾರಾಡತೊಡಗಿದ್ದ, ಪ್ರಭಾವಿ ರಾಜಕಾರಣಿಗಳೂ

ಹಿಂದೂತ್ವ ಸುಪಾರಿ

ಬಂಟ್ವಾಳದ ವಿಟ್ಲ ಪರಿಸರದಲ್ಲಿ ರಾಜಕೀಯ ಮತ್ತು ಸಾಮಾಜಿಕವಾಗಿ ದಿನ ಕಳೆದಂತೆ ಜನಪ್ರಿಯತೆ ಜಾಸ್ತಿ ಮಾಡಿಕೊಳ್ಳುತ್ತ ಸಾಗಿದ್ದ ಜಲೀಲ್ ಕರೋಪಾಡಿ ಮೇಲೊಂದು ಅಸೂಯೆ -ಅಸಹನೆಯ ಕಣ್ಣು ನೆಟ್ಟಿತ್ತು ಸಂಘ ಪರಿವಾರ! ಈ ಸಾಬರ ಪೋರ ಹೀಗೆ ಧರ್ಮಾತೀತನಾಗಿ ಬೆಳೆಯುತ್ತಲಿದ್ದರೆ ಹಿಂದೂತ್ವದ ಹಿಡನ್ ಅಜೆಂಡಾಕ್ಕದು ಗಂಡಾಂತರಕಾರಿ ಎಂದು ಲೆಕ್ಕಾಚಾರ ಚೆಡ್ಡಿ ಸೈತಾನರು ಹಾಕಿದ್ದರು. ಸ್ಥಳೀಯ ಒಡಿಯೂರು ಮಠದ ಸ್ವಾಮಿಯಂಥವರೂ ಜಲೀಲ್‌ನ ಹತ್ತಿರ ಇಟ್ಟುಕೊಂಡಿದ್ದರು. ಸಂಘಿಗಳು ಅದೆಷ್ಟೇ ಜಲೀಲ್ ಹಿಂದೂ ವಿರೋಧಿಯೆಂದು ಅಪಪ್ರಚಾರ ನಡೆಸಿದರೂ ಪ್ರಯೋಜನವಾಗಿರಲಿಲ್ಲ.

ವಿಟ್ಲ-ಕರೋಪಾಡಿ ಸುತ್ತ-ಮುತ್ತ ಗಾಂಜಾ-ಮರಳು-ಟಿಂಬರ್-ನಿಧಿ ಶೋಧ-ಬಡ್ಡಿ ದಂಧೆ ಮಾಡುತ್ತ ಕೊಬ್ಬಿ ಹೋದವರಲ್ಲಿ ಸ್ವಯಂಘೋಷಿತ ದೇಶಭಕ್ತ ಚೆಡ್ಡಿ ಸಂತಾನದವರೇ ಹೆಚ್ಚಿದ್ದರು. ಇಂಥ ಅಕ್ರಮ-ಅನ್ಯಾಯದ ದಂಧೆಕೋರರ ವಿರುದ್ಧ ತಿರುಗಿ ಬಿದ್ದಿದ್ದರು ಜಲೀಲ್. ಊರಿಗೆ ತೊಂದರೆ ಆಗುವ ಕೆಲಸ ಯಾರು ಮಾಡಿದರೂ ಆತ ಸಹಿಸುತ್ತಿರಲಿಲ್ಲ; ಇದರಲ್ಲಿ ಜಾತಿ-ಧರ್ಮ ಆತ ಬೆರೆಸದೇ ನಿಜವಾದ ಜನಪರ ರಾಜಕಾರಣ-ಸಾಮಾಜಿಕ ಹೊಣೆಗಾರಿಕೆ ನಿಭಾಯಿಸುತ್ತಿದ್ದರು. ಜಲೀಲ್‌ನ ಸಾಮಾಜಿಕ ಬದ್ಧತೆಯಿಂದ ಹೆಚ್ಚು ಕಿರಿಕಿರಿಗೆ ಒಳಗಾಗಿದ್ದು ಸಂಘಿ ಸೈತಾನರು.

ಕರೋಪಾಡಿ ಗ್ರಾಮ ಪಂಚಾಯ್ತಿಯ ಬಿಜೆಪಿ ಸದಸ್ಯ ದಿನೇಶ್ ಶೆಟ್ಟಿ ಉಪಾಧ್ಯಕ್ಷತೆಗೆ ಜಲೀಲ್ ಎದುರು ಸ್ಪರ್ಧಿಸಿ ಸೋತಾಗಿಂದ ಭಜರಂಗಿ-ಹಿಂಜಾವೇ ಫಂಟರ್‌ಗಳ ಗ್ಯಾಂಗು ಕಟ್ಟಿ ರಹಸ್ಯ- ವ್ಯವಸ್ಥಿತವಾಗಿ ಅಖಾಡಕ್ಕೆ ಇಳಿದಿದ್ದ. ಜಲೀಲ್‌ನ ನಿಷ್ಠುರ ನ್ಯಾಯವಂತಿಕೆಯಿಂದ ತೊಂದರೆಗೆ ಸಿಲುಕಿದ್ದ ಭಜರಂಗಿ-ಚೆಡ್ಡಿ ದೋ ನಂಬರ್ ದಂಧೆದಾರರಿಗೆ ಆತನ ಮೇಲಿದ್ದ ಆಕ್ರೋಶ-ದ್ವೇಷ ದಿನೇಶ್ ಶೆಟ್ಟಿ ಚೆನ್ನಾಗಿ ಬಳಸಿಕೊಂಡಿದ್ದಾನೆ. ತನ್ನ ದೊಡ್ಡಪ್ಪನ ಮಗನಾದ ಭೂಗತ ಪಾತಕಿ ವಿಕ್ಕಿ ಶೆಟ್ಟಿಯ ರೌಡಿ ಶಕ್ತಿಯನ್ನು ಪ್ರಯೋಗಿಸಿದ್ದಾನೆ.

ರಾಜೇಶ್ ನಾಯಕ್, ನರಸಿಂಹ, ಸತೀಶ್ ಶೆಟ್ಟಿಯಂಥ ಲಫಡಾ ಬಾಜಿಗಳನ್ನು ವಿಕ್ಕಿ ಶೆಟ್ಟಿಯೊಂದಿಗೆ ಬೆಸೆದಿದ್ದಾನೆ. ಹಿಂದೂತ್ವದ ಡಾನ್ ತಾನೆಂಬ ಧಠಿಯಲ್ಲಿ ಆರ್ಭಟಿಸುವ ವಿಕ್ಕಿ ಶೆಟ್ಟಿಗೂ ಜಲೀಲನ ರಕ್ತದಾಹ ಶುರುವಾಗಿತ್ತು, ಈಗ ಪೊಲೀಸರು ಬಂಧಿಸಿರುವ ಹನ್ನೊಂದು ಹಂತಕರ ಪಡೆಯಲ್ಲಿರುವ ಬಹುತೇಕರು ಹಿಂದೂತ್ವ ಪುಂಡರು ಎಂಬುದು ಪಕ್ಕಾ ಆಗಿದೆ. ಇದೊಂದೇ ಸಾಕು, ಜಲೀಲನ ಬಲಿ ಪಡೆದಿರುವುದು ಕೇಸರಿ ಮಾಫಿಯಾ ಎಂಬುದಕ್ಕೆ!! ಕರಾವಳಿಯಲ್ಲಿ ರಾಜಕೀಯ ಮೈಲೇಜಿಗಾಗಿ ಸಂಘ ಪರಿವಾರ ಮಾಡುತ್ತಿರುವ ಪಾತಕಕ್ಕೆ ಕೊನೆಯುಂಟಾ?


ಹಂತಕರ ತಂಡ

ಈತನ ಹಿಂದಿದ್ದರು. ಆದರೆ ಗ್ರಾಪಂ ಉಪಾಧ್ಯಕ್ಷ ಜಲೀಲ್ ಬಾರ್‌ಗೆ ನಿರಾಕ್ಷೇಪಣಾ ಪತ್ರ ಸಿಗ ಮಾಡಿದ್ದರು. ಹೆಂಡದ ದಂಧೆದಾರನಿಗೆ ಭೂಗತದ ಟಾಕ್ಷವಿದ್ದರೆ, ಜಲೀಲ್‌ಗೆ ಒಡಿಯೂರು ಸ್ವಾಮಿ ಪ್ರೇರಣೆಯಿತ್ತು.

ಈಗ ಸುಮಾರು ಒಂದು ವರ್ಷದ ಹಿಂದೆ ಮೀ ಬಡ್ಡಿ ಫೈನಾನ್ಸ್ ದೊರೆಯ ಬಾಲಕ್ಕೆ ಜಲೀಲ್ ಇಟ್ಟಿದ್ದರು. ಈ ಫೈನಾನ್ಸ್ ಘಟಿಂಗ ಬಡವರಿಗೆ ಮೀ ಬಡ್ಡಿಯ ಲೆಕ್ಕದಲ್ಲಿ ಸಾಲದ ಶೂಲ ಕೊಡುತ್ತಿದ್ದ. ಬಡ್ಡಿ ತೀರಿಸಲಾಗದವರ ಮೇಲೆ ದಾಳಿ ಮಾಡು ಕೈಗೆ ಸಿಕ್ಕಷ್ಟು ದರೋಡೆ ಮಾಡಿ ಮಾನಸಿಕ ಹಿಂಸೆ ಮಾಡುತ್ತಿದ್ದ. ಆಗ ಜನರನ್ನು ಜಮೆ ಮಾಡಿಕೊಂಡು ಸುಲಿಗೆ ಫೈನಾನ್ಸ್‌ಗೆ ಮುತ್ತಿಗೆ ಹಾಕಿದ್ದ ಜಲೀಲ್. ಫೈನಾ ಬೀಗ ಜಡಿದು ಬಂದ್ ಮಾಡಿಸಿದ್ದ. ಈತನೇ ಆ ಅಕ್ರಮ ಬಾರ್ ಅಂಡ್ ರೆಸ್ಟೋರೆಂಟ್‌ಗೆ ತಿಪ್ಪ ಹಾಕಿದ್ದ ಮಹನೀಯ. ಎರಡೆರಡು ಮುಖಭಂಗ ಜರ್ಜರಿತನಾಗಿದ್ದ ಆತನ ಕೆಂಗಣ್ಣು ಜಲೀಲ್ ಮೇಲೆ ಬಿ ಜಲೀಲ್ ಹತನಾಗುವ ಎರಡೇ ಎರಡು ದಿನ ಮೊ ಕೊಲೆ ಬೆದರಿಕೆಯೂ ಬಂದಿತ್ತು.

ಭೂಗತ ಪಾತಕಿ ವಿಕ್ಕಿ ಎಂಟ್ರಿ

ತಾನು ತನಗಾಗಿ ಯಾರಿಗೂ ಕೇಡು ಬಗ ಯಾರಿಗಾದರೂ ತೊಂದರೆ ಆಗಿದ್ದರೆ ಅದು ಒಳಿತಿಗಾಗಿ ಎಂಬ ಹುಂಬ ಧೈರ್ಯದಲ್ಲಿ ರಾತ್ರಿ ಹ ಎನ್ನದೆ ಜನರಿಗಾಗಿ ದುಡಿಯುತ್ತಲೇ ಇದ್ದರು ಜ ಸಾಹೇಬ್! 2015ರಲ್ಲಿ ಸಣ್ಣದೊಂದು ರಾಜಕೀಯ ಮಾನದ ಕಿರಿಕ್ ಆಗಿತ್ತಲ್ಲ; ಅದೂ ಗಂಡಾಂತ ಆಗಬಹುದೆಂದು ಜಲೀಲ್ ಮತ್ತವನ ಕುಟುಂಬದವ ಪೊಲೀಸರಾಗಲಿ ಭಾವಿಸಿರಲಿಲ್ಲ, ಅಂದು ಉಪ ಸ್ಥಾನಕ್ಕಾಗಿ ನಡೆದ ಜಿದ್ದಾಜಿದ್ದಿಯಲ್ಲಿ ದಿನಕರ ಶೆಟ್ಟಿ ಎಂ ಜಲೀಲ್ ಮುಖಾಮುಖಿಯಾಗಿ ನಿಂತಿದ್ದ, ಆದರೆ ಅ ಮೆಂಬರ್‌ಗಳ ಬೆಂಬಲ ಇರಲಿಲ್ಲ, ಆದರೂ ತ ಜೋರಾಗಿತ್ತು ದಿನಕರ ಶೆಟ್ಟಿಗೆ. ತನಗೆ ಈ ಬಾರಿ ಉ ಪಟ್ಟ ಬಿಟ್ಟುಕೊಡುವಂತೆ ಆತ ಜಲೀಲ್‌ಗೆ ಧಮಕಿ ಹಾಕಿದ್ದ, ಆದರೆ ಸದಸ್ಯರು ಆ ಅಧಿಕ ಪ್ರಸಂಗಿಗೆ ಕೊಡಲು ಸಿದ್ಧರಾಗಲಿಲ್ಲ,

ಈ ದಿನಕರ ಶೆಟ್ಟಿಯ ತಲೆಬುರುಡೆ ಜನರೋದ್ಧಾರದ ಚಿಂತನೆ ತಿಲ ಮಾತ್ರವೂ ಇಲ್ಲ, ರಾಜ ಅಧಿಕಾರ ಒಣಗತ್ತಿನ ಸಂಕೇತ ಎಂಬ ನಂಬಿಕೆಯ ದಿ ಶೆಟ್ಟಿಗೆ ಭೂಗತ ಲೋಕದ ರಕ್ತಸಂಬಂಧವಿತ್ತು, ಅ ಪ್ರಯೋಗಿಸಿಯಾದರೂ ಜಲೀಲನ ಬದಿಗೆ ಸರಿಸುತ್ತೇ ಆತ ಹಠಕ್ಕೆ ಬಿದ್ದಿದ್ದ. ವಿದೇಶದಲ್ಲಿರುವ ವಿಕ್ರಮ್ ಯಾನೆ ವಿಕ್ಕಿ ಶೆಟ್ಟಿಯ ತಂದೆ ಮತ್ತು ಸದ್ರಿ ದಿ ಶೆಟ್ಟಿಯ ತಂದೆ ಅಣ್ಣತಮ್ಮಂದಿರು. ಚಿಕ್ಕಪ್ಪನ ಮ ಕರೋಪಾಡಿಯ ಗ್ರಾಮಪಂಚಾಯ್ತಿ ಉಪಾಧ್ಯಕ್ಷ ಪೀ ಪ್ರತಿಷ್ಠಾಪಿಸಿ ತನ್ನ ತಾಕತ್ತು ತೋರಿಸುವ ಸ್ಕೆಚ್ ವಿಕ್ಕಿ ಹೆಣೆದಿದ್ದ ಸಾಬಿಯಾದ ಜಲೀಲನ ಬೆದರಿಸಿ ಹಿಮ್ಮೆಟ್ಟಿ ಹಿಂದೂ ಡಾನ್ ಎಂಬ ಪ್ರಭಾವಳಿ ಬರುತ್ತದೆಂಬ ಧ ಯೋಚನೆ ವಿಕ್ಕಿಯದಾಗಿತ್ತು,

ಜಲೀಲ್‌ಗೆ ಫೋನಾಯಿಸಿದ್ದ ವಿಕ್ಕಿ ಶೆಟ್ಟಿ "ಈ ಸುಮ್ಮನೆ ದಿನೇಶ್‌ಗೆ ಉಪಾಧ್ಯಕ್ಷ ಪಟ್ಟ ಬಿಟ್ಟುಕೊ ನೀನು ಸ್ಪರ್ಧೆಗೆ ಇಳಿಬೇಡ.... ದಿನೇಶ್‌ಗೆ ಟಕ್ಕರ್ ಕೆ ನಿನಗೆ ಖತ್ರಾ ಖಂಡಿತ..." ಎಂದು ಅಬ್ಬರಿಸಿದ್ದ. ಜಲೀಲ್ ಅದನ್ನು ಅಷ್ಟು ಸಿರಿಯಸ್ ಆಗಿ ಪರಿಗಣಿ ಸದಸ್ಯರೆಲ್ಲ ಒಮ್ಮತದಿಂದ ಜನರಿಗಾಗಿ ಬೆವರಿ ಜಲೀಲನೇ ಬೇಕೆಂದು ನಿರ್ಣಯಿಸಿ ಗೆಲ್ಲಿಸಿದ್ದರು. ಮುಖಭಂಗಿತನಾದ ಭೂಗತ ಕ್ರಿಮಿ ವಿಕ್ಕಿ ಶೆಟ್ಟಿ ಜಲೀ ತಲೆ ತೆಗೆಯುವ ಆವಾಜ್ ಹಾಕಿದ್ದ!!

ಗೊಂದಲದಲ್ಲಿ ಪೊಲೀಸರು

ಟಿಂಬರ್ ಮಾಫಿಯಾ, ಗಾಂಜಾ ಜಾಲ, ನಿಧಿ ಗ್ಯಾಂಗ್, ಕಳ್ಳ ಮರಳು ದಂಧೆಕೋರರು, ಬಡ್ಡಿ ಪುಂ ಬಾರ್ ಅಂಡ್ ರೆಸ್ಟೋರೆಂಟ್ ಪರವಾನಗಿ ವಿವಾದ ಅಂಡರ್‌ವರ್ಲ್ಡ್ ಡಾನ್-ಡಾಕೂ ವಿಕ್ಕಿ ಶೆಟ್ಟಿಯ ದೊ

ಈಶ್ವರಪ್ಪ ಎಡೂರಪ್ಪನಿಗೆ ಮಾಟ ಮಾಡಿಸಿದ್ದನಂತೆ!

ಜಯರಾಮನ ಅಂಗಡಿ ಮುಂಧೆ ಹಾಸಿದ್ದ ...ಬೆಂಚಿನ ಕಲ್ಲು ಶತಮಾನ ಕಳೆದಿದ್ದವು. ಮನೆ ಮುಂದಿದ್ದ ...ಗಳನ್ನ ಕಿತ್ತು ತಂದು ಅಂಗಡಿ ಮುಂದಕ್ಕೆ ಹಾಕಿಕೊಂಡಿದ್ದ ...ದಾನೊಂದು ಕಾಲದಲ್ಲಿ ಆ ಹಲಗೆಯಂತಹ ಕಲ್ಲು ...ಡಿ ಮೇಲೆ ವತ್ತಾರೆ ಎದ್ದ ರೈತ ಮಕ್ಕಳು ದನಗಳಿಗೆ ...ಳದ ಕಡ್ಡಿ ತಿನ್ನಿಸಿದ್ದರು. ಉಳ್ಳಿ ನುಚ್ಚು ತಿನ್ನಿಸಿದ್ದರು. ...ಲು ಹೊತ್ತಿನಲ್ಲಿ ಹೆಂಗಸರು ಮಂಗಗಳಂತೆ ಕುಳಿತು ... ಹೇನು ಸೋಸಿದ್ದರು. ಸೀರಣಿಗೆಯಿಂದ ಸೀರು ...ಚಿದ್ದರು. ಸೊಪ್ಪು ಸೋಸಿದ್ದರು. ಮತ್ತೆ ಸಂಜೆಯಾದನಂತರ ...ಲ್ಲಿ ಕುಳಿತ ಗಂಡಸರು ಅಡಿಗೆಯಾಗುವವರೆಗೆ ರೈತಾಪಿ ...ಬು, ರಾಜಕಾರಣ, ಸಿನಿಮಾ, ನಾಟಕದ ವಿಷಯ ...ತನಾಡಿದ್ದರು. ಅಂತಹ ಇತಿಹಾಸ ಹೊಂದಿದ್ದ ಕಲ್ಲುಗಳನ್ನು ...ನೆ ಮುಂದಿಂದ ಕಿತ್ತು ತಂದು ಜಯರಾಮ ಅಂಗಡಿ ...ಂದಿನ ಬೆಂಚು ಮಾಡಿದ್ದ ಹೊತ್ತುಟ್ಟುವಾಗಿನ ತಂಪನೆಯ ...ಯದಲ್ಲಿ ಜಮಾಯಿಸಿದ ಕಾಳಮಾವನ ಪರಿವಾರಕ್ಕೆ ...ಗ್ರಿ ಈ ಹಿಂದೆ ಊರಲ್ಲಿ ನಡೆದುಹೋದ ಹಳೆ ...ಯದಂತ ಸಮಾಚಾರವನ್ನು ಹೊತ್ತು ತಂದ.

"ಈಶ್ವರಪ್ಪ ನಾವು ಅಪ್ಪುಂಗುಟ್ಟಿದ್ದಿವಿ ಅಂದವುನೆ. ...ದಕೇನೇಳ್ತಿ ಮಾವ?" ಎಂದ.

"ಅದ್ಯಾಕಂಗಂದಾ?"

"ಎಡೂರಪ್ಪನಿಗೂ ಅವುನಿಗೂ ಹರಿಯಮುರಿಯ ಜಗಳ ...ದ್ದದೆ. ಜಗಳ ಆಡತ ಅಂತ ಮಾತಂದವುನೆ."

"ಎಡೂರಪ್ಪೇನೋ ಅಂದಿರಬೇಕು ಕಂಡ್ಯ" ಎಂದಳು ...ಮ್ಮಿ.

"ಅವುನೇನು ಅಂದಿಲ್ಲ ಕಣೆ. ಇವುನೆ ಅಂಗಂದವುನೆ."

"ಅಲ್ಲ ಕಂಡ್ಯ, ನೀನು ಅಪ್ಪನಿಗುಟ್ಟಿದ್ದಿಯಾ ಅಂತ ...ವನಾರ ಬೋದ್ರೆ ಅಂತ ಮಾತನ್ನಬಹುದು. ಸುಮ್ಮನೆ ...ದವುನೆ ಅಂದ್ರೆ ಎದುರಾಳಿ ಹುಟ್ಟಿಲ್ಲ ಅಂತ ಅಣಕ ...ದಂಗಾಯ್ತದೆ. ಇಂತ ಮಾತ ಏಟು ಕೇಳಿಲ್ಲ ನಾವು" ...ದ ಕಾಳಮಾವ.

"ಅವುರ‍್ಯಾಕ್ ಜಗಳ ಆಡಿದ್ರೂ? ಅಂಗೆ ಜೊತೆ ಹಾಕಿದ ...ತ್ತಿದಂಗಿದ್ರಲ್ಲ ಉಗ್ರಿ" ಎಂದ ಸೀರ.

"ಬಿಜೆಪಿ ಪಾರ್ಟಿಯಿಂದ ಜೊತೆಲಿದ್ರು ಕಣೊ. ...ವುರ‍್ಯಾವತ್ತೂ ಜ್ವತಿಯಾಗಿರಲಿಲ್ಲ. ವಳೊಳಗೆ ಜಾತಿ ...ಗಳನೂ ಇತ್ತು."

"ಅವುರ‍್ಯಾವ ಜಾತಿಲ?"

"ಎಡೂರಪ್ಪ ಬೂಕನಕೆರೆ ಗಾಣಿಗ ಲಿಂಗಾಯತರೋನು. ...ಶ್ವರಪ್ಪ ಬಳ್ಳಾರಿ ಕಡೆ ಕುರುಬರೋನು. ಇಬ್ರು ...ವಮೊಗ್ಗಕ್ಕೋಗಿ ಜಾತಿಜಗಳ ಆಡ್ತ ಅವುರೆ ಅಂದ್ರೇ ಈ ...ಳು ಜಾತಿಗಿನ್ನೇನು ಸಗತಿ ಇದ್ದತೂ ಅಂತ."

"ಬಿಜೆಪಿಲಿದ್ರೂ ಜಾತಿಜಗಳ ಬುಟ್ಟಿಲ್ಲವೆ?"

"ಬಿಜೆಪಿಲೆ ಜಾಸ್ತಿ ಜಾತಿಜಗಳ ಚಿಗಪ್ಪ. ಅದೇನು ಸೋಷಲಿಸ್ಟ್ ಪಾರ್ಟಿನೆ" ಎಂದುಕೊಂಡು ವಾಟಿಸ್ಸೆ ಬಂದ.

"ಈಶ್ವರಪ್ಪ ಎಡೂರಪ್ಪನ ಜಗಳ ಅದೇನು ಹೇಳ್ಳ ವಾಟಿಸ್ಸೆ" ಎಂದಳು ಜುಮ್ಮಿ.

"ಆ ಜಗಳ ಬಹಳ ಹಿಂದಿನಿಂದ ಇದ್ದದ್ದೆ ಕಣಕ್ಕ. ನೇರಾನೇರ ಬೀದಿಗೆ ಬಂದಿದ್ದು ಈಗ."

"ಎಡೂರಪ್ಪನ್ನ ಅವುನು ಅಪ್ಪನಿಗುಟ್ಟಿಲ್ಲ ಅಂದನಂತೆ ನಿಜವೆ?"

"ನಿಜ ಕಣಕ್ಕ. ಇಲ್ಲಿ ಈಶ್ವರಪ್ಪನ ಅಪ್ಪ ಅವ್ವ ಅಂದ್ರೆ



ಬಿಜೆಪಿ. ಆ ಪಾರ್ಟಿಗುಟ್ಟಿರೂ ನಾನು ಅಲ್ಲೇ ಇದ್ದಿನಿ. ನೀನು ಪಾರ್ಟಿ ಬುಟ್ಟು ಹೋಗಿ ಕೆಜೆಪಿ ಅಂತ ಮಾಡಿಕಂಡು ತಿರುಗ ಬಂದೆ ಅಂದ್ರೆ ನೀನು ಅಪ್ಪನಿಗುಟ್ಟಿಲ್ಲ, ನಾನು ಹುಟ್ಟಿದ್ದಿನಿ, ಅದ್ಕೆ ಇಲ್ಲೆ ಇದ್ದಿನಿ ಅಂತ ಈಶ್ವರನ ವಳ ಮಾತು."

"ಓಹೊಹೊ. ಬಾಳ ತೂಕವಾಗೆ ಮಾತಾಡ್ಯವುನೆ ಬುಡು" ಎಂದ ಕಾಳಮಾವ.

"ತೂಕವಾದ್ದಲ್ಲ ದೊಡಪ್ಪ. ಬಾಳ ಮಾರ್ಮಿಕವಾಗಿ ಮಾತಾಡ್ಯವುನೆ. ಅಂದ್ರೆ ಎಡೂರಪ್ಪನ ಮರ್ಮಕ್ಕೆ ತಾಗೋತರ ಮಾತಾಡ್ಯವುನೆ. ಅದ್ಕೆ ಜಗಳ ಹತ್ತಿಗಂಡಿರೋದು."

"ಭಾಳ ಹಿಂದೆ ಜನತಾ ಪಾರ್ಟಿ ಜನ ಹಿಂಗೆ ಜಗಳಾಡೋರು."

"ಊ ಕಣೋ ಉಗ್ರಿ. ಇವುರ ಜಗಳ ನೋಡಿದ್ರೆ ಹೆಗಡೆ, ದ್ಯಾವೇಗೌಡನ ಜಗಳ ನ್ಯನಪಿಗೆ ಬತ್ತದೆ. ಆದ್ರೆ ಅವುರು ಡೀಸೆಂಟಾಗಿ ಮಾತು ಬಳಸೋರು. ಇವುರಂಗೆ ಅವರವ್ವದೀರನ್ನ ತಂದು ಬೀದಿಗೆ ನಿಲ್ಲುಸ್ತಿರಲಿಲ್ಲ."

"ಏನೇ ಆಗ್ಲಿ ರಾಜಕಾರಣಿನ ಜಗಳದಲ್ಲಿ ಇಂತ ಮಾತ ಬಳಸಬಾರ್ದು ಕಂಡ್ಯ. ಹಿಂಗೆ ಮಾತಾಡ್ತರೆ ಅಂದ್ರೆ ಇವುರ‍್ಯಂತ ಜನ ಅಂತೀನಿ."


"ಬಿಜೆಪಿಗಳ ಮಾತು ಅಂಗೆ ಅಲವ ದೊಡಪ್ಪ. ಆ ಶೋಭ ಕರಂದ್ಲಾಜೆ ಅಂತ ಅವುಳೆ. ಅವುಳು ಮೋದಿ ಒಂದು ಕೂದ್ಲಿಗೆ ಜಮವ್ಹೊಟಿಲ್ಲ ಈ ಸಿದ್ದರಾಮಯ್ಯ ಅಂದ್ಲು. ಇನ್ನ ಎಡೂರಪ್ಪ ಸಿದ್ದರಾಮಯ್ಯನ್ನ ಅಯೋಗ್ಯ ಅಂದ. ಈಶ್ವರಪ್ಪನಂತೂ ಹಾಯೋ ದನಿನಂಗೆ ಯಾರು ಕಂಡ್ರೂ ಕೋಡು ಮುಂದಾಗೇ ಹೋಗೋನು. ಸಾಬರ ಕೈ ಕಡಿಬೇಕು, ಗಂಟ್ಲು ಸೀಳಬೇಕು ಅನ್ನೋನು. ಅಂತ ಮನುಸ ಈಗ ಬಿಜೆಪಿ ಲೀಡ್ರುಮ್ಯಾಲೆ ಬಿದ್ದವುನೆ ಅವುನು. ಅವುರಿವುರಿಗೆ ಬೋದಾಗ ಕುಶಿಪಡತಿದ್ದ ಬಿಜೆಪಿಗಳಿಗೆ ಈಶ್ವರಪ್ಪನ ತಿರುಮಂತ್ರ ತಡಕಳಕ್ಕಾಯ್ತಾಯಿಲ್ಲ."

"ಈಶ್ವರಪ್ಪ ಹಿಂಗೆ ಮಾತಾಡದ್ರ ಹಿಂದೆ ಬ್ರಾಂಬ್ರುವುರಂತಲ್ಲಾ?"

"ಅವುರಿರದ್ರಿಂದ್ಲೆ ಅವುನ ನಾಲಗೆ ಶಾರಪಾಗಿರದು."

"ಅವುರಾಕ್ ಜಗಳ ಹಚ್ಚಿದ್ದರೂ?"

"ಯಾಕೆ ಅಂದ್ರೇ ಇವುರಿಬ್ರು ಜಗಳ ಜಾಸ್ತಿಯಾದಾಗ ಕೋತಿ ಕಜ್ಜಾಯದ ನ್ಯಾಯ ಆಯ್ತದೆ. ಆಗ ಬಿಜೆಪಿ ಬ್ರಾಂಬ್ರು ಪೈಕಿ ಅದೂ ಉಡುಪಿ ಕಡಿಯೋನು ಮುಖ್ಯ ಮಂತ್ರಿಯಾದನಂತೆ. ಅದ್ಕೆ ಅವುರ‍್ಯಲ್ಲ ಮರೆಲಿ ನಿಂತಗಂಡು ಈಶ್ವರಪ್ಪನಿಗೆ ಬುಡಬ್ಯಾಡ ಎಡೂರಪ್ಪನ ಕೆಣಕು ಅಂತ ಹೇಳಿಕೊಡ್ತಾಯಿದ್ದರಂತೆ. ಅದ್ಕೆ ಈಶ್ವರಪ್ಪ ಅಂಗೆ ಬೈತಾಯಿರದು."



ಕಟ್ಟೆಪುರಾಣ

ಬಿ.ಚಂದ್ರೇಗೌಡ

"ಅಂಗರೀಜಗಳ ಈಗ್ಲೆ ನಿಲ್ಲದಿಲ್ಲ ಬುಡು" ಎಂದ ಕಾಳಮಾವ.

"ನಿಂತ್ರೂ ವಳಗೇ ಕ್ಯಲಸ ಮಾಡ್ತದೆ ದೊಡಪ್ಪ. ಈಶ್ವರಪ್ಪ ಈಗಾಗ್ಲೆ ಒಂದ್ಸಲ್ಲಿ ಮುಂದಕೋಗಿ ಎಡೂರಪ್ಪನಿಗೆ ಮಾಟ ಮಾಡಿಸಿದ್ದನಂತೆ."

"ಮಾಟಲ್ಲ ಕಣೊ, ಯಾಗ ಮಾಡಿಸಿದ್ದನಂತೆ."

"ಯಜ್ಞ ಯಾಗ ಯಾಕೆ ಮಾಡ್ತರೊ ಉಗ್ರಿ? ಅದರಲ್ಲೂ ಈಶ್ವರಪ್ಪ ಮಾಡಿಸಿರೊ ಯಾಗ ಶತ್ರುನಾಶದ್ದಂತೆ. ಏನಂಗಂದ್ರೆ? ಯಾರು ಶತ್ರು? ಎಡೂರಪ್ಪ ತಾನೆ. ನಾನೀ ಯಜ್ಞಯಾಗನ್ನಲ್ಲ ಮಾಟ ಅಂತೀನಿ. ಅದರಲ್ಲೂ ಮತ್ತೂರ ಬ್ರಾಂಬ್ರು ಮಾಡಿದ್ರು ಅಂದ್ರೆ ನೀನು ಲೈಟಾಗಿ ತಗಳಂಗಿಲ್ಲ."

"ಅಂತೂ ಇವುರ ಜಗಳ ಮಾಟಾ ಮಾಡೋ ಮಟ್ಟಕ್ಕೆ ಹೋಯ್ತು ಅನ್ನು" ಎಂದ ಕಾಳಮಾವ.

"ಊ ದೊಡಪ್ಪ, ಎಡೂರಪ್ಪ ಅವುನ್ಯಲ್ಲ ನಂಬದಿದ್ರೆ ಸರಿ. ನಂಬೋದೆ ಆದ್ರೆ ಹೆದರಬೇಕಾಯ್ತದೆ. ತಿರುಗಿ ತಾನು ಏನಾರ ಮಾಡಬೇಕಾಯ್ತದೆ."

"ಇವುನಿಗೇನೊ ಮತ್ತೂರ ಮಾಟದ ಬ್ರಾಂಬ್ರವುರೆ. ಎಡೂರಪ್ಪನ ಕಡೆ ಯಾರಿದ್ದರು?" ಎಂದಳು ಜುಮ್ಮಿ.

"ಅವುನ ಕಡೆ ಐನಾತಿ ಗಿರಾಕಿನೆ ಅವುನೆ ಕಣಕ್ಕ. ರಾಮಚಂದ್ರಾಪುರದ ಮಠದ ಸ್ವಾಮಿಗೆ ಎಡೂರಪ್ಪ ಅಂದ್ರೆ ಭಾಳಾ ಇಷ್ಟವಂತೆ. ಅವುನು ಎಡೂರಪ್ಪನಂಗೆ ತೋಳಬಲದ ಜನ ಮಡಗಿದ್ದನಂತೆ. ಅವುನೀಗ ಎಡೂರಪ್ಪನ್ನ ಆತುಗೊಂಡನಂತೆ."

"ಅಂಗರೆ ಈಶ್ವರಪ್ಪನ ಮಾಟಕೆ ಅವುನು ಜವಾಬು ಕೊಡಬೇಕಾಯ್ತದೆ."

"ಊ ದೊಡಪ್ಪ ಅಂತೂ ನಮ್ಮ ಪುರಾಣದಲ್ಲಿ ರಾಕ್ಷಸರ ಸಂಹಾರಕ್ಕೆ ದೇವತೆಗಳು ಯಜ್ಞ ಯಾಗ ಅನ್ನೋ ಬೆಂಕಿ ಮಾಟ ಮಾಡತಿದ್ರು. ಈಗ ಈಶ್ವರಪ್ಪ ಎಡೂರಪ್ಪನ ನಿರ್ನಾಮಕ್ಕೆ ಸರ್ಪಯಾಗ ಮಾಡಿಸ್ಯವುನೆ. ಅದೇನು ಮಾಡ್ತದೊ ನೋಡಬೇಕು."

"ಅದೇನು ಮಾಡ್ತದೊ, ಬ್ರಾಂಬ್ರಿಗೆ ಅನುಕೂಲ ಮಾಡ್ತದೆ ಅಷ್ಟೆಯ."

"ಕರೆಟ್ಟಾಗಿ ಹೇಳಿದೆ ಕಣೊ ಉಗ್ರಿ. ಇವುರಿಬ್ರ ಜಗಳದಿಂದ ಅನುಕೂಲಾಗದು ಬ್ರಾಂಬ್ರಿಗೆ. ಅದರಲ್ಲೂ ಮರೆಲಿ ನಿಂತಗಂಡು ಜಗಳ ನೋಡ್ತಯಿರೊ ಉಡುಪಿ ಸಂತೋಷ್‌ಜಿ ಅನ್ನೋನು ನಿಜವಾದ ಫಲಾನುಭವಿ ಆಗಬಹುದು."

"!?" ■

4 ⏮

...ಗನ ರಾಜಕೀಯ ದ್ವೇಷಾಸೂಯೆಗಳನ್ನು ಇಟ್ಟುಕೊಂಡು ...ಲೀಸರು ತಲೆ ಬಿಸಿ ಮಾಡಿಕೊಂಡಿದ್ದೇ ಮಾಡಿಕೊಂಡಿದ್ದು. ...ಕ್ಷಾತ್ ಡಿಜಿಪಿ ಹರಿಶೇಖರನ್ ಸಾಹೇಬರೇ ...ಲ್ದಿಗಿಳಿದರು. ಹಲವು ತಂಡಗಳ ರಚಿಸಿ ಒಂದೊಂದು ...ರಣದ ಹಿಂದೆ ಬಿದ್ದರು. ತನಿಖೆ ನಡೆದಂತೆ ಸಿಕ್ಕುಸಿಕ್ಕಾಯ್ತು ...ತ್ಯ ಪ್ರಸಂಗ. ಪೊಲೀಸರು ಕನ್‌ಫ್ಯೂಸ್‌ಗೆ ಬಿದ್ದರು.

... ಖತರ್‌ನಾಕ್ ನಿಧಿಶೋಧದ ಗ್ಯಾಂಗೇ ಜಲೀಲನ ...ಂದು ಹಾಕಿದೆ ಎಂಬುದು ಸಾರ್ವಜನಿಕರ ...ರ್ಚೆಯಾಗಿತ್ತು. ಮೊದಮೊದಲು ಖಾಕಿಗಳ ಖದರೂ ... ಕಳ್ಳರ ಸುತ್ತಲೇ ಗಿರಕಿ ಹೊಡೆಯಿತು. ಆದರೆ ಜಲೀಲನ ...ದೆಯದು ಒಂದೇ ಹಠ. ಲೋಕಲ್ ಮಾಫಿಯಾಗಳಿಗೆ ... ಮಗನ ತಲೆ ತೆಗೆಯುವಷ್ಟು ಧೈರ್ಯವಿರಲು ಸಾಧ್ಯವೇ ...ಲ್ಲ. ಅದೇನಿದ್ದರೂ ಭೂಗತ ಪಾತಕಿಯ ಕೈವಾಡದ ...ಲೆ. ಹಾಗಂತ ಉಸ್ಮಾನ್ ಸಾಹೇಬರು ಹೇಳುತ್ತಲೇ ...ದ್ದರು. ಸ್ಥಳೀಯರ ಸಹಕಾರವಿಲ್ಲದೆ ವಿಕ್ಕಿ ಶೆಟ್ಟಿಯಿಂದ ...ಲೀಲನ ತಂಟೆಗೆ ಹೋಗಲು ಸಾಧ್ಯವಿಲ್ಲ ಎಂಬುದು ...ಲೀಸರ ತರ್ಕವಾಗಿತ್ತು.

...ಮ ಪಂಚಾಯ್ತಿಯಲ್ಲೇ ನೆತ್ತರೋಕುಳಿ

ಅಂತಿಮವಾಗಿ ಪೊಲೀಸರ ತನಿಖೆ ಎಂಬುದು ...ಡರ್‌ವರ್ಲ್ಡ್‌ನ ಮೇಲೆ ಕೇಂದ್ರೀಕೃತವಾಯ್ತು! ದಿನೇಶ್ ... ಗ್ರಾಪಂ ಉಪಾಧ್ಯಕ್ಷತೆ ಸ್ಥಾನಕ್ಕೆ ಸ್ಪರ್ಧಿಸಿ ಮಕಾಡೆ ...ದ್ದ ಘಟನೆಯೇ ಜಲೀಲನ ಬಲಿಗೆ ಹೇತುವಾಗಿದೆ ...ಬುದು ಖುದ್ದು ಡಿಜಿಪಿ ಹರಿಶೇಖರರಿಗೆ ಖಾತ್ರಿಯಾಯ್ತು. ...4-2017ರಂದು ಕರೋಪಾಡಿ ಗ್ರಾಮ ಪಂಚಾಯ್ತಿಯ ...ನ್ನಲಿನ ಚಟುವಟಿಕೆ-ಸಾಂದರ್ಭಿಕ ಘಟನಾವಳಿಗಳೆಲ್ಲ ...ಪಾಧ್ಯಕ್ಷತೆಗೆ ನಿಂತು ಬಿದ್ದ ದಿನೇಶ್ ಶೆಟ್ಟಿಯ ಮೇಲೆ ...ವಮಾನ ಮೂಡಿಸುವಂತಿತ್ತು. ಅಂದು ಗ್ರಾಪಂನ ಜನರಲ್ ...ಡಿ ಮೀಟಿಂಗ್ ಇತ್ತು. ಅಂದು ಅಧ್ಯಕ್ಷೆ ಬೇಬಿ ಶೆಟ್ಟಿ ...ತ್ತು ಪಂಚಾಯ್ತಿದ ಅಷ್ಟೂ ಆಗು-ಹೋಗು ಗೊತ್ತಿರುವ ...ಭವಿ ಉಪಾಧ್ಯಕ್ಷ ಜಲೀಲ್ ಕರೋಪಾಡಿ ಬಂದೇ ...ತ್ತಾನೆಂಬುದು ದಿನೇಶ್‌ಗೆ ಗೊತ್ತಿತ್ತು.

ಆತ ಆಗಾಗ ದಾಯಾದಿ ಅಣ್ಣ ವಿಕ್ಕಿ ಶೆಟ್ಟಿಗೆ ಫೋನು ಮಾಡಿ ಜಲೀಲ್ ಅಡಿಗಡಿಗೆ ತನಗೆ ಅವಮಾನಿಸುತ್ತಾನೆ. ತಾನು ಹೇಳಿದ ಒಂದೇ ಒಂದು ಕೆಲಸ-ಪರವಾನಗಿ-ಕಾಮಗಾರಿ ಆಗಲು ಬಿಡುತ್ತಿಲ್ಲ ಎಂದು ದೂರುತ್ತಲೇ ಇದ್ದ. ಇದರಿಂದ ಡಾನ್ ವಿಕ್ಕಿ ಶೆಟ್ಟಿ ಕುದ್ದುಹೋಗಿದ್ದ. ಜಲೀಲನ ಮುಗಿಸುವ ಸೇಡಿಗೆ ಆತ ಬಿದ್ದಿದ್ದ. 20-4-17 ರಂದು ಆತ ಮುಹೂರ್ತ ಫಿಕ್ಸ್ ಮಾಡಿಕೊಂಡಿದ್ದ. ಅಂದು ಗ್ರಾಪಂ ಮೀಟಿಂಗ್ ಇರುವುದರಿಂದ ಬೇಟೆ ಸಿಕ್ಕೇ ಸಿಗುತ್ತದೆಂದು ಸಹೋದರ ದಿನೇಶ್ ಶೆಟ್ಟಿಯಿಂದ ಪಕ್ಕಾ ಮಾಡಿಕೊಂಡಿದ್ದ.

ವಿಕ್ಕಿ ಶೆಟ್ಟಿ ತನ್ನ ಬಲಿಗೆ ಸ್ಥಳೀಯ ವಿಟ್ಲ ಪೊಲೀಸ್ ಠಾಣೆಯ ರೌಡಿ ಶೀಟರ್-ಮಿತ್ತಡ್ಕದ ರಾಜೇಶ್ ನಾಯಕ ಎಂಬಾತನ ತಯಾರು ಮಾಡಿದ್ದಾನೆ. ಕೊಲೆ ಕಾರ್ಯಾಚರಣೆ ರೂವಾರಿಯೇ ಈ ರಾಜೇಶ್ ನಾಯಕ. ಈತನಿಗೆ ಜಲೀಲ್‌ನ ಕಂಡರಾಗುತ್ತಿರಲಿಲ್ಲ. ರಾಜೇಶ್ ನಾಯಕ ಕನ್ಯಾನದಲ್ಲಿ ಹೆಸರಿಗೊಂದು ಶಾಮಿಯಾನ ಅಂಗಡಿ ನಡೆಸುತ್ತ ಅರಣ್ಯ ಲೂಟಿಯಲ್ಲಿ ನಿರತನಾಗಿದ್ದ. ಒಮ್ಮೆ ಈತನ ಟಿಂಬರ್ ಕಳ್ಳ ದಂಧೆ ಬಗ್ಗೆ ಜಲೀಲ್ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರು. 2016ರ ಡಿಸೆಂಬರ್ 17ರಂದು ಮಿತ್ತಡ್ಕದಲ್ಲಿ ನಡೆದ ಹಲ್ಲೆ ಪ್ರಕರಣದಲ್ಲಿ ರಾಜೇಶ್ ಫಿಕ್ಸ್ ಆಗಿದ್ದ. ತನ್ನ ಮೇಲೆ ಹಲ್ಲೆ ಹಾಗು ಜಾತಿನಿಂದನೆ ಕೇಸು ಬೀಳಲು ಜಲೀಲನ ಕಾರಸ್ಥಾನವೇ ಕಾರಣ ಎಂಬ ಆಕ್ರೋಶ ರಾಜೇಶ್‌ನಲ್ಲಿ ಮಡುಗಟ್ಟಿತ್ತು. ಇದನ್ನು ದಿನೇಶ್‌ನಿಂದ ತಿಳಿದುಕೊಂಡಿದ್ದ ವಿಕ್ಕಿ ಶೆಟ್ಟಿ ನೇರಾನೇರ ರಾಜೇಶ ನಾಯಕನ ಜತೆಗೇ ಸುಪಾರಿ ಡೀಲ್ ಕುದುರಿಸಿದ್ದಾನೆ.

ರಾಜೇಶ್ ನಾಯಕ್ ತನ್ನ ಪುಂಡ ಪಟಾಲಮ್ಮಿನ ನರಸಿಂಹ ಶೆಟ್ಟಿ ಮತ್ತು ಸತೀಶ್ ರೈ ಜತೆ ಸೇರಿ ಜಲೀಲ್‌ನ ಆಹುತಿ ಪಡೆಯುವ ಪ್ಲಾನು ಹಾಕಿದ್ದಾನೆ. ಗ್ರಾಮ ಪಂಚಾಯ್ತಿಯಲ್ಲೇ ಹೆಚ್ಚುಹೊತ್ತು ಕುಳಿತು ಜನರ ಸಮಸ್ಯೆಗೆ ಸ್ಪಂದಿಸುತ್ತಿದ್ದ ಜಲೀಲ್ ಸುಲಭವಾಗಿ ಅಲ್ಲಿ ಸಿಗುತ್ತಾನೆಂಬುದು ರಾಜೇಶ್‌ನ ಗ್ಯಾಂಗಿನ ಲೆಕ್ಕಾಚಾರ ಸುಳ್ಳಾಗಲಿಲ್ಲ. ಆತನ ಕೊಲೆಗೆ ರೆಡಿಯಾಗಿ ಪಲ್ಸರ್ ಬೈಕಲ್ಲಿ ತಲವಾರು ಹಿಡಿದು ಹೊರಟಾಗ ಗ್ರಾಮ ಪಂಚಾಯ್ತಿಯಲ್ಲಿ ಮೀಟಿಂಗ್ ಇನ್ನೂ ಮುಗಿದಿರಲಿಲ್ಲ. ಮೀಟಿಂಗ್ ಮುಗಿಯುವುದನ್ನೇ ಕಾದಿದ್ದ ರಾಜೇಶ್‌ನ ಹಂತಕ ಪಡೆ ಹೊರಗೇ ಸುತ್ತಾಡಿಕೊಂಡಿತ್ತು. ಸುಮಾರು 11.30ರ ಹೊತ್ತಿಗೆ ನೇರವಾಗಿ ಇಬ್ಬರು ತಲವಾರು ಹಿಡಿದು ಉಪಾಧ್ಯಕ್ಷನ ಕೊಠಡಿಗೆ ನುಗ್ಗಲು ನೋಡಿದ್ದಾರೆ.

ಅಲ್ಲಿದ್ದ ಪಿಡಿಓ ಮತ್ತೊಬ್ಬ ಸಿಬ್ಬಂದಿ ಅಡ್ಡ ಬಂದಿದ್ದಾರೆ. ಎದುರಾದವರಿಗೆ ಮಚ್ಚು ತೋರಿಸಿ ಬೆಚ್ಚಿ ಬೀಳಿಸಿ ಮುಂದೆ ಹೋಗಿದ್ದಾರೆ. ಒಳಗೆ ಹೋದವರೆ ಖಾರದ ಪುಡಿ ಜಲೀಲನ ಕಣ್ಣಿಗೆ ಉಗ್ಗಿದ್ದಾರೆ. ಏನೂ ಕಾಣದಂತಾದ ಜಲೀಲ್ ಧೈರ್ಯ ಮಾಡಿ ಬಾಗಿಲಿನ ಕಡೆ ಓಡಲು ಪ್ರಯತ್ನಿಸಿದ್ದಾರೆ. ಓಡಲಾಗದೇ ಬಿದ್ದವನ ಮುಖ-ಮೈ ಎಂದು ನೋಡದೆ ಮಚ್ಚಿನಿಂದ ಇಪ್ಪತ್ಮೂರು ಕಡೆ ಗಚ್ಚು ಹಾಕಿದ್ದಾರೆ. ರಕ್ತ ಮಡುವಿಗೆ ಬಿದ್ದು ಒದ್ದಾಡಿದ ಜಲೀಲ್ ಸಾಹೇಬ್ ಒದ್ದಾಡಿ ಪ್ರಾಣ ಬಿಟ್ಟಿದ್ದಾರೆ. ಆತ ಸಾಯುವುದು ಗ್ಯಾರಂಟಿ ಎಂದು ಪಕ್ಕ ಆಗುತ್ತಲೇ ಹಂತಕರಿಬ್ಬರು ತಮಗಾಗಿ ಗ್ರಾಪಂ ಹೊರಗೆ ಕಾಯುತ್ತಿದ್ದ ಪಲ್ಸರ್‌ನಲ್ಲಿ ಪರಾರಿ ಆಗಿದ್ದಾರೆ!

ಹತ್ತು ದಿನ ಹಲವು ರೀತಿಯ ತನಿಖೆ ನಡೆಸಿದ ದಕ್ಷಿಣ ಕನ್ನಡ ಪೊಲೀಸರು ಅಂತಿಮವಾಗಿ ಇದು ಭೂಗತ ರೌಡಿ ವಿಕ್ಕಿ ಶೆಟ್ಟಿ ತನ್ನ ದಾಯಾದಿ ಸೋದರನಿಗೆ ಕರೋಪಾಡಿ ಗ್ರಾಪಂ ಉಪಾಧ್ಯಕ್ಷ ಸ್ಥಾನ ಕೊಡಿಸಲಾಗದ ಹತಾಶೆಯಲ್ಲಿ ಮಾಡಿದ ಬರ್ಬರ ಪಾತಕ ಎಂಬುದನ್ನು ಪತ್ತೆ ಹಚ್ಚಿದ್ದಾರೆ. ಬರೋಬ್ಬರಿ ಹನ್ನೊಂದು ಪಾತಕಿಗಳ ಹಿಡಿದು ಜೈಲಿಗೆ ಹಾಕಿರುವ ಐಜಿಪಿ ಹರಿಶೇಖರನ್ ದಿಗ್ವಿಜಯದ ಮೂಡಲ್ಲಿದ್ದಾರೆ.

ಈಗ ಹರಿ ಮೇಲೆ ಇಷ್ಟು ದಿನ ಮಾಡಿದ ಸಾಹಸಕ್ಕಿಂತಲೂ ಗುರುತರವಾದ ಹೊಣೆಗಾರಿಕೆಯಿದೆ. ಅದೆಂದರೆ, ಯಾವ ಕಾರಣಕ್ಕೂ ಪಾತಕಿಗಳು ಕಾನೂನಿನ ದುರ್ಬಲ ಕಿಂಡಿಗಳ ಮೂಲಕ ತಪ್ಪಿಸಿಕೊಳ್ಳದಂತೆ ಬಂದ್ ಮಾಡುವುದಾಗಿದೆ. ಆಗ ಮಾತ್ರ ಖಾಕಿ ಖದರಿಗೆ ಕಿಮ್ಮತ್ತು ಬರುತ್ತದೆ. ಹಾಗಂತ ಜಲೀಲನ ಬಗ್ಗೆ ಪ್ರೀತಿ-ವಿಶ್ವಾಸ-ಅಭಿಮಾನ ಇಟ್ಟುಕೊಂಡ ಕರೋಪಾಡಿ-ವಿಟ್ಲದ ಜನರಷ್ಟೇ ಅಲ್ಲ, ಇಡೀ ಕರಾವಳಿಯೇ ಹೇಳುತ್ತಿದೆ.

■ ನುಹುಷ



ಪಂಚಾಯತ್ ಕಟ್ಟಡ

ಮಂಡ್ಯ: ಜೈಲಿನಿಂದಲೇ ಡೇಂಜರ್ ಶಿವನ ಹಾವಳಿ

ರಾಮೇಶ್ವರಕ್ಕೆ ಹೋದ್ರೂ ಶನೇಶ್ವರನ ಕಾಟ ತಪ್ಪಲಿಲ್ಲ ಅನ್ನೋ ಹಾಗೆ ಡೇಂಜರ್ ಶಿವ ಎಂಬ ಭೂಗತ ಪಾತಕಿ ಜೈಲು ಸೇರಿದರೂ ಮಂಡ್ಯದಲ್ಲಿ ಅವನ ಹಾವಳಿ ಮಾತ್ರ ಕಮ್ಮಿಯಾಗಿಲ್ಲ. ತನ್ನ ಸೋದರಮಾವ ಜಡೇಜಾ ರವಿ ಹತ್ಯೆಗೆ ಅಬಕಾರಿ ಉದ್ಯಮಿ ಹನಕೆರೆ ನಾಗಣ್ಣನೇ ಕಾರಣ ಅಂತ ಆತನನ್ನು ಕೊಂದು ಜೀವಾವಧಿ ಶಿಕ್ಷೆಗೆ ಗುರಿಯಾಗಿ ತನ್ನ ಮೂವರು ಸಹಚರರೊಂದಿಗೆ ಮಂಡ್ಯ ಜೈಲಿನಲ್ಲಿ ಮುದ್ದೆ ಮುರಿಯುತ್ತಿದ್ದರೂ ಈತನಿಗೆ ಬುದ್ಧಿ ಬಂದಂತೆ ಕಾಣುತ್ತಿಲ್ಲ. ಜೈಲಿನಲ್ಲಿದ್ದುಕೊಂಡೇ ನಾಗಮಂಗಲದ ವ್ಯಕ್ತಿಯೊಬ್ಬನಿಗೆ ಕೊಲೆ ಬೆದರಿಕೆ ಹಾಕಿ ಅಟ್ಟಹಾಸಗೈದಿದ್ದಾನೆ.

ಅಲ್ಲದೆ ಪೇಟೆ ಬೀದಿಯ ಮಸೀದಿ ರಸ್ತೆಯಲ್ಲಿರುವ ತಾತನ ಆಸ್ತಿ ವಿಚಾರವಾಗಿ ಕಿರಿಕ್ ಮಾಡಿಕೊಂಡಿರುವ ಡೇಂಜರ್ ಶಿವ ತನ್ನ ತಂದೆ ರೌಡಿ ಸುಂದರನ ಅಕ್ಕನಿಗೆ ಆಸ್ತಿಯಲ್ಲಿ ನಯಾ ಪೈಸೆಯೂ ಪಾಲು ಕೊಡೋಲ್ಲ ಎಂದು ಅತ್ತೆಯ ಮಗನನ್ನೇ ಮುಗಿಸಲು ತನ್ನ ಶಿಷ್ಯರನ್ನು ಫೀಲ್ಡ್‌ಗಿಳಿಸಿದ್ದ. ಡೇಂಜರ್ ಶಿವನನ್ನು ಕಾಣಲೆಂದು ರೌಡಿ ಕಪ್ಪೆ ರಘು ಪದೇಪದೇ ಜೈಲಿಗೆ ಎಂಟ್ರಿ ಹಾಕುತ್ತಿದ್ದರಿಂದ ಅನುಮಾನಗೊಂಡ ಪೊಲೀಸರು ಅವನನ್ನು ಎತ್ತಾಕಿಕೊಂಡು ಬಂದು ವಿಚಾರಿಸಿದಾಗ ಮಾರ್ಕೆಟ್ ಕುಮಾರನನ್ನು ಮುಗಿಸಲು ಡೇಂಜರ್ ಶಿವ ಸುಪಾರಿ ಕೊಟ್ಟಿದ್ದನೆಂದು ಬಾಯಿ ಬಿಟ್ಟಿದ್ದ. ಕೂಡಲೇ ಎಚ್ಚೆತ್ತ ಎಸ್ಪಿ ಸುಧೀರ್‌ಕುಮಾರ್ ರೆಡ್ಡಿ ದಿಢೀರ್ ದಾಳಿ ನಡೆಸಿ ಡೇಂಜರ್ ಶಿವನ ಸೆಲ್ ಚೆಕ್ ಮಾಡಿದಾಗ ಅಲ್ಲಿ 2 ಮೊಬೈಲ್ ಮತ್ತು ಗಾಂಜಾ ಸಿಕ್ಕಿತ್ತು. ನಾಗಮಂಗಲದ ಬಾರ್ ಮಂಜುನಾಥ ಹಾಗೂ


ಎಸ್ಪಿ ಸುದೀರ್‌ಕುಮಾರ್ ರೆಡ್ಡಿ

ಮಾರ್ಕೆಟ್ ಕುಮಾರನ ಕೊಲೆ ಸಂಚಿಗೆ ಡೇಂಜರ್ ಶಿವ ಸಂಚು ನಡೆಸಿದ್ದರಿಂದ ನ್ಯಾಯಾಲಯದ ಅನುಮತಿ ಪಡೆದು ಅವನನ್ನು ಬಳ್ಳಾರಿ ಜೈಲಿಗೆ ಗದುಮಲಾಗಿದೆ.

ಬಾರ್ ಮಂಜನಿಗೆ ಧಮಕಿ

ಡೇಂಜರ್ ಶಿವನ ಮೇಲೆ ಎಸ್ಪಿ ಸುಧೀರ್‌ಕುಮಾರ್ ರೆಡ್ಡಿಗೆ ಒಂದು ಕಣ್ಣು ಇದ್ದೇ ಇತ್ತು. ಅವನು ಯಾರೊಂದಿಗೆ ಸಂಪರ್ಕದಲ್ಲಿದ್ದಾನೆ, ಯಾರ್‍ಯಾರಿಗೆ ಮೊಬೈಲ್‌ನಲ್ಲಿ ಮಾತನಾಡಿದ್ದಾನೆ ಎಂಬ ಮಾಹಿತಿ ಎಸ್ಪಿಯನ್ನು ತಲುಪುತ್ತಲೇ ಇತ್ತು. ಆ ನಿಗಾವಣೆಯಲ್ಲೆ ಡೇಂಜರ್ ಶಿವ ನಾಗಮಂಗಲದ ಬದರಿಕೊಪ್ಪಲು ಮಂಜುನಾಥ್ ಎಂಬಾತನಿಗೆ ಬೆದರಿಕೆ ಹಾಕಿದ ವಿಚಾರ ಎಸ್ಪಿಗೆ ಗೊತ್ತಾದದ್ದು. ಕೂಡಲೇ ತನಿಖೆಗಿಳಿದ ಪೊಲೀಸರಿಗೆ ಬದರಿಕೊಪ್ಪಲು ಮಹೇಶ್ ಹಾಗೂ ಮಂಜುನಾಥ್ ಎಂಬಿಬ್ಬರು ಸಹೋದರರು ಹಣಕಾಸಿನ ವಿಚಾರದಲ್ಲಿ ಕಿತ್ತಾಡಿಕೊಂಡ ಮಾಹಿತಿ ಸಿಕ್ಕಿತ್ತು. ಬೆಂಗಳೂರಿನಲ್ಲಿ ಬಾರ್ ನಡೆಸುತ್ತಿರುವ ಮಹೇಶನನ್ನು ಎತ್ತಾಕಿಕೊಂಡು ಬಂದು ಒಂದು ರೌಂಡ್ ರುಬ್ಬುತ್ತಿದ್ದಂತೆಯೇ ತನ್ನ ತಮ್ಮ ಮಂಜುನಾಥ್‌ನಿಂದ ಹಣ ವಸೂಲಿ ಮಾಡಲು ಡೇಂಜರ್ ಶಿವನಿಗೆ ಸುಪಾರಿ ಕೊಟ್ಟಿರುವುದಾಗಿ ಆತ ಬಾಯಿ ಬಿಟ್ಟಿದ್ದ. ಮಂಜುನಾಥನನ್ನು ಕರೆಸಿಕೊಂಡ ಪಶ್ಚಿಮ ಠಾಣೆ ಪೊಲೀಸರು ಆತನಿಂದ ಕಂಪ್ಲೇಂಟ್ ಬರೆಸಿಕೊಂಡು ಡೇಂಜರ್ ಶಿವ, ಮಹೇಶ ಹಾಗೂ ಆತನ ಸ್ನೇಹಿತ ಮಾಚೋಹಳ್ಳಿ ಗಿರೀಶ್ ಮೇಲೆ ಹಣ ವಸೂಲಿ ಹಾಗೂ ಕೊಲೆ ಸಂಚಿನ ಮೇಲೆ ಎಫ್‌ಐಆರ್ ಹರಿದಿದ್ದಾರೆ.



ಬದ್ರಿಕೊಪ್ಪಲಿನ ಈ ಸಹೋದರರು ಚಿಕ್ಕ ವಯಸ್ಸಿನಲ್ಲೇ ಬೆಂಗಳೂರಿಗೆ ಹೋಗಿ ಹೋಟೆಲ್, ಬಾರ್‌ಗಳಲ್ಲಿ ಕೆಲಸ ಮಾಡಿ ಕೊನೆಗೆ ಕೆಂಗೇರಿ ರಿಂಗ್‌ರೋಡ್ ಬಳಿ ಶ್ರೀನಿವಾಸ್ ಬಾರ್ ಮಾಡಿಕೊಂಡು ಸಾಕಷ್ಟು ಹಣ ಮಾಡಿದ್ದರು. ಮದ್ಯದ ಉದ್ಯಮ ಕೈಹಿಡಿದಿದ್ದರಿಂದ ಇಬ್ಬರೂ ಸೇರಿ ಮಂಡ್ಯದ ಹೊಳಲು ಸರ್ಕಲ್‌ನಲ್ಲಿಯೂ ಬಾರ್ ತೆರೆದಿದ್ದರು. ಮಂಡ್ಯದಲ್ಲಿರುವ ಬಾರನ್ನು ತಮ್ಮ ಮಂಜುನಾಥ ಬೆಂಗಳೂರಿನಿಂದಲೇ ಹೋಗಿಬಂದು ನೋಡಿಕೊಳ್ಳುತ್ತಿದ್ದ. ಬೆಂಗಳೂರಿನಿಂದ ಮಂಡ್ಯದ ಬಾರ್ ನಿರ್ವಹಿಸಲು ಕಷ್ಟವಾಗುತ್ತೆ ಎಂಬ ಕಾರಣಕ್ಕೆ ಅದನ್ನು ಮಾರಲು ಇಬ್ಬರೂ ನಿರ್ಧರಿಸಿದ್ದರು. ಬೆಂಗಳೂರಿನಲ್ಲಿರುವ ಬಾರ್ ಮಹೇಶ್‌ನ ಹೆಸರಿನಲ್ಲಿದ್ದು, ಮಂಡ್ಯದ ಬಾರ್ ಮಂಜುನಾಥನ ಹೆಸರಲ್ಲಿತ್ತು. ಅಲ್ಲದೆ ಬೆಂಗಳೂರಿನಲ್ಲಿ ಅಣ್ಣ-ತಮ್ಮ ಇಬ್ಬರೂ ಸೇರಿ ಶಾಮಿಯಾನ ಅಂಗಡಿಯೊಂದನ್ನು ನಡೆಸುತ್ತಿದ್ದರು. ಮಂಡ್ಯದ ಬಾರ್ ಮಾರಿದ ನಂತರ ಬಂದ ಹಣದ ವಿಚಾರದಲ್ಲಿ ಅಣ್ಣ-ತಮ್ಮನ ಮಧ್ಯೆ ಮನಸ್ತಾಪ ಉಂಟಾಗಿತ್ತು. ಬಾರ್ ಮಾರಿದ ಹಣದಲ್ಲಿ ತನಗೂ ಪಾಲು ಬರಬೇಕೆಂದು ಅಣ್ಣ ಮಹೇಶ ಬೇಡಿಕೆ ಇಟ್ಟಿದ್ದ. ಆದರೆ ಬಾರ್ ತನ್ನ ಹೆಸರಲ್ಲಿ ಇದ್ದುದರಿಂದ ಹಣವೆಲ್ಲ ತನ್ನದೇ ಅಂತ ತಮ್ಮ ವರಾತ ತೆಗೆದಿದ್ದ. ಹೀಗೆ ಅವರಿಬ್ಬರ ನಡುವೆ ಹಣದ ಜಟಾಪಟಿ ಶುರುವಾಗಿತ್ತು.

ಮಂಡ್ಯದಲ್ಲಿ ಬಾರ್ ನಡೆಸುತ್ತಿದ್ದ ಸಂದರ್ಭದಲ್ಲಿ ಮಹೇಶನಿಗೆ ರೌಡಿ ಡೇಂಜರ್ ಶಿವನ ಸಂಪರ್ಕ ಬೆಳೆದಿತ್ತು. ಅದೇ ಗೆಳೆತನ ಬಳಸಿಕೊಂಡ ಮಹೇಶ್ ತನ್ನ ತಮ್ಮ ಮಂಜುನಾಥನಿಂದ ಹಣ ವಸೂಲಿ ಮಾಡಿಕೊಡುವಂತೆ ಡೇಂಜರ್ ಶಿವನಿಗೆ ಸುಪಾರಿ ಕೊಟ್ಟಿದ್ದ. ಅದರಂತೆ ಮಂಜುನಾಥನಿಗೆ ಫೋನ್ ಮಾಡಿ ಜೈಲಿಗೆ ಕರೆಸಿಕೊಂಡಿದ್ದ ಡೇಂಜರ್ ಶಿವ 'ನಿಮ್ಮಣ್ಣ ಮಹೇಶನಿಗೆ 30 ಲಕ್ಷ, ನನಗೆ 20 ಲಕ್ಷ ಕೊಟ್ಟು ಸೆಟ್ಲ್ ಮಾಡಿಕೊ' ಅಂತ ಡೀಲ್ ಮುಂದಿಟ್ಟಿದ್ದ. ಅಲ್ಲಿ ಆಯ್ತು ಎಂದು ಒಪ್ಪಿಕೊಂಡು ಬಂದ ಮಂಜುನಾಥ ಹೊರಗೆ ಉಲ್ಟಾ ಹೊಡೆದಿದ್ದ. ಆಗ ಆತನ ಮೊಬೈಲ್‌ಗೆ ಜೈಲಿನಿಂದಲೇ ಕರೆ ಮಾಡಿದ್ದ ಡೇಂಜರ್ ಶಿವ ಹಣ ಕೊಡದಿದ್ದರೆ ನಿನ್ನನ್ನು ಮುಗಿಸುತ್ತೇನೆ ಎಂದು ಬೆದರಿಕೆ ಹಾಕಿದ್ದ. ಎಸ್ಪಿಯವರ ಮುನ್ನೆಚ್ಚರಿಕೆಯಿಂದ ಮಂಡ್ಯದ ನೆಲ ಮತ್ತೆ ನೆತ್ತರಮಯವಾಗೋದು ತಪ್ಪಿದಂತಾಗಿದೆ.

ನಯಾಪೈಸೆ ಕೊಡಲ್ಲ

ಮಂಡ್ಯದ ಮಸೀದಿ ರಸ್ತೆಯಲ್ಲಿ ಡೇಂಜರ್ ಶಿವನ ತಾತನ ಕೋಟ್ಯಾಂತರ ಬೆಲೆಬಾಳುವ ಮನೆ ಇದೆ. ಈ ಮನೆ ವಿಚಾರದಲ್ಲಿ ಶಿವ ಹಾಗೂ ಆತನ ಅತ್ತೆ ನಡುವೆ ಸಣ್ಣ ಕಿರಿಕ್ ನಡೆದಿದೆ. ಕಾನೂನಿನಪ್ರಕಾರ ಹೆಣ್ಣುಮಕ್ಕಳಿಗೂ ಆಸ್ತಿಯಲ್ಲಿ ಹಕ್ಕಿದೆ. ಅದರಂತೆ ನನಗೂ ನನ್ನ ತಂದೆಯ ಆಸ್ತಿಯಲ್ಲಿ ಸ್ವಲ್ಪ ಭಾಗ ಕೊಡಿ ಎಂದು ಶಿವನ ಸೋದರತ್ತೆ ಕೇಳಿದ್ದಳು. ಒಂದು ನಯಾಪೈಸೆಯನ್ನೂ ಕೊಡೊಲ್ಲ ಅಂತ ಸ್ವಂತ ಅತ್ತೆಗೇ ಧಮಕಿ ಹಾಕಿದ್ದ. ಆಗಿನ್ನು ಡೇಂಜರ್ ಶಿವನಿಗೆ ಜೀವಾವಧಿ ಶಿಕ್ಷೆಯಾಗಿರಲಿಲ್ಲ. ಮೈಸೂರು ಕೋರ್ಟ್‌ನಲ್ಲಿ ಹನಕೆರೆ ನಾಗಣ್ಣನ ಹತ್ಯೆ ಕೇಸಿನ ವಿಚಾರಣೆ ನಡೆಯುತ್ತಿತ್ತು. ಶಿವನ ವಿರುದ್ಧ ಅವನ ಅತ್ತೆ ಪೊಲೀಸ್ ಠಾಣೆಯ ಮೆಟ್ಟಲೇರಿದಾಗ ಹಿರಿಯರ ಸಮ್ಮುಖದಲ್ಲಿ ಮಾತನಾಡಿ ಬಗೆಹರಿಸಿಕೊಳ್ಳುವಂತೆ ಪೊಲೀಸರು ಬುದ್ಧಿ ಹೇಳಿದ್ದರು.

ಇದಾಗಿ ಕೆಲವೇ ದಿನಕ್ಕೆ ಹನಕೆರೆ ನಾಗಣ್ಣನ ಕೊಲೆ ಕೇಸಿನಲ್ಲಿ ಡೇಂಜರ್ ಶಿವನಿಗೆ ಜೀವಾವಧಿ ಶಿಕ್ಷೆಯ ತೀರ್ಪು ಹೊರಬಿದ್ದಿತ್ತು. ಮಂಡ್ಯ ಜೈಲು ಸೇರಿಕೊಂಡ ಡೇಂಜರ್ ಶಿವ ಅಲ್ಲಿಂದಲೇ ಹಲವಾರು ಸಲ ಸೋದರತ್ತೆ ಹಾಗೂ ಆಕೆಯ ಮಗ ಮಾರ್ಕೆಟ್ ಕುಮಾರನಿಗೆ ಆಸ್ತಿ ಬಿಟ್ಟು ಕೊಡುವಂತೆ ಧಮಕಿ ಹಾಕಿದ್ದ. ಆದರೆ ಶಿವನ ಸೋದರತ್ತೆ ಬೆದರಿಕೆಗೆ ಜಗ್ಗಲಿಲ್ಲ. ವ್ಯಗ್ರನಾದ ಡೇಂಜರ್ ಶಿವ 'ನಿನ್ನ ಮಗ ಮಾರ್ಕೆಟ್ ಕುಮಾರನ ಕುಮ್ಮಕ್ಕಿನಿಂದ ಇಷ್ಟೆಲ್ಲಾ ಮಾತನಾಡ್ತಿದ್ದೀಯ. ನಿಮಗೆಲ್ಲಾ ಒಂದು ಗತಿ ಕಾಣಿಸ್ತೀನಿ' ಎಂದು ಧಮಕಿ ಹಾಕಿದ್ದ. ಆ ಮನೆ ಮತ್ತು ಜಾಗ ಕೋಟ್ಯಂತರ ರೂಪಾಯಿಗೆ ಬೆಲೆ ಬಾಳುತ್ತೆ. ಅದರಲ್ಲಿ ಕಾನೂನುಬದ್ಧವಾಗಿ ಪಾಲುತೆಗೆದುಕೊಂಡರೆ ಏನಿಲ್ಲವೆಂದರೂ 30 ಲಕ್ಷವಾದರು ಸೋದರತ್ತೆಯ ಕೈಸೇರಬೇಕು. ಆದರೆ ಆಕೆ ಅಷ್ಟೊ ಬೇಡ, ಕೇವಲ ಲಕ್ಷವಾದರೂ ಕೊಡು ಅಂತ ಗೋಗರೆದಿದ್ದಳು. ಅದಕ್ಕೂ ಶಿವ ಒಪ್ಪಿರಲಿಲ್ಲ. ಜೈಲಿನಲ್ಲಿದ್ದುಕೊಂಡೇ ಮಾರ್ಕೆಟ್ ಕುಮಾರನನ್ನು ಮುಗಿಸಲು ಕಪ್ಪೆ ರಘು, ಮೈಸೂರಿನ ಬಡ್ಡಿ ಭಾಗ್ಯಳ ಸಹಚರರನ್ನು ಸಿದ್ಧ ಮಾಡಿದ್ದ.


ಕುಮಾರನನ್ನು ಮುಗಿಸಲು ಒಂದು ಟಾಟಾ ಸುಮೋದ ತುಂಬಾ ಐದಾರು ಮಂದಿ ಕಿರಾತಕರು ಬೆನ್ನುಬಿದ್ದಿದ್ದರು. ಇದರ ವಾಸನೆ ಅದ್ಹೇಗೋ ಪೊಲೀಸರಿಗೆ ಬಡಿದಿತ್ತು. ಎಸ್ಪಿ ರೆಡ್ಡಿ, ಪಶ್ಚಿಮ ಠಾಣೆಯ ಡಿವೈಎಸ್ಪಿ ಚಂದ್ರಶೇಖರ್, ಸಿಪಿಐ ಸಂತೋಷ್, ಎಸ್‌ಐಗಳಾದ ನಿರಂಜನ್, ಶಿವರುದ್ರರ ತಂಡ ಆ ಕಿರಾತಕರನ್ನು ಬಂಧಿಸಿ ವರ್ಕ್‌ಔಟ್ ಶುರು ಮಾಡುತ್ತಿದ್ದಂತೆಯೇ ಡೇಂಜರ್ ಶಿವನ ಪುರಾಣ ಒದರಿದ್ದರು. ಡೇಂಜರ್ ಶಿವ ಮಂಡ್ಯ ಜೈಲಿನಲ್ಲೇ ಇದ್ದರೆ ಮತ್ತಷ್ಟು ಪಾತಕ ಕೃತ್ಯಗಳಿಗೆ ನಾಂದಿ ಹಾಡಬಹುದೆಂಬ ಆತಂಕದಲ್ಲಿ ಅವನನ್ನು ಬಳ್ಳಾರಿ ಜೈಲಿಗೆ ಗದುಮಲಾಗಿದೆ.

ಜೈಲರ್ ಸತೀಶ್ ಅಮಾನತು

ಎಸ್ಪಿ ಸುಧೀರ್‌ಕುಮಾರ್ ರೆಡ್ಡಿಯವರು ದಿಢೀರ್ ದಾಳಿ ನಡೆಸಿದ ಸಂದರ್ಭದಲ್ಲಿ ಅವರಿಗೆ ಡೇಂಜರ್ ಶಿವನ ಸೆಲ್‌ನಲ್ಲಿ


ಡೇಂಜರ್ ಶಿವ

ಮೊಬೈಲ್‌ಗಳು, ಗಾಂಜಾ ಸಿಕ್ಕಿರೋದು ಬಂದೀಖಾನೆ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಇವೆಲ್ಲದರ ಬಗ್ಗೆ ರೆಡ್ಡಿಯುವರು ಹೆಚ್ಚುವರಿ ಕಾರಾಗೃಹಗಳ ಮ ನಿರ್ದೇಶಕರಿಗೆ ಸವಿಸ್ತಾರವಾಗಿ ವರದಿ ಕೊಟ್ಟಿದ್ದರು. ಸಿಸಿ ಸೇರಿದಂತೆ ಜೈಲಿನಲ್ಲಿ ಬಿಗಿ ಭದ್ರತೆಯಿದ್ದರೂ ರೌಡಿ ಜೈಲಿನಿಂದಲೇ ಮೊಬೈಲ್‌ನಲ್ಲಿ ಧಮಕಿ ಹಾಕಿರುವು ಕೊಲೆಗೆ ಯತ್ನಿಸಿರುವುದನ್ನು ಗಂಭೀರವಾಗಿ ಪರಿಗಣಿ ಕಾರಾಗೃಹಗಳ ಮಹಾ ನಿರ್ದೇಶಕರು ಜೈಲರ್ ಸತೀಶ್ ಅಮಾನತು ಮಾಡಿದ್ದಾರೆ. ಸದ್ಯ ತುಮಕೂ ಉಪಕಾರಾಗೃಹದ ಅಧೀಕ್ಷಕ ಲೋಕೇಶ್‌ರನ್ನು ಮ ಜೈಲರ್ ಆಗಿ ನೇಮಿಸಲಾಗಿದೆ. ನಿವೃತ್ತಿಗೆ ಒಂದು ವ ಬಾಕಿ ಇದ್ದ ಜೈಲರ್ ಸತೀಶ್, ರೌಡಿ ಡೇಂಜರ್ ಶಿ ಕಾರಣಕ್ಕೆ ಅಮಾನತುಗೊಂಡಿದ್ದಾರೆ.


ಅಮಾನತುಗೊಂಡ ಜೈಲರ್ ಸತೀಶ್

ರೌಡಿ ಡೇಂಜರ್‌ಶಿವ ಹುಟ್ಟಾ ಪಾತಕ ಪರಿಸರದ ಬೆಳೆದವನು. ಇವನ ತಂದೆ ಸುಂದರ ಕೂಡಾ ಸಣ್ಣ ಸ್ಕೆ ರೌಡಿ. ಅವನನ್ನು ಅಣ್ಣಯ್ಯ ಎಂಬ ಮತ್ತೊಬ್ಬ ಕೊಂದುಹಾಕಿದ್ದ. ತನ್ನ ಅಕ್ಕನ ಗಂಡನನ್ನು ಕೊ ಅಣ್ಣಯ್ಯನನ್ನು ಸುಂದರನ ಭಾಮೈದ ಜಡೇಜಾ ರವಿ ಕೊ ಮಂಡ್ಯ ಭೂಗತ ಲೋಕದಲ್ಲಿ ಮೆರೆದಿದ್ದ. ಸೋದರ ಮಾ ಪಾತಕ ಮೆರೆದಾಟವನ್ನು ಹತ್ತಿರದಿಂದ ಕಂಡು ಪುಳಕಿತ ಶಿವ ರೌಡಿಸಂನ ಆಕರ್ಷಣೆಗೆ ಒಳಗಾಗಿ ಊ ವಿದ್ಯಾಭ್ಯಾಸಕ್ಕೆ ಎಳ್ಳುನೀರು ಬಿಟ್ಟು ಮಂಡ್ಯ ಸೇರಿಕೊಂ ಮಾವ ಜಡೇಜಾ ರವಿ ಭೀಕರವಾಗಿ ಕೊಲೆಯ ತ್ತಿದ್ದಂತೆಯೇ ಪ್ರತೀಕಾರದ ಉನ್ಮಾದದಲ್ಲಿ ಹನಕೆರೆ ನಾಗ ಹೆಣವಿಟ್ಟು ಇದೀಗ ಶಿವ ಜೀವಾವಧಿ ಶಿಕ್ಷೆಗೆ ಗುರಿ ದ್ದಾನೆ.

■ ವರದಿಗ

ಕೊರಗರನ್ನು ಬಡಿದದ್ದಕ್ಕೆ ಬಜರಂಗದಳದ ಅವಸಾನ ಖಚಿತ

ಉಡುಪಿ ಜಿಲ್ಲೆಯ ಮೇವಾಡಿ ಗ್ರಾಮದಲ್ಲಿ ಕೊರಗ ಕುಟುಂಬದವರು ಅವರ ಮನೆಯಲ್ಲಿ ಸ್ವತಃ ಸಾಕಿದ್ದ ಗಂಡು ಕರುವನ್ನು ಕೊಂದು ಮಾಂಸ ಮಾಡುತ್ತಿದ್ದರು. ಅವರು ಬೇರೆ ಯಾರದ್ದೇ ಕರುವನ್ನು ಕದ್ದು ತಂದಿರಲಿಲ್ಲ. ತಮ್ಮ ಮನೆಯ ಗಂಡು ಕರುವನ್ನು ಮಾಂಸ ಮಾಡಿದರೆ ಅದಕ್ಕೆ ನಿರ್ಬಂಧವೆಲ್ಲಿದೆ? ಮೇಲಾಗಿ ಸಾವಿರಾರು ವರ್ಷಗಳಿಂದ ಗೋಮಾಂಸ ಕೊರಗರ ಪ್ರಮುಖ ಆಹಾರ. ಹಾಗಾಗಿ ಧರ್ಮದ ಹೆಸರಲ್ಲಿ ಪ್ರಕೃತಿಯ ಮಕ್ಕಳಾದ ಕೊರಗರ ಆಹಾರ ಕ್ರಮ ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ.

ತುಳುನಾಡಿಗೆ ಹೊರಗಿನಿಂದ ವಲಸೆ ಬಂದ ಮೇಲ್ಜಾತಿಯವರು ಇಲ್ಲಿಯ ಮೂಲ ನಿವಾಸಿಗಳ ಆಹಾರ ಪದ್ಧತಿ ಪ್ರಶ್ನಿಸುವುದೆಂದರೆ ಒಂದು ಮನೆ ಬಾಡಿಗೆಗೆ ಬಂದವನು ಮನೆಯ ಮಾಲೀಕನ ಆಹಾರ ಪದ್ಧತಿಯನ್ನೇ ಪ್ರಶ್ನಿಸುವಂತಹ ಮೂರ್ಖತನ ತೋರಿದಂತೆ ಆಗಿದೆ. ಈ ಜಗತ್ತಿನಲ್ಲಿ ಅಳಿವಿನಂಚಿನಲ್ಲಿರುವ 80 ಬುಡಕಟ್ಟು ಜನಾಂಗಗಳಲ್ಲಿ ಕರ್ನಾಟಕದ 'ಕೊರಗರೂ' ಒಂದು ಬುಡಕಟ್ಟು ಜನಾಂಗ.

ಮೊನ್ನೆ ದಾಳಿ ಮಾಡಿದ ಹತ್ತು ಬಜರಂಗಿ ಗೂಂಡಾಗಳಲ್ಲಿ ಒಬ್ಬನನ್ನು ಹೊರತುಪಡಿಸಿ ಬೇರೆಲ್ಲಾ ಬಿಲ್ಲವರು. ಅದಕ್ಕಾಗಿ ಬಿಜೆಪಿಯವರು ಮಾತ್ರವಲ್ಲ, ಕಾಂಗ್ರೆಸ್ಸಿನ ಸ್ಥಳೀಯ ಬಿಲ್ಲವ ಶಾಸಕ ಸಹ ಈ ಬಜರಂಗಿಗಳನ್ನು ಕಾನೂನಿನಿಂದ ಬಚಾವ್ ಮಾಡಲು ಹವಣಿಸುತ್ತಿದ್ದಾರೆ ಎಂಬ ಆರೋಪವಿದೆ. ಕಾಂಗ್ರೆಸ್ಸಿನ ಅತಿ ದೊಡ್ಡ ದೌರ್ಬಲ್ಯವೆಂದರೆ ಅವರ 'ಮೃದು ಹಿಂದೂತ್ವವಾದ' ಅರ್ಥಾತ್ ಪರೋಕ್ಷ ಹಿಂದೂತ್ವವಾದ!


ಕೊರಗರು ಕರಾವಳಿಯ ಮೂಲ ನಿವಾಸಿಗಳು. ಹಿಂದೊಮ್ಮೆ ಅವರೇ ಇಲ್ಲಿಯ ರಾಜರಾಗಿದ್ದರು ಮತ್ತು ಎಲ್ಲಾ ಭೂಮಿಯ ಒಡೆಯರಾಗಿದ್ದರು. ಆದರೆ ನಂತರ ಇತರೆಡೆಯಿಂದ ವಲಸೆ ಬಂದ ಜೈನ ಬಂಟ ಬ್ರಾಹ್ಮಣರು ಇಲ್ಲಿಯ ಕೊರಗರ ಭೂಮಿಯನ್ನು ಬಲಾತ್ಕಾರದಿಂದ ಕೈವಶ ಮಾಡಿಕೊಂಡು, ಕೊರಗರನ್ನು ಕಾಡಿಗೆ ಓಡಿಸಿ ಅವರನ್ನು ಅಸ್ಪೃಶ್ಯರಂತೆ ನೋಡಿಕೊಳ್ಳುತ್ತಿದ್ದಾರೆ. ಆರೆಸ್ಸೆಸ್ಸಿನ





ಬೆನ್ನೆಲುಬಾಗಿರುವ ಮರಾಠಿ-ಕೊಂಕಣಿ ಬ್ರಾಹ್ಮಣರು ಮತ್ತು ಹವ್ಯಕರು ಗೋವಿನ ಹೆಸರಲ್ಲಿ ಬೀದಿ ನಾಟಕ ಆಡುವುದರಲ್ಲಿ ನಿಷ್ಣಾತರು. ಆದರೆ ಅವರು ತಾವು ಹಿಂದೆ ನಿಂತು ಮುಂದೆ ದೂಡುವುದು ಪೆದ್ದ ಬಿಲ್ಲವರನ್ನು ಹಾಗೂ ಮೂರ್ಖ ಬಂಟರನ್ನು.


ಸ್ವಾತಂತ್ರ್ಯಪೂರ್ವದಲ್ಲಿ ಮಂಗಳೂರು-ಉಡುಪಿ ಜಿಲ್ಲೆಯಲ್ಲಿ ಸುಮಾರು 30 ಸಾವಿರ ಕೊರಗ ಜನಸಂಖ್ಯೆ ಇತ್ತು, ಆದರೆ ಇಂದು ಅವರ ಜನಸಂಖ್ಯೆ ಕೇವಲ ಮೂರು ಸಾವಿರಕ್ಕೆ ಇಳಿದಿದೆ. ಅಂದರೆ ಅವರ ಸಂಖ್ಯೆ 9 ಕಡಿಮೆಯಾಗಲು ಮೂಲಕಾರಣ ಅವರ ಮ ಅಪೌಷ್ಟಿಕತೆಯಿಂದ ಹಾಗೂ ಹಸಿವಿನಿಂದ ಸಾಯುತ್ತಿರುವ ಇದರ ಬಗ್ಗೆ ಮೇಲ್ಜಾತಿಯವರು ಎಂದೂ ಅ ವ್ಯಕ್ತಪಡಿಸಿಲ್ಲ, ಆದರೆ ಅವರು ಗೋಮಾಂಸ ತಿನ್ನುವ ಮಾತ್ರ ಸಂಘಪರಿವಾರದ ಮೇಲ್ಜಾತಿಯವ ಆತಂಕವಿರುವುದು! ಅಂದರೆ ಅಪೌಷ್ಟಿಕತೆ ಮತ್ತು ಹಸಿವಿ ಕೊರಗ ಜನಾಂಗ ಸಂಪೂರ್ಣವಾಗಿ ಅಳಿದು ಹೋದ ಪರವಾಗಿಲ್ಲ ಆದರೆ ಅವರು ಪೌಷ್ಟಿಕತೆಯ ಆಗರವಾಗಿ ಗೋಮಾಂಸ ಮಾತ್ರ ತಿನ್ನಬಾರದು. ಕೊರಗರು ಹಸಿವಿ ಸತ್ತರೂ ಪರವಾಗಿಲ್ಲ ಆದರೆ ದನಗಳು ಮಾತ್ರ ಉಳಿಯಬ ಇದು ಎಂತಹ ಅಮಾನವೀಯ ವಿಪರ್ಯಾಸ ನೋ ಇಂತಹ ಮಾನವತೆ ಇಲ್ಲದ ಧರ್ಮ ಜಗತ್ತಿನಲ್ಲಿ ಎಲ್ಲಿಯಾದರೂ ಇದೆಯೇ? ಕೇವಲ ವೈದಿಕ ಧ ಮಾತ್ರವೇ ತಮ್ಮದೇ ಧರ್ಮೀಯರ ವಿರುದ್ಧ ಹು ಆಧಾರದಲ್ಲಿ ತಾರತಮ್ಯ ಮಾಡಿ ಘೋರವಾಗಿ ಶೋಷಿ ಮಾನವ ವಿರೋಧಿ ತತ್ವ ಹೊಂದಿರುವುದು.


ಶಿವಮೊಗ್ಗ: ಯಡ್ಡಿ-ಈಶುಗೆ ಆರೆಸ್ಸೆಸ್‌ನ 'ಜೋಡಿ ಮುಹೂರ್ತ'!


ಸಂತೋಷ್


ದತ್ತಾತ್ರೀ


ರುದ್ರೇಗೌಡ


ಚನ್ನಬಸಪ್ಪ


ಭಾನುಪ್ರಕಾಶ್

ಯಡ್ಡಿ-ಈಶು ಗದ್ದಲದಲ್ಲಿ ಶಿವಮೊಗ್ಗ ಬಿಜೆಪಿ-ಮುಕ್ತ ...ಯಾಗುವತ್ತ ದಾಪುಗಾಲಿಡುತ್ತಿದೆ. ಅಷ್ಟಕ್ಕೂ ಇವರಿಬ್ಬರ ...ವಿನ ರಾಜಕೀಯ ದುಶ್ಮನಿ ಇಂದು ನಿನ್ನೆಯದೇನಲ್ಲ. ...ನಾವಣಾ ರಾಜಕೀಯ ಶುರುವಾದಾಗಲೆಲ್ಲ ಶಿವಮೊಗ್ಗದ ...ತದಾರನಿಗೆ ಬಿಟ್ಟಿ ಮನರಂಜನೆ ಒದಗಿಸುತ್ತಿದ್ದವರು ...ಬ್ಬರೇ. ಮುನ್ಸಿಪಾಲಿಟಿ ಪಾಲಿಟಿಕ್ಸ್, ಜಿ.ಪಂ., ತಾ.ಪಂ., ...ಮ ಪಂಚಾಯ್ತಿಗಳಿಂದ ಹಿಡಿದು ವಿಧಾನಸಭಾ, ...ೀಕಸಭಾ ಚುನಾವಣೆ ತನಕ ಇವರ ಮುಸುಕಿನ ...ದ್ದಾಟವೇ ಹೈಲೈಟು. ಆದರೆ 'ಕಭಿ ಖುಷಿ ಕಭಿ ಗಂ' ...ಾ ಇರುತ್ತಿದ್ದ ಕದನ ಇದೀಗ ಕ್ಲೈಮ್ಯಾಕ್ಸ್‌ಗೆ ಬಂದು ...ುಪಿದೆ. ರಾಜ್ಯ ಮಟ್ಟದಲ್ಲಿ ಈ ಗುದುಮುರಗಿ ಏನೇನು ...ಿಣಾಮ ಬೀರುತ್ತೋ ಗೊತ್ತಿಲ್ಲ, ಆದರೆ ಶಿವಮೊಗ್ಗದ ...ಟ್ಟಿಗಂತು ಬಿಜೆಪಿಯನ್ನು ಹೈರಾಣು ಮಾಡಲಿದೆ.

2013ರ ವಿಧಾನಸಭಾ ಚುನಾವಣೆಯಲ್ಲಿ ಯಾವಾಗ ...ವಮೊಗ್ಗದ ಮತದಾರ ಈಶ್ವರಪ್ಪ ಎಂಬ ಉಪಮುಖ್ಯ ...ಂತ್ರಿಯನ್ನು ನಾಲ್ಕನೇ ಸ್ಥಾನಕ್ಕೆ ತಳ್ಳಿಬಿಟ್ಟನೋ ಆಗಿನಿಂದಲೇ ...ಡ್ಡಿ-ಈಶು ಫೈಟು ರಂಗೇರಲು ಶುರುವಾದದ್ದು. ಈಶುಗೆ ... ವಿರುದ್ಧ ಗೆದ್ದ ಕಾಂಗ್ರೆಸ್‌ನ ಕೆ.ಬಿ.ಪ್ರಸನ್ನ ಕುಮಾರ್ ...ೀಲಿಗಿಂತ ಎರಡನೇ ಸ್ಥಾನ ಆಕ್ರಮಿಸುವ ಮೂಲಕ ... ಹೀನಾಯ ಸ್ಥಿತಿಗೆ ಕಾರಣರಾದ ರುದ್ರೇಗೌಡರ ...ೀಲೆಯೇ ವಿಪರೀತ ಸಿಟ್ಟು. ಯಾಕೆಂದರೆ ಈ ರುದ್ರೇಗೌಡ, ...ಡ್ಡಿಯ ಕೆಜೆಪಿ ಹುರಿಯಾಳು. ಅಂಥಾ ರುದ್ರೇಗೌಡರನ್ನೇ ...ಡ್ಡಿ ಬಿಜೆಪಿಯ ಜಿಲ್ಲಾಧ್ಯಕ್ಷ ಸ್ಥಾನದಲ್ಲಿ ಕೂರಿಸುತ್ತಾನೆಂದರೆ ...ಪ, ಈಶುಗೆ ತಡೆದುಕೊಳ್ಳಲಿಕ್ಕಾಗುತ್ತಾ. ತಡಮಾಡಲಿಲ್ಲ, ...ಮಾಧಿಯೊಳಗೆ ತಣ್ಣಗೆ ಮಲಗಿದ್ದ ರಾಯಣ್ಣನನ್ನು ಎಬ್ಬಿಸಿ ...ದು ಬ್ರಿಗೇಡ್ ಕಟ್ಟಿ, ಭಾನ್ಗಡಿ ಶುರು ಮಾಡಿ ಬಿಜೆಪಿ ...ಡಕ್ಕೆ ಬಿಸಿನೀರು ಬಿಡುವ ಕಾಯಕಕ್ಕೆ ಯಡ್ಡಿಯೊಂದಿಗೆ ...ಜೋಡಿಸಿದ್ದಾರೆ.

ಟಿಕೆಟು ಕೊಡಿಸಿ?

ಮೊನ್ನೆಮೊನ್ನೆ ಅರಮನೆ ಮೈದಾನದ ಕಿರು ಮೂಲೆ ...ಂದರಲ್ಲಿ ಸಣ್ಣದಾಗಿ 'ಸಂಘಟನೆ ಉಳಿಸಿ' ಅಂತ ಈಶು ...ಡಿದ ಸಭೆಯ ರಣಉದ್ದೇಶ 'ನಮ್ಗೆ ಟಿಕೆಟು ಕೊಡಿಸಿ' ...ತ ಬೆದರಿಸುವುದೇ ಆಗಿತ್ತು. ಅವತ್ತು ಅಪ್ಪಟ ...ಬ್ರುವಾಹನನ ಸ್ಟೈಲಿನಲ್ಲಿ 'ನಾವು ಅಪ್ಪನಿಗುಟ್ಟಿದ ಮಕ್ಕಳು' ...ದು ಅಬ್ಬರಿಸಿ ಬೊಬ್ಬಿರಿದ ಈಶುಗೆ ಆಗಲಿ, ಅದೇ ...ಶ್ವರಪ್ಪನ ಮೌತ್‌ಪೀಸ್‌ನಂತಾಡುವ ತುಮಕೂರಿನ ...ಗಡು ಶಿವಣ್ಣನಿಗೇ ಆಗಲಿ ಮುಂದಿನ ಎಲೆಕ್ಷನ್‌ನಲ್ಲಿ ...ಕೆಟ್ ಸಿಗೋದು ಡೌಟು ಎನ್ನುವಂತಾಗಿದೆ. ತಮ್ಮ ...ರೋಧಿಗಳನ್ನು ತಂದು ಅವರವರ ಜಿಲ್ಲಾಧ್ಯಕ್ಷ ಸ್ಥಾನದಲ್ಲಿ ...ತಿಷ್ಠಾಪಿಸಿ ದಾಗಲೇ ಅವರಿಗೆ ಈ ವಿಚಾರ ಮನವರಿಕೆ ...ಾಗಿದೆ. ಹಾಗಾಗಿ ಯಡ್ಡಿಯನ್ನು ಬೆದರಿಸಿಯಾದರೂ ... ಟಿಕೆಟ್ ಗಿಟ್ಟಿಸಿಕೊಳ್ಳಬೇಕು ಅನ್ನೋ ಕಾರಣಕ್ಕೆ ಬ್ರಿಗೇಡು, ...ಘಟನೆ ಉಳಿಸಿ ವಗೈರಾ ರಂಗವಲ್ಲಿ ಬಿಡಲು ಶುರು ...ಡಿದ್ದಾರೆ. ಇವರ ಈ ಐಲಾಟಗಳ ಹಿಂದೆ ಆರೆಸ್ಸೆಸ್‌ನ ...ರ್ ಕೇಸರಿ ಪಡೆ ಇರೋದು ಈಗ ರಹಸ್ಯವೇನೂ ಅಲ್ಲ, ಖುದ್ದು ಯಡ್ಡಿಯೇ ಬಿಜೆಪಿಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಮೇಲೆ ಅಪವಾದವನ್ನು ಎತ್ತಿ ಬಿಸಾಕಿಯಾಗಿದೆ. ಅದು ನಿಜವೂ ಹೌದು. ಇಲ್ಲದೇ ಹೋಗಿದ್ದರೆ ಯಡ್ಡಿಯಂತಹ ಭಸ್ಮಾಸುರನನ್ನು ಎದುರಾಕಿಕೊಳ್ಳುವ ಧೈರ್ಯ ಈಶು ಎಂಬ 'ಬಾಯಾಸುರ'ನಿಗೆ ಎಲ್ಲಿಂದ ಬರಬೇಕಿತ್ತು, ತಲೆ ಕತ್ತರಿಸಿ, ಕಾಲು ಕಡಿಯಿರಿ ಅಂತ ಮಟನ್ ಸ್ಟಾಲ್ ಮಾಣಿಕ್ ಪಾಪಾನಂತೆ ಮಾತಾಡುವ, ಆ ಮೂಲಕ ಅಸಹ್ಯ ಹುಟ್ಟಿಸುವ ಈಶುಗೆ ಬೆರಳೆಣಿಕೆಯ ಜೊತೆಗಾರರನ್ನು ಬಿಟ್ಟರೆ ಬೆಂಬಲಿಗರು, ಅನುಯಾಯಿಗಳು ಅಂತ ಯಾರೂ ಇಲ್ಲ. ಇದ್ದಿದ್ದರೆ 2013ರ ಎಲೆಕ್ಷನ್ ಫಲಿತಾಂಶ ಘಟಿಸುತ್ತಲೇ ಇರಲಿಲ್ಲ. ಈಗ ಜೊತೆಗಿರುವವರು ಸಹ ಯಡ್ಡಿ ಜೊತೆ ತಮಗಿರುವ ವೈಯಕ್ತಿಕ ಕೊಸರಾಟಗಳ ಕಾರಣಕ್ಕೆ ಈಶು ಪಕ್ಕದಲ್ಲಿ ಠಳಾಯಿಸುತ್ತಿದ್ದಾರೆ. ಅಕಸ್ಮಾತ್ ಯಡ್ಡಿ ಅವರನ್ನೆಲ್ಲ ಒಬ್ಬೊಬ್ಬರನ್ನಾಗಿ ಕರೆದು 'ಚಾಳಿ, ಟೂ ವಾಪಾಸ್' ಅಂದುಬಿಟ್ಟರೆ ಈಶು ಅಕ್ಷರಶಃ ಏಕಾಂಗಿ!

ಈಶು ಗೋದಾಮು, ಯಡ್ಡಿ ಬದ್ನಾಮು

ಈಶು ತನ್ನ ರಾಜಕಾರಣದ ದಾಸ್ತಾನು ತುಂಬಿಟ್ಟುಕೊಂಡಿರುವ ಶಿವಮೊಗ್ಗವೆಂಬ ಗೋದಾಮಿನಲ್ಲಿ ಆತನ ಪರವಾಗಿ ಸದ್ಯ ಕಾಣಿಸಿಕೊಳ್ಳುತ್ತಿರೋದು ನಾಲ್ಕು ಮುಖಗಳು ಮಾತ್ರ. ಗಿರೀಶ್ ಪಾಟೀಲ್, ದತ್ತಾತ್ರಿ, ಚನ್ನಬಸಪ್ಪ, ಜ್ಞಾನೇಶ್ ಎಂಬ ಆರ್‌ಎಸ್‌ಎಸ್ ಚತುಷ್ಟರೇ ಶಿವಮೊಗ್ಗದ ರಾಜಕಾರಣವನ್ನು ಕೋಮುವಾದಿಗೊಳಿಸಿದ ಮೆಗಾ ವ್ಯಾಧಿಗಳು. ಹಿಂದೊಮ್ಮೆ ಯಡ್ಡಿಯ ಅಂತಃಪುರದಲ್ಲೇ ತಳವೂರಿ ಆತ ಸಿಎಂ ಆದಾಗ ಭರಪೂರ ಹುದ್ದೆಗಳಲ್ಲಿ ಉಂಡೆದ್ದು ಬಂದವರು ಇದೀಗ ಈಶುನ ಬಗಲು ಸೇರಿಕೊಂಡಿದ್ದಾರೆ. ಗಿರೀಶ್ ಪಾಟೀಲ್ ಯಡ್ಡಿ ಕೃಪೆಯಿಂದ ಕ್ರೀಡಾ ಪ್ರಾಧಿಕಾರದ ಅಧ್ಯಕ್ಷನಾಗಿದ್ದ ಇನ್ನು ದತ್ತಾತ್ರಿ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿದ್ದ ಹಾಗೇ ಚನ್ನಬಸಪ್ಪ ಮತ್ತು ಜ್ಞಾನೇಶರೂ ಇದೇ ಪ್ರಾಧಿಕಾರದ ಅಧ್ಯಕ್ಷರಾಗಿದ್ದವರು. ಯಡ್ಡಿಯಿಂದ ಇಷ್ಟೆಲ್ಲಾ ಕೃತಾರ್ಥರಾದರು ಇದೀಗ ತಮ್ಮ ಸಮಯಸಾಧಕತನದಿಂದ ಈಶು ದಾರಿ ತಪ್ಪಿಸಲು ಅಣಿಯಾಗಿ ಕೂತಿದ್ದಾರೆ. ಅವರೇ ಆರೆಸ್ಸೆಸ್ಸಿಗ ಸಂತೋಷ್ ಮತ್ತು ಈಶು ನಡುವಿನ ಪ್ರಧಾನ ಲೋಕಲ್ ಕೊಂಡಿಗಳು. ಅವರ ಮಾತನ್ನು ಕಟ್ಟಿಕೊಂಡೇ ಈಶು, ಯಡ್ಡಿಯನ್ನು ಸೈಡ್‌ಲೈನ್‌ಗೆ ತಳ್ಳಿಬಿಟ್ಟರೆ ಮಿ'ಷ'ನ್-150ಯಲ್ಲಿ ನಾನೇ 'ಸೀಯೆಂ' ಆಗಿ ಬಿಡಬಹುದು ಅನ್ನೋ ಕನವರಿಕೆಗೆ ಬಿದ್ದಂತಿದೆ.


ಈಶು ಇಷ್ಟೆಲ್ಲಾ ರಂಪಾಟ ಮಾಡಿ ಟಿಕೆಟ್ ತಂದರೂ ಈಶು ಶಿವಮೊಗ್ಗದಲ್ಲಿ ಗೆದ್ದು ಬರೋದು ಪೂರಾ ಡೌಟು. ಮೊದಲನೆಯದಾಗಿ ಶಿವಮೊಗ್ಗದಲ್ಲಿ ಈಶು ಕೈಹಿಡಿಯುತ್ತಿದ್ದುದು ಬ್ರಾಹ್ಮಣ ಮತ್ತು ಲಿಂಗಾಯತ ಓಟುಗಳು. ಆರೆಸ್ಸೆಸ್ ಕಾರಣಕ್ಕೆ ಬ್ರಾಹ್ಮಣರು, ಯಡ್ಡಿಯ ಕಾರಣಕ್ಕೆ ಲಿಂಗಾಯತರು ಕಮಲಕ್ಕೆ ಮತ ಒತ್ತುತ್ತಿದ್ದರೇ ವಿನಃ ಈಶು 'ಮಾತು'ಗಳಿಗೆ ಮರುಳಾಗಿ ಅಲ್ಲ. ಅದು 2013ರ ಎಲೆಕ್ಷನ್‌ನಲ್ಲೇ ಸಾಬೀತಾಗಿದೆ. ಕಾಂಗ್ರೆಸ್‌ನ ಕೆ.ಬಿ. ಪ್ರಸನ್ನಕುಮಾರ್ ಬ್ರಾಹ್ಮಣನಾದ್ದರಿಂದ ಕಳೆದ ಎಲೆಕ್ಷನ್‌ನಲ್ಲಿ ಆ ಮತಗಳು ಸಾರಾಸಗಟು ಕೈ ಪಾರ್ಟಿಗೆ ಹರಿದುಹೋಗಿವೆ. ಮುಂದಿನ ಎಲೆಕ್ಷನ್‌ನಲ್ಲೂ ಅವು ಜಾತಿನಿಷ್ಠೆಯನ್ನು ಪ್ರದರ್ಶಿಸುವುದರಲ್ಲಿ ಅನುಮಾನವಿಲ್ಲ. ಇನ್ನು ಯಡ್ಡಿಯನ್ನು ಈ ಪರಿ ಕಾಡಿದ, ಅದಕ್ಕಿಂತಲೂ ಹೆಚ್ಚಾಗಿ ಸ್ಥಳೀಯವಾಗಿ ಲಿಂಗಾಯತರ ನಡುವೆ ಸಜ್ಜನ ಎಂಬ ಇಮೇಜ್ ಇರುವ ಉದ್ಯಮಿ ರುದ್ರೇಗೌಡರಿಗೆ ಕಾಟಕೊಟ್ಟು ಟಿಕೆಟು ತಪ್ಪಿಸಿದ ಈಶುಗೆ ಮತ ಹಾಕಲು ಲಿಂಗಾಯತರು ಸುತರಾಂ ಒಪ್ಪುವುದಿಲ್ಲ. ಉಳಿದಂತೆ ಒಬಿಸಿಗಳಿಗೆ ಈಶ್ವರಪ್ಪನ 'ಹಿಂದ'ಕ್ಕಿಂತ, ಸಿದ್ದರಾಮಯ್ಯನ 'ಅಹಿಂದ'ದಲ್ಲೇ ಪ್ರಾಮಾಣಿಕತೆ ಕಾಣಿಸುತ್ತಿರೋದರಿಂದ ಅವು ಸಹ ಹೆಚ್ಚೂಕಮ್ಮಿ ಕಾಂಗ್ರೆಸ್ ಪಾಲಾಗುವುದೇ ನಿಕ್ಕಿ. ಈ ಭಯ ಈಶುಗೆ ಇರುವುದರಿಂದಲೇ ಮೊನ್ನೆ ಶಿವಮೊಗ್ಗದ ಸ್ತ್ರೀ ಶಕ್ತಿಗಳನ್ನೆಲ್ಲ ಗುಡ್ಡೆ ಹಾಕಿಕೊಂಡು ತೀರ್ಥಯಾತ್ರೆ ನೆಪದಲ್ಲಿ ಮತ ರಾಜಕಾರಣ ನಡೆಸಿದ್ದು. ಹೆಂಗಸರೆಂದರೆ ಕೊಂಚ ಧರ್ಮ-ಕರ್ಮ ನೋಡ್ತಾರೆ, ಹಾಗಾಗಿ ಅವರನ್ನೆಲ್ಲ ಧಾರ್ಮಿಕ ಕ್ಷೇತ್ರಗಳ ಬಾಗಿಲಲ್ಲಿ ನಿಲ್ಲಿಸಿ 'ಋಣಭಾರ' ಹೊರಿಸಿಬಿಟ್ಟರೆ ತಮ್ಮ ಗಂಡಂದಿರು, ಕುಟುಂಬದ ಸಮಸ್ತ ಓಟುಗಳನ್ನೂ ಹಾಕಿಸಿಬಿಡುತ್ತಾರೆ ಅನ್ನೋ ಭರ್ಜರಿ ಪ್ಲಾನು ಈಶ್ವರಪ್ಪನದು. ಆದರೆ ಶಿವಮೊಗ್ಗದ ರಾಜಕಾರಣ ಅಷ್ಟು ಸರಳವಲ್ಲ.


ಪರಿಸ್ಥಿತಿ ಹೀಗಿರುವಾಗ ಆ ನಾಲ್ಕೇ ನಾಲ್ಕು ಮಂದಿಯನ್ನು ನಂಬಿ ಈಶು ಬಂಡಾಯದ ಕಹಳೆ ಊದುತ್ತಾನೆಂದರೆ ಇದು ಹುಚ್ಚಾಟವಲ್ಲದೆ ಇನ್ನೇನು? ಒಂದಂತೂ ಸತ್ಯ ಈಶು ಈಗ ಆರೆಸ್ಸೆಸ್ ಎಂಬ ಉಸುಕಿನ ಮಧ್ಯೆ ಸಿಲುಕಿದ್ದಾರೆ. ಆತ ಮೇಲೆಬರಲು ಬಡಿದಾಡಿದಷ್ಟೂ ಸದ್ಯಕ್ಕೆ ಆಸರೆ ಕೊಟ್ಟ ಉಸುಕು ನೆಲವೇ ಅವರನ್ನು ಆಪೋಷನ ತೆಗೆದುಕೊಂಡುಬಿಡುತ್ತೆ. ಬಂಗಾರು ಲಕ್ಷ್ಮಣ್ ಅಧ್ಯಾಯ ಹಾದು ಬಂದ ಆರೆಸ್ಸೆಸ್‌ಗೆ ಇದು ಹೊಸದೂ ಅಲ್ಲ, ಈಶು ಮೊದಲಿಗನೂ ಅಲ್ಲ!

ಹಾಗೆ ನೋಡಿದರೆ ಯಡ್ಡಿಯ ಸ್ಥಿತಿ ಈಶುಗಿಂತ ಭಿನ್ನವೇನೂ ಇಲ್ಲ. ಆತನೂ ಅದೇ ಉಸುಕಿನಲ್ಲಿ ತಗುಲಾಕಿಕೊಂಡಿರುವ ಮನುಷ್ಯ. ಮಿಷನ್-150 ಯಶಸ್ವಿಯಾದರೆ ತಾನೇ ಮುಖ್ಯಮಂತ್ರಿ ಅನ್ನೋ ಹಗಲುಗನಸಿನಲ್ಲಿದ್ದಾರೆ. ಕೇಂದ್ರದಲ್ಲಿ ಅಡ್ವಾಣಿಗಾದ ಗತಿಯೇ ಇಲ್ಲಿ ಯಡ್ಡಿಗೆ ಕಾದಿದೆ. ಕರ್ನಾಟಕದಲ್ಲಿ ತಾನು ಅಧಿಕಾರ ಹಿಡಿಯಬೇಕೆಂದರೆ ಲಿಂಗಾಯತ ಮತಗಳು ಅನಿವಾರ್ಯ ಮತ್ತು ಯಡ್ಡಿಯನ್ನು ಮುಂದಿಟ್ಟುಕೊಂಡರೆ ಮಾತ್ರ ಅದು ಸಾಧ್ಯ ಎಂಬುದು ಬಿಜೆಪಿಯ ಆರೆಸ್ಸೆಸ್ ಕೋರ್‌ಗೆ ಅರ್ಥವಾಗಿದೆ. ಆದರೆ ಯಡ್ಡಿಯನ್ನು ಗಾಳದ ಹುಳುವಾಗಿಸುವುದಷ್ಟೇ ಆರೆಸ್ಸೆಸ್‌ನ ಹಿಕಮತ್ತು. ಅಧಿಕಾರದ ಹೊಸ್ತಿಲಿಗೆ ಬಂದು ನಿಲ್ಲುತ್ತಿದ್ದಂತೆಯೇ ಯಡ್ಡಿಗೆ ಗೇಟ್‌ಪಾಸ್ ಕೊಟ್ಟು ಕೇಸರಿ ಮುಖವನ್ನೇ ಮುಖ್ಯಮಂತ್ರಿಯಾಗಿ ಹೇರಲು ಆರೆಸ್ಸೆಸ್ ಸಜ್ಜಾಗಿದೆ. ಆ ಕಾರಣಕ್ಕೇ ಅಮಿತ್ ಶಾ ಯಡ್ಡಿಯನ್ನು ಭಾವಿ ಮುಖ್ಯಮಂತ್ರಿ ಎನ್ನುತ್ತಲೇ "ನಮ್ಮ ಪಕ್ಷದಿಂದ ಭ್ರಷ್ಟಾಚಾರ ಆರೋಪ ಹೊತ್ತವರು ಮುಖ್ಯಮಂತ್ರಿ ಅಭ್ಯರ್ಥಿಯಾಗಲು ಸಾಧ್ಯವಿಲ್ಲ" ಅಂತ ಇನ್ನೆಲ್ಲೋ ಹೇಳಿಬಿಡುತ್ತಾನೆ. ಯಡ್ಡಿಯನ್ನು ಸೈಡ್‌ಗೆ ತಳ್ಳಲು ಭ್ರಷ್ಟಾಚಾರದ ಪ್ರಕರಣಗಳಂತೂ ಕೋರ್ಟಿನಲ್ಲಿವೆ. ಅಡ್ವಾಣಿ ಇನ್ನೇನು ರಾಷ್ಟ್ರಪತಿ ಆಗಿಬಿಡುತ್ತಾರೆ ಅನ್ನೋ ಹೊತ್ತಿಗೆ ಬಾಬ್ರಿ ಮಸೀದಿ ಪ್ರಕರಣಕ್ಕೆ ಮರುಜೀವ ನೀಡಿದಂತೆ ಅವುಗಳಿಗೂ ಜೀವ ತುಂಬಿಬಿಟ್ಟರೆ ಯಡ್ಡಿ ಕತೆ ಫಿನಿಶ್ಡ್! ಅದರ ಜೊತೆಗೆ ಅಡ್ವಾಣಿಯನ್ನು ಮೂಲೆಗೆ ತಳ್ಳಲು ಮೋದಿ ಬಳಸಿದ 'ಏಜ್-75' ಮುದಿ ಅಸ್ತ್ರಕ್ಕೂ ಯಡ್ಡಿ ಮೊನ್ನೆಮೊನ್ನೆ ಅರ್ಹತೆ ಗಿಟ್ಟಿಸಿಕೊಂಡಾಗಿದೆ.

ಅಲ್ಲಿಗೆ ಯಡ್ಡಿ ಬದ್ನಾಮ್ ಆಗೋದು ಶತಃಸಿದ್ಧ. ಯಡ್ಡಿ ದುಶ್ಮನಿಗೆ ತುತ್ತಾಗಿ ಈಶು ಬರ್ಬಾದ್ ಆಗೋದು ನಿಕ್ಕಿ. ಹೇಗಿದೆ ನೋಡಿ ಆರೆಸ್ಸೆಸ್‌ನ ಜೋಡಿ ಮುಹೂರ್ತ!

■ ಟಿ.ಎನ್. ಷಣ್ಮುಖ


ಈಶ್ವರಪ್ಪ


ಯಡಿಯೂರಪ್ಪ

ಚಾಕಲೇಟ್ ಈಶುವಿನ ಪೊಲಿಟಿಕ್ಸ್

1989ಕ್ಕೂ ಮುನ್ನ ವಿವೇಕ ಸುಪಾರಿ ಚೀಟ್ ಮತ್ತು ಚಾಕೋಲೇಟ್ ಏಜೆನ್ಸಿ ನಡೆಸಿಕೊಂಡು ಬ್ಯಾಡರಕೇರಿಯಲ್ಲಿ ಬದುಕುತ್ತಿದ್ದ ಈಶ್ವರಪ್ಪನ ಪೊಲಿಟಿಕ್ಸ್ ಶುರುವಾದದ್ದೇ ಕಾಂಗ್ರೆಸ್‌ನ ಕೃಪೆಯಿಂದ. 1989ರ ಸಾರ್ವತ್ರಿಕ ಎಲೆಕ್ಷನ್‌ನಲ್ಲಿ ಶಿವಮೊಗ್ಗ ಮತ್ತು ಸೊರಬಗಳು ಪ್ರತಿಷ್ಠೆಯ ಕಣಗಳಾಗಿದ್ದವು. ಯಾಕೆಂದರೆ ಮುಖ್ಯಮಂತ್ರಿಯಾಗಲು ತುದಿಗಾಲಲ್ಲಿ ನಿಂತಿದ್ದ ಬಂಗಾರಪ್ಪ ಸೊರಬದಲ್ಲಿ ಸ್ಪರ್ಧಿಸಿದ್ದರೆ, ಹಿಂದಿನ ಸರ್ಕಾರದಲ್ಲಷ್ಟೇ ಆರೋಗ್ಯ ಮಂತ್ರಿಯಾಗಿ ವರ್ಚಸ್ಸು ಹೊಂದಿದ್ದ ಕೆ.ಎಚ್.ಶ್ರೀನಿವಾಸ್ ಶಿವಮೊಗ್ಗದಲ್ಲಿ ಸ್ಪರ್ಧಿಸಿದ್ದರು. ಇಬ್ಬರೂ ಕಾಂಗ್ರೆಸ್ ಕಟ್ಟಾಳುಗಳೆ. ಆದರೆ ತಾನು ಮುಖ್ಯಮಂತ್ರಿಯಾಗಲು ಶ್ರೀನಿವಾಸ್ ಪ್ರತಿಸ್ಪರ್ಧಿಯಾಗಬಲ್ಲರು ಎಂಬ ಅಳುಕು ಬಂಗಾರಪ್ಪನಿಗೆ ಕಾಡಲು ಶುರುವಾಗಿತ್ತು, ಅದೇ ಅಳುಕು ಶ್ರೀನಿವಾಸ್‌ಗೂ ಇತ್ತು. ಹಾಗಾಗಿ ಒಬ್ಬರನ್ನೊಬ್ಬರು ಸೋಲಿಸಲು ತಂತ್ರ ಹೆಣೆದಿದ್ದರು.

ಬಂಗಾರಪ್ಪನ ತಂತ್ರಗಾರಿಕೆ ಕೊಂಚ ಮೇಲುಗೈ ಸಾಧಿಸಿತ್ತು, ಶ್ರೀನಿವಾಸ್‌ಗೆ ಎದುರಾಳಿಗಳಾಗಿ ತನ್ನ ಬೆಂಬಲಿಗರಾದ ಕ್ರಾಂತಿದೀಪ ಪತ್ರಿಕೆಯ ಎಸ್.ಬಿ. ರಾಮಪ್ಪ ಮತ್ತು ಎಚ್ಚರಿಕೆ ಪತ್ರಿಕೆಯ ನಾಗೇಂದ್ರರನ್ನು ಪಕ್ಷೇತರರಾಗಿ ಕಣಕ್ಕಿಳಿಸಿದರು. ಇವರಿಬ್ಬರೂ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡವರೆ. ತಕ್ಕಮಟ್ಟಿಗೆ ತನ್ನದೇ ಆದ ಪ್ರಭಾವವನ್ನೂ ಹೊಂದಿದ್ದಂತವರು. ಆಗಿನ್ನೂ ಶಿವಮೊಗ್ಗದಲ್ಲಿ ಬಿಜೆಪಿಯ ಅಲೆಯಿರಲಿ, ಸಣ್ಣದೊಂದು ಸುಳಿಯೂ ಇರಲಿಲ್ಲ, ಅದು ಈಶ್ವರಪ್ಪನ ಮೊದಲ ಎಲೆಕ್ಷನ್. ಕಾಂಗ್ರೆಸ್‌ನೊಳಗೆ ಬಂಡಾಯವೇರ್ಪಟ್ಟು ಮೂವರ ನಡುವೆ ಮತಗಳು ವಿಭಜನೆಯಾದ್ದರಿಂದ ಈಶು, ಕೆ.ಎಚ್. ಶ್ರೀನಿವಾಸ್ ವಿರುದ್ಧ ಕೇವಲ 1304 ಮತಗಳ ಅಂತರದಲ್ಲಿ ಗೆದ್ದು ಬಂದಿದ್ದರು.

ಅಲ್ಲಿಂದಾಚೆಗೆ ಆರ್‌ಎಸ್‌ಎಸ್ ಕರುಳಬಳ್ಳಿ ಸಂಬಂಧದ ಬಿಜೆಪಿ ರಾಜಕಾರಣದಲ್ಲಿ ನಿರಾಯಾಸವಾಗಿ ಬ್ರಾಹ್ಮಣ-ಕೋಮುವಾದಿ ರಾಜಕಾರಣದ ಬೆಂಬಲದಿಂದ ಗೆಲ್ಲುತ್ತ ಬಂದ ಈಶುಗೆ 2013ರ ಚುನಾವಣೆ ಸತ್ಯವನ್ನು ಅರ್ಥ ಮಾಡಿಸಿದೆ. ಈಶ್ವರಪ್ಪನ ಈ ಹಿಂದಿನ ಗೆಲುವುಗಳ ಸಂದರ್ಭದಲ್ಲಿ ಈಶು-ಯಡ್ಡಿ ನಡುವೆ ಅಪಾರ ಅನ್ಯೋನ್ಯತೆ ಇತ್ತು ಅನ್ನೋದನ್ನು ನಿರ್ಲಕ್ಷಿಸಲಿಕ್ಕಾಗುವುದಿಲ್ಲ.

ಭಾರತದಲ್ಲಿ ವೈದಿಕ ಪೂರ್ವದಲ್ಲಿಯೇ ನಾಗಾ ...ಾಜವೊಂದು ಅಸ್ತಿತ್ವದಲ್ಲಿ ಇತ್ತು ಎಂಬುದನ್ನು ಡಾ. ...ಬೇಡ್ಕರ್ ಅವರು ತಮ್ಮ ಅಧ್ಯಯನದಲ್ಲಿ ಉಲ್ಲೇಖಿಸಿದ್ದಾರೆ. ...ನಾಡಿನಲ್ಲೂ ನಾಗಾ ಸಂಸ್ಕೃತಿ ಇತ್ತು, ಇಲ್ಲಿಯ ಜನತೆಯ ...ಯಲ್ಲಿ ಕೊರಗ ರಾಜ ಹುಬಾಶಿಕನನ್ನು ಬ್ರಾಹ್ಮಣ ...ಬ ರಾಜ ಮಯೂರಶರ್ಮ ಮೋಸದಿಂದ ಕೊಂದು ...ನಾಡನ್ನು ವಶಪಡಿಸಿಕೊಳ್ಳುವ ಕಥೆ ಇಂದಿಗೂ ಪಾಡ್ದನ ...ಪದಲ್ಲಿ ಉಳಿಸಿಕೊಳ್ಳಲಾಗಿದೆ. ಆದರೆ ಇತ್ತೀಚಿನ ...ಗಳಲ್ಲಿ ಹಿಂದೂ ಮತೀಯವಾದಿಗಳು ತುಳುನಾಡಿನ ...ವಾಸಿಗಳ ದೈವಾರಾಧನೆಯಲ್ಲೂ ಕೇಸರೀಕರಣ ...ದ್ದಾರೆ. ಕೊರಗಜ್ಜ (ಕೊರಗ ತನಿಯ) ಎಂಬ ಹೆಸರಿನ ...ಗ ಜನಾಂಗದ ದೈವವನ್ನು ಕೊರಗೇಶ್ವರ ಅಥವಾ ...ರಗಸ್ವಾಮಿ ಎಂದು ಕರೆದು ಅದು ಶಿವನ ಅವತಾರ ...ು ವೈದಿಕೀಕರಣ ಮಾಡಲು ಪ್ರಯತ್ನಿಸುತ್ತಿದ್ದಾರೆ. ಅಷ್ಟೇ ... ಕೊರಗ ತನಿಯ ಎಂಬ ಐತಿಹಾಸಿಕ ಪುರುಷನಿಗೆ ...ಪುರ ಎಂಬಲ್ಲಿ ಏಳು ಕೋರಪ್ಪೋಳು ಎಂಬ ಏಳು ...ಗಳ ಸಂಬಂಧ ಕಲ್ಪಿಸಲು ಪ್ರಯತ್ನಿಸಿ ...ಬ್ರಹ್ಮಚಾರಿಯಾಗಿದ್ದ ಇತಿಹಾಸದ ಕೊರಗಜ್ಜನನ್ನು ವಿವಾಹಿತ ಎಂದು ಬಿಂಬಿಸಲು ವೈದಿಕರು ಕುತಂತ್ರ ಮಾಡುತ್ತಿದ್ದಾರೆ ಹಾಗೂ ವೈದಿಕ ದೇವರಂತೆ ಕೊರಗಜ್ಜನೂ ಲೈಂಗಿಕ ರಸಿಕನಾಗಿದ್ದ ಎನ್ನುವ ರೀತಿಯಲ್ಲಿ ಇತಿಹಾಸ ತಿರುಚಲು ಮೇಲ್ಜಾತಿಯವರು ಪ್ರಯತ್ನಿಸುತ್ತಿದ್ದಾರೆ. ಗೋಮಾಂಸದ ನೆಪದಲ್ಲಿ ಕಣ್ಣಿಗೆ ಕಾಣುವ ಜೀವಂತ ಕೊರಗರನ್ನು ಮಾರಣಾಂತಿಕವಾಗಿ ಬಡಿಯುವ ಸವರ್ಣೀಯರು ಕಣ್ಣಿಗೆ ಕಾಣದ ಅಲೌಕಿಕ ಕೊರಗಜ್ಜನನ್ನು ಪೂಜಿಸುವ ನಾಟಕ ಆಡುತ್ತಿರುವುದು ಅವರ ಅಪಾಯಭೂತಿತನಕ್ಕೆ ಸಾಕ್ಷಿ ಅಷ್ಟೇ.

ಚಿಕ್ಕಂದಿನಲ್ಲಿ ನನ್ನ ಅಜ್ಜಿ ನನಗೆ ಯಾವಾಗಲೂ ಹೇಳುತ್ತಿದ್ದರು- ಕೊರಗರು ನಮ್ಮ ಪೂರ್ವಜರಾಗಿದ್ದರು, ಅವರು ತುಂಬಾ ಮುಗ್ಧರು ಹಾಗೂ ಪ್ರಕೃತಿದೇವಿಯ ಪ್ರಿಯ ಮಕ್ಕಳು. ಆದುದರಿಂದ ಅವರ ಮನಸ್ಸಿಗೆ ಬೇಸರ ಆಗುವಂತೆ ನೀವು ಯಾವುದನ್ನೂ ಮಾಡಬಾರದು. ಕಾರಣ ಒಂದುವೇಳೆ ಕೊರಗರು ಶಪಿಸಿದರೆ ಅದು ನಿಮಗೆ ತಾಗುವುದು ನಿಶ್ಚಿತ ಎಂದಿದ್ದರು ಅಜ್ಜಿ. ಹಾಗಾಗಿ ಇನ್ನು ಕರಾವಳಿಯಲ್ಲಿ ಬಜರಂಗದಳದವರ ಅವಸಾನ ಖಚಿತ.

■ ಆರ್.ಬಿ.ಶೇಣವ, ಮಂಗಳೂರು





ವಿಕ್ರಮ ಮೆರೆದ ಬಾಹುಬಲಿ-2

ಅಮೀರ್ ಖಾನ್‌ನ 'ದಂಗಲ್' ಬಿಡುಗಡೆಯಾದ ಮೊದಲ ದಿನಕ್ಕೇ ಗಳಿಸಿದ್ದು 30 ಕೋಟಿ. ವಿಶ್ವಾದ್ಯಂತ ನಾಲ್ಕು ಸಾವಿರಕ್ಕೂ ಅಧಿಕ ಥೇಟರುಗಳಿಂದ ಗಳಿಸಿದ್ದ ಈ ಮೊತ್ತ ಆತನಕ ದೇಶದ ಯಾವುದೇ ಚಿತ್ರವೊಂದು ಬಿಡುಗಡೆಯಾದ ಮೊದಲ ದಿನಕ್ಕೆ ಗಳಿಸಿದ್ದ ಮೊತ್ತದ ಪಟ್ಟಿಯಲ್ಲಿ ಎರಡನೆಯದಾಗಿತ್ತು, ಮೊದಲ ಸ್ಥಾನವೇನಿದ್ದರೂ ಸಲ್ಮಾನ್‌ಖಾನ್‌ನ ಸುಲ್ತಾನ್. ಅದು ಮೊದಲ ದಿನಕ್ಕೇ 36.59 ಕೋಟಿ ಖಮಾಯಿಸುವ ಮೂಲಕ ದೇಶದ ಬೇರಾವುದೇ ಚಿತ್ರವೊಂದು ಸಾಧಿಸದ ವಿಕ್ರಮಕ್ಕೆ ಕಾರಣವಾಗಿತ್ತು.


ಹಿಂದಿಯ ವಿಶಾಲ ಸಿನಿಮಾ ಮಾರುಕಟ್ಟೆ, ದೇಶವಿದೇಶಗಳ ಅದರ ಪ್ರೇಕ್ಷಕ ಸಮೂಹ, ವಿಶೇಷವಾಗಿ ಪಾಕಿಸ್ತಾನದಿಂದ ಹುಟ್ಟುವ ಆದಾಯಕ್ಕೆ ಲೆಕ್ಕ ಹಾಕಿದರೆ ತೆಲುಗಿನಲ್ಲಿ ರಾಜಮೌಳಿ ಸೃಷ್ಟಿಸಿದ 'ಬಾಹುಬಲಿ' ಹತ್ತರಲ್ಲಿ ಹನ್ನೊಂದನೆಯದಾಗಬೇಕಿತ್ತು. ಏಕೆಂದರೆ ದಕ್ಷಿಣ ಭಾರತೀಯರ ಬಗ್ಗೆ ಹಿಂದಿ ರಾಜ್ಯಗಳ ತಾತ್ಸಾರವಿದೆಯಲ್ಲ; ಅದು ಬಾಹುಬಲಿಯ ವಿಷಯಕ್ಕೂ ಮುಂದುವರಿದು ಒಂದಷ್ಟು ಗಮನ ಸೆಳೆಯಬಹುದೇ ಹೊರತು ಬಾಲಿವುಡ್‌ನ ಖಾನ್‌ಗಳ ಸಾಮ್ರಾಜ್ಯದ ಕೂದಲನ್ನೂ ಕೊಂಕದೆಂದೇ ರಾಷ್ಟ್ರೀಯ ಮಟ್ಟದ ಇಂಗ್ಲಿಷ್ ವಿಮರ್ಶಕರೆಲ್ಲ ಉಡಾಫೆಗೈದಿದ್ದು ಮೊದಲನೇ ದಿನಕ್ಕೇ ತಲೆಕೆಳಕಾಗಿ ಹೋಯಿತು!

ಬಾಹುಬಲಿ ಎರಡನೇ ಆವೃತ್ತಿಯ ಹಿಂದಿ ಚಿತ್ರದ ಮೊದಲ ದಿನದ ಗಳಿಕೆಯೇ 54 ಕೋಟಿ. ಅಂದರೆ ಈತನಕ ದೇಶದ ಯಾವುದೇ ಭಾಷೆಯ ಚಿತ್ರವೊಂದು ಗಳಿಸಲಾಗದಷ್ಟು.

ಈತನಕ ಅತೀಹೆಚ್ಚು ಗಳಿಕೆ ಕಂಡ ಭಾರತೀಯ ಚಿತ್ರಗಳ ಪೈಕಿ ಮೊದಲ ಸ್ಥಾನದಲ್ಲಿದ್ದದ್ದು ರಜನಿಯ ಕಬಾಲಿ. ಅನಂತರದ್ದು ಅಮೀರ್‌ಖಾನ್‌ನ ದಂಗಲ್. ತದನಂತರ ಸಲ್ಮಾನ್‌ನ ಭಜರಂಗಿ ಭಾಯಿಜಾನ್, ಬಾಹುಬಲಿ ಮೊದಲ ಆವೃತ್ತಿ ನಾಲ್ಕನೇ ಸ್ಥಾನಕ್ಕಾದರೆ ಸುಲ್ತಾನ್ ಐದನೇ ಅತೀಹೆಚ್ಚು ಗಳಿಕೆಯ ಚಿತ್ರವಾಗಿತ್ತು, ಆದರೆ ಬಾಹುಬಲಿ-2 ಈ ಎಲ್ಲಾ ದಾಖಲೆಗಳನ್ನೂ ನೆಲಸಮಗೊಳಿಸಿದೆ. ಒಟ್ಟಾರೆಯಾಗಿ ಅಮೀರ್ ಖಾನ್‌ನ ಪಿಕೆ ಗಳಿಸಿದ 700 ಕೋಟಿ ಮತ್ತು ದಂಗಲ್ ಗಳಿಸಿದ 800 ಕೋಟಿಗೆ ಹೋಲಿಸಿದರೆ ಬಾಹುಬಲಿ-2 ನಾಲ್ಕನೇ ದಿನಕ್ಕೇ 650 ಕೋಟಿ ಸಂಪಾದಿಸಿದೆ. ಹಿಂದಿ ಆವೃತ್ತಿಯೊಂದೇ ಮೂರನೇ ದಿನಕ್ಕೆ 125 ಕೋಟಿ ದುಡಿದಿತ್ತು, ನಾಲ್ಕನೇ ದಿನಕ್ಕದು 150 ಕೋಟಿಗೇರಿದೆ. ಅಂದರೆ ಬಿಡುಗಡೆಯಾದ ಮೊದಲ ವಾರದ ಹೊತ್ತಿಗದು ಸಾವಿರ ಕೋಟಿ ಮುಟ್ಟುವುದು ಶತಸ್ಸಿದ್ಧ. ಇದರರ್ಥ ಬಾಹುಬಲಿ-2 ಭಾರತೀಯ ಚಿತ್ರರಂಗದ ಸಕಲ ವಿಕ್ರಮಗಳನ್ನೂ ಚಿಂದಿಯೆಬ್ಬಿಸಿದೆ, ಈತನಕ ಯಾವೊಂದು ಚಿತ್ರವೂ ಏರದ ಉತ್ತುಂಗಕ್ಕೇರಿದೆ.

ಹಾಗೆ ನೋಡಿದರೆ ಬಾಹುಬಲಿ-2 ಮೂಲತಃ ತೆಲುಗು ಚಿತ್ರ. ತಮಿಳು ನಟ ಸತ್ಯರಾಜ್ ಹೊರತುಪಡಿಸಿದರೆ ತಮಿಳಿಗೇನೂ ಇದು ಪಕ್ಕಾ ಸಂಬಂಧಿಯೇನಲ್ಲ. ಪ್ರಭಾಸ್ ಆಂಧ್ರ-ತೆಲಂಗಾಣಗಳನ್ನು ಹೊರತುಪಡಿಸಿ ದೇಶದ ಬೇರಾವ ಪ್ರಾಂತ್ಯಕ್ಕೂ ಜನಪ್ರಿಯನೇನಲ್ಲ, ರಜನಿ, ಸಲ್ಮಾನ್, ಅಮೀರ್, ಶಾರುಖ್‌ಗೆ ಹೋಲಿಸಿದರೆ ರಾಣಾ ದಗ್ಗುಪಾಟಿಯಾಗಲಿ, ಪ್ರಭಾಸ್ ಆಗಲಿ ಸಲ್ಮಾನ್, ಶಾರುಖ್ ಮಟ್ಟಕ್ಕಿರಲಿ ಅಂತರರಾಜ್ಯ ಮಟ್ಟದ ಸ್ಟಾರ್‌ಗಳೂ ಅಲ್ಲ. ರಜನಿ, ಚಿರಂಜೀವಿ, ಮೋಹನ್‌ಲಾಲ್, ಮುಮ್ಮಟ್ಟಿಯಂಥ ದಕ್ಷಿಣ ಭಾರತದ ಮೇರು ನಟರಿಗೆ ಹೋಲಿಸಿದರೆ ಪ್ರಭಾಸ್ ತೆಲುಗಿನ ವ್ಯಾಪ್ತಿ ಮೀರಿದವನಲ್ಲ. ಅನುಷ್ಕಾ ಶೆಟ್ಟಿಯಂಥ ದಕ್ಷಿಣದ ಗ್ಲಾಮರ್ ರಾಣಿಗೆ ಹಿಂದಿ ರಾಜ್ಯಗಳಲ್ಲಿ ಸಣ್ಣ ಅಸ್ತಿತ್ವವೂ ಇದ್ದಂತಿಲ್ಲ. ಅಂಥಾದ್ದರಲ್ಲಿ ರಜನಿ, ಸಲ್ಮಾನ್, ಶಾರುಖ್, ಅಮೀರ್‌ರಂಥ ಯಾರೇ ದೈತ್ಯರಿಲ್ಲದೆ ರಾಷ್ಟ್ರವ್ಯಾಪಿ ಗ್ಲಾಮರ್‌ನ ಹೀರೋಯಿನ್ನುಗಳೂ ಇಲ್ಲದೆ ಕೇವಲ ನಿರ್ದೇಶಕನೊಬ್ಬನ ಪ್ರತಿಭೆ ಮತ್ತು ಪರಿಶ್ರಮವೊಂದನ್ನೇ ಆಧರಿಸಿ ಮಿಕ್ಕೆಲ್ಲ ಅಂಶಗಳನ್ನೂ ಮೀರಿದ ವಿಕ್ರಮ ಸಾಧಿಸುವುದು ಸಣ್ಣ ಮಾತೆ?

ಅದು ಬಾಹುಬಲಿ-2 ರ ತಾಂತ್ರಿಕ ವೈಶಿಷ್ಟ್ಯ ಮತ್ತು ವಿಶ್ವವ್ಯಾಪಿ ಪ್ರಸ್ತುತಿಯ ಕೈಚಳಕ ಮಾತ್ರ. ರಾಜಮೌಳಿಯ ಅಗಾಧ ಪ್ರತಿಭೆ ಮತ್ತು ಅಪ್ರತಿಮ ಪರಿಶ್ರಮ ಸಾಬೀತಾಗಿರುವುದು ಈ ವಿಷಯದಲ್ಲೇ. ಚಿರಂಜೀವಿ ಮಗನ ಮಗಧೀರ, ಸಂಜಯ್‌ಲೀಲಾ ಬನ್ಸಾಲಿಯ ಬಾಜಿರಾವ್



ಮಸ್ತಾನಿ, ಜೋಧಾ ಅಕ್ಬರ್, ಶಾರುಖ್ ಖಾನ್‌ನ ಅಶೋಕಾ, ಹಾಲಿವುಡ್‌ನ ಸ್ಕಾರ್ಪಿಯನ್ ಕಿಂಗ್ ಮುಂತಾದ ಚಿತ್ರಗಳಲ್ಲೂ ಇಂಥದ್ದೇ ಪೌರಾಣಿಕ, ಕಾಲ್ಪನಿಕ, ರೌದ್ರ ಫ್ಯಾಂಟಸಿಯಿತ್ತಾದರೂ ಬಾಹುಬಲಿ ಇವೆಲ್ಲವನ್ನೂ ಮೀರಿಸಿದ ಜನಮನ್ನಣೆ ಗಳಿಸಿದ್ದು ಅದರ ಮಾರುಕಟ್ಟೆ ತಂತ್ರಗಾರಿಕೆಯಿಂದ.

ಬಾಹುಬಲಿ ಮೊದಲ ಭಾಗವನ್ನು ಬಾಲಿವುಡ್ ನಿರ್ದೇಶಕ ಕರಣ್ ಜೋಹರ್ ಖರೀದಿಸಿದ್ದು ಕೇವಲ ಹತ್ತು ಕೋಟಿಗೆ. ಅದನ್ನು ಮಾರ್ಕೆಟಿಂಗ್ ಮಾಡಿದ ರೀತಿ ಮತ್ತು ಬಾಲಿವುಡ್ ತಂತ್ರಗಾರಿಕೆಯಿಂದಾಗಿ ಮೊದಲ ಆವೃತ್ತಿಯಲ್ಲೇ ಕರುಣ್ ಜೋಹರ್ ನೂರೈವತ್ತು ಕೋಟಿ ಬಾಚಿದ್ದ. ಈಗ ಎರಡನೇ ಆವೃತ್ತಿಯ ತಾರ್ಕಿಕ ಅಂತ್ಯದ ಭಾಗವನ್ನೂ ಅದೇ ಕರಣ್ ಜೋಹರ್ ಮತ್ತಷ್ಟು ತಂತ್ರಗಾರಿಕೆ ಮತ್ತು ಪರಿಶ್ರಮದ ಮೂಲಕ ಬಿಡುಗಡೆ ಮಾಡಲು ಬಳಸಿಕೊಂಡಿದ್ದು ಫೇಸ್‌ಬುಕ್, ವಾಟ್ಸಪ್, ಟ್ವಿಟ್ಟರ್‌ನಂಥ ಸಾಮಾಜಿಕ ಜಾಲತಾಣಗಳನ್ನೇ. ಹಿಂದಿ ಅವತರಣಿಕೆಯ... ಬೇರಾವುದೇ ಸೂಪರ್‌ಸ್ಟಾರ್‌ಗಳ ಚಿತ್ರಕ್ಕೆ ಸರಿಸಾಟಿಯಾ... ಪ್ರಸೆಂಟ್ ಮಾಡಿದ ಫಲವಾಗಿ ಬಿಡುಗಡೆಗೂ ಮೊದ... ಬಾಹುಬಲಿ-2 ಬಗ್ಗೆ ಒಂದು ವರ್ಗದ ಪ್ರೇಕ್ಷಕ ಸಮೂಹ... ಕುತೂಹಲವಿತ್ತು. ಸದ್ಯ ಶಾರುಖ್, ಸಲ್ಮಾ... ಅಮೀರ್‌ರಂಥವರ ಯಾವುದೇ ಚಿತ್ರವಿರದಿದ್ದದ್ದು ಮತ್ತ... ಅನುಕೂಲವಾಯಿತು. ಇದರ ಪರಿಣಾಮವೆಂಬ... ವಿಶ್ವವ್ಯಾಪಿಯಾಗಿ ಬರೋಬ್ಬರಿ 9 ಸಾವಿರದಷ್ಟು ತೆರೆಗಳ... ಬಾಹುಬಲಿ ತೆರೆಕಂಡಿತು.


ಚಿತ್ರವೊಂದು ಮೂರೋ ನಾಲ್ಕೋ ಸಾ... ಥೇಟರ್‌ಗಳಲ್ಲಿ ತೆರೆ ಕಾಣುವುದಕ್ಕೂ ಏಕಾಏಕಿ 9 ಸಾ... ಕೇಂದ್ರಗಳಲ್ಲಿ ಬಿಡುಗಡೆಯಾಗುವುದಕ್ಕೂ ಇರುವ ವ್ಯತ್ಯಾ... ಫಲವೇ ಬಾಹುಬಲಿ ಸಾಧಿಸಿದ ವಿಕ್ರಮ. ಮೊದಲ ದಿನ... 125 ಕೋಟಿಯ ಗಳಿಕೆಯೆಂದರೆ ಸಣ್ಣ ಮಾತೆ?



ಯಾವುದೇ ಐತಿಹಾಸಿಕ ಕಥಾಹಂದರವಿಲ್ಲದೆ, ಪೌರಾ... ಮಹತ್ವವಿಲ್ಲದೆ ಚಂದಮಾಮಾ ಟೈಪಿನ ಕಾಲ್ಪ... ಕತೆಯೊಂದನ್ನಿಟ್ಟುಕೊಂಡು ರಾಜಮೌಳಿ ಆಡಿ... ಆಟವಿದೆಯಲ್ಲ ಅದು ಅದ್ವಿತೀಯ ಮತ್ತು ಅಪ್ರತಿ... ಬಾಹುಬಲಿಯ ಕತೆಯೂ ಈ ಹಿಂದೆ ತೆಲುಗಿನಲ್ಲಿ ಬಂ... ಹೋದ ಮಗಧೀರದಂಥದ್ದೇ ಮತ್ತೊಂದು ಕತೆ. ಮಾಹಿ... ಸಾಮ್ರಾಜ್ಯದ ರಾಜಮಾತೆ ಶಿವಗಾಮಿ ದೇವಿಯ ಕ... ಕುಡಿ ಅಮರೇಂದ್ರ ಬಾಹುಬಲಿಯ ಪಟ್ಟಾಭಿಷೇಕಕ್ಕೆ ಎ... ಸಿದ್ಧತೆಗಳೂ ಭರದಿಂದ ಸಾಗಿದೆ. ಚಕ್ರವರ್ತಿಯೊ... ಪಟ್ಟವೇರುವುದಕ್ಕೂ ಮೊದಲು ಆತನಿಗೆ ಪ್ರಜೆಗಳ ಕಷ್ಟಸು... ಸಾಮಾಜಿಕ ಪರಿಜ್ಞಾನ, ಲೋಕಜ್ಞಾನವಿರಬೇಕಲ್ಲ, ಅದಕ್ಕೊ... ರಾಜಮಾತೆ ದೇಶಾಟನೆಗೆ ಹೋಗಿಬರುವಂತೆ ಆದೇಶಿಸು... ಜೊತೆಗೆ ತನ್ನ ಸಹೋದರ ಸಂಬಂಧಿ ಕಟ್ಟಪ್ಪನ... ಕಳುಹಿಸಿಕೊಡುತ್ತಾಳೆ. ಬಾಹುಬಲಿಗೆ ಪಟ್ಟಾಭಿಷೇಕವೆ... ಸುದ್ದಿ ಆತನ ದಾಯಾದಿ ಬಲ್ಲಾಳದೇವನಲ್ಲಿ ಅಸಹನೆ... ಕಿಚ್ಚೆಬ್ಬಿಸಿದೆ. ಬಲ್ಲಾಳನ ತಂದೆ ಕೂಡ ತನಗೆ ... ಸಿಗಲಿಲ್ಲವೆಂದು ... ಮಸೆಯುತ್ತಲೇ ಇರುತ್ತಾನೆ. ... ತನ್ನ ಮಗನಿಗೂ ಪಟ್ಟ ತಪ್ಪಿದ್ದು ಅಪ್ಪಮಗ ಇಬ್ಬರಲ್ಲಿ... ಸೇಡಿನ ರೊಚ್ಚೆಬ್ಬಿಸಿದೆ. ಹೇಗಾದರೂ ಮಾ... ಬಾಹುಬಲಿಯನ್ನು ಮುಗಿಸಿ ತಾವು ಚಕ್ರಾಧಿಪತ್ಯಕ್ಕೆ ಬರ...

...ಾಲಿವುಡ್ ವಿಮರ್ಶಕರ ತಾತ್ಸಾರ ಮತ್ತು ತರುಣ್ ವಿಜಯನ್ ಆರ್ಯನ್ ಮನಸ್ಥಿತಿ

...ಾಲಿವುಡ್ ಚಿತ್ರ ವಿಮರ್ಶಕರ ಮನಸ್ಥಿತಿ ಮತ್ತು ದೃಷ್ಟಿಕೋನಕ್ಕೂ ಬಿಜೆಪಿ ...ಕ ತರುಣ್ ವಿಜಯ್ ದಕ್ಷಿಣದ ದ್ರಾವಿಡರ ಕುರಿತಂತೆ ಮಾಡಿದ ...ಾಳಿಕೆಗೂ ಹೆಚ್ಚು ವ್ಯತ್ಯಾಸವೇನಿಲ್ಲ. ಬಾಹುಬಲಿ ಒಂದು ಫ್ಯೂಡಲ್ ...ಂದೂ ಅದು ಪುರುಷ ಪ್ರಧಾನ ಮೌಲ್ಯಗಳನ್ನು ಪ್ರತಿಪಾದಿಸುತ್ತಿದೆಯೆಂದೂ ...ಪತ್ರಿಕೆಗಳ ವಿಮರ್ಶಾ ಬ್ರಹ್ಮರು ಬರೆಯುತ್ತಿದ್ದಾರೆ. ಅವರ ದೃಷ್ಟಿಯಲ್ಲಿ ...ೀರ್ ಖಾನ್‌ನ ಪಿಕೆ, ದಂಗಲ್- ಸಲ್ಮಾನ್ ಖಾನ್‌ನ ಸುಲ್ತಾನ್ ಇತ್ಯಾದಿ ...ಳ ನಾಗರಿಕ ಸೂಕ್ಷ್ಮಗಳಾಗಲಿ ಮಾನವೀಯ ಸಂವೇದನೆಗಳಾಗಲಿ ...ಬಲಿಯಲ್ಲಿಲ್ಲ!





ವಿಕಟವೆಂದರೆ ಹೀಗೆ ಬಿಟ್ಟೀ ನ್ಯಾಯ ನೀಡುವವರ್‍ಯಾರೂ ಬಾಹುಬಲಿ ಚಿತ್ರದ ತಾಂತ್ರಿಕ ಸಾಧನೆಯನ್ನಾಗಲಿ, ಅದರ ಮಾರುಕಟ್ಟೆ ತಂತ್ರಗಾರಿಕೆಯನ್ನಾಗಲಿ ಪರಿಗಣಿಸುತ್ತಿಲ್ಲ. ಮನರಂಜನೆಯ ದೃಷ್ಟಿಯಿಂದ ಬಾಹುಬಲಿ ಹೇಗೆ ರಮಣೀಯ ಮತ್ತು ಸಮೃದ್ಧವೆಂಬುದೂ ಅವರಿಗೆ ಮುಖ್ಯವೆನಿಸುತ್ತಿಲ್ಲ. ಕತೆಯ ವಸ್ತು ಅದರ ಪಾತ್ರಗಳು ಮತ್ತು ಸನ್ನಿವೇಶಗಳ ಆಧಾರದ ಮೇಲೆ ಅನಾಗರಿಕ ಮೌಲ್ಯಗಳನ್ನು ಪ್ರತಿಪಾದಿಸುತ್ತಿದೆ ಎಂದೋ ಪುರುಷಾಧಿಪತ್ಯದ ಪ್ರತೀಕವೆಂದೋ, ಕೊಚ್ಚೆಯಲ್ಲಿ ಮೀನು ಹಿಡಿದಂತಿದೆ ಬಾಲಿವುಡ್ ವಿಮರ್ಶಕರ ವರಸೆ. ಅದು ದಕ್ಷಿಣ ಭಾರತೀಯರ ಮೇಲಿನ ಹಿಂದಿವಾಲಾಗಳ ಅಸಹನೆಗಿಂತ ವಿಭಿನ್ನವಾಗೇನೂ ಕಾಣಿಸುತ್ತಿಲ್ಲ.

ಬಾಹುಬಲಿ ಹೇಳಿಕೇಳಿ 10ನೇ ಶತಮಾನದ ಜೈನ ರಾಜಮನೆತನಗಳ ಕಾಲ್ಪನಿಕ ಕತೆಯಷ್ಟೆ. ಆಗಿನ ಕಾಲದ ಸಾಮಾಜಿಕ ಮೌಲ್ಯಗಳು, ಸಂಚಿಕೆಗಳು, ಯುದ್ಧ ತಂತ್ರ, ಸನ್ನಿವೇಶಗಳನ್ನೇ ಬಾಹುಬಲಿಯಲ್ಲಿ ವಿಜೃಂಭಿಸಲಾಗಿದೆ. ಪುರಾಣಗಳ ಕಾಲದ ದೇವತೆಗಳನ್ನು ಪೂಜಿಸುತ್ತೇವಾದ್ದರಿಂದ ಆ ದೇವತೆಗಳ ವರ್ತನೆ, ಪವಾಡಗಳು ಈ ಕಾಲಕ್ಕೆ ಹಾಸ್ಯಾಸ್ಪದವಾಗಿ, ಅನಾಗರಿಕವಾಗಿ ಕಾಣಿಸುವುದಿಲ್ಲವೆ? ಹಾಗೆಯೇ ಬಾಹುಬಲಿ ಪೌರಾಣಿಕ ಚಂದಮಾಮಾ ಕತೆಯೊಂದರಲ್ಲಿ ತಾರ್ಕಿಕ ಮೌಲ್ಯಗಳನ್ನು ನಿರೀಕ್ಷಿಸುವುದೇ ಮೂರ್ಖತನ. ಅಂಥಾದ್ದರಲ್ಲಿ ಅಮೀರ್ ಖಾನ್, ಸಲ್ಮಾನ್ ಖಾನ್, ಶಾರುಖ್ ಚಿತ್ರಗಳ ಸಾಮಾಜಿಕ ಮೌಲ್ಯವನ್ನೇ ನಾಗರಿಕ ಸೂಕ್ಷ್ಮವನ್ನೋ ಪೌರಾಣಿಕ ಬಾಹುಬಲಿಯಂಥ ಕಾಲ್ಪನಿಕ ಕತೆಯಲ್ಲಿ ಬಾಲಿವುಡ್ ವಿಮರ್ಶಕರು ನಿರೀಕ್ಷಿಸುತ್ತಾರೆಂದರೆ ಅದು ಮೂರ್ಖತನವಲ್ಲದೇ ಮತ್ತೇನು?

ದೈತ್ಯ ಸ್ಟಾರ್‌ಗಳಿಲ್ಲದೆ, ಘಟಾನುಘಟಿ ತಾರಾಗಣವಿಲ್ಲದೆ ಕೇವಲ ತಾಂತ್ರಿಕತೆ ಮತ್ತು ಮಾರುಕಟ್ಟೆ ತಂತ್ರಗಾರಿಕೆಯಿಂದಾಗಿ ಬಾಹುಬಲಿ ಬಾಲಿವುಡ್‌ನ ಮರ್ಮಕ್ಕೇ ಪೆಟ್ಟು ಕೊಟ್ಟಿದೆ. ವಸ್ತು ಮತ್ತು ನಿರೂಪಣೆಯಿಂದ ದ್ರಾವಿಡ ಭಾಷೆಯೊಂದರ ವಿಶಿಷ್ಟ ನಿರ್ದೇಶಕನೊಬ್ಬ ಹೇಗೆ ಹಾಲಿವುಡ್ ದೈತ್ಯರನ್ನೇ ಮೀರಿಸಬಲ್ಲ ಎಂಬುದನ್ನು ಸಾಬೀತುಮಾಡಿದೆ. ಇದನ್ನು ಬಾಲಿವುಡ್ ವಿಮರ್ಶಾಬ್ರಹ್ಮರಿಗೆ ಸಹಿಸಲಾಗುತ್ತಿಲ್ಲ. ಬಿಜೆಪಿ ನಾಯಕ ತರುಣ್ ವಿಜಯ್‌ನ ಸಂಗೀ ಮನಸ್ಥಿತಿಗೂ ದ್ರಾವಿಡರ ವಿರುದ್ಧ ಆತ ಬಳಸಿದ ಸಾಮಾಜಿಕ ತಾತ್ಸಾರಕ್ಕೂ ಬಾಹುಬಲಿ ವಿರುದ್ಧದ ಇಂಗ್ಲಿಷ್ ವಿಮರ್ಶಕರಿಗೂ ಹೆಚ್ಚು ವ್ಯತ್ಯಾಸವೇನಿಲ್ಲ.


...ದಂತೆ ಷಡ್ಯಂತ್ರ ರೂಪಿಸುತ್ತಲೇ ಇದ್ದಾರೆ.

...ತ್ತ ದೇಶಾಟನೆಗೆ ಹೊರಟು ಮಾರುವೇಷದಲ್ಲಿರುವ ...ಬಲಿ ಮತ್ತು ಕಟ್ಟಪ್ಪ ಸಣ್ಣ ರಾಜ್ಯವಾದ ಕುಂತಳಕ್ಕೆ ...ತ್ತಾರೆ. ಅಲ್ಲಿನ ರಾಜಕುವರಿಯೇ ದೇವಸೇನೆಯ ...ಧಾರಿ ಅನುಷ್ಕಾ ಶೆಟ್ಟಿ. ಕ್ಷತ್ರಿಯ ಪರಂಪರೆಗೆ ತಕ್ಕಂತೆ ...ೂ ಯುದ್ಧತಂತ್ರ ನಿಪುಣೆ. ಮಾರುವೇಷದಲ್ಲಿದ್ದ ...ಬಲಿಗೂ ರಾಜಕುಮಾರಿ ದೇವಸೇನೆಗೂ ವಿಚಿತ್ರ ...ಷ್ಟವೊಂದರಲ್ಲಿ ಪರಿಚಯವಾಗಿ ಕಾಲಕ್ರಮೇಣ ...ಬಲಿಯ ಶೌರ್ಯ ಪ್ರತಾಪಗಳಿಗೆ ಆಕೆ ಮಾರು ...ಗುತ್ತಾಳೆ. ಇಬ್ಬರಲ್ಲೂ ಪ್ರೀತಿ ಮೊಳೆತಿದೆ. ಆದರೆ ...ಬಲಿಯ ಮಲ ಸಹೋದರ ಬಲ್ಲಾಳದೇವನಿಗೆ ...ಸೇನೆಯ ಮೇಲೆ ಕಣ್ಣು. ಆಕೆಯ ಚೆಲುವು, ಶೌರ್ಯಕ್ಕೆ ...ಹೋಗಿದ್ದಾನೆ. ಬಾಹುಬಲಿಯ ಪಟ್ಟಾಭಿಷೇಕದ ...ಗೊರೆಯಾಗಿ ನಿನಗೇನು ಬೇಕೆಂದು ರಾಜಮಾತೆ ...ಾಗಿ ಆತ ಬೇಡುವುದು ದೇವಸೇನೆಯನ್ನು!

...ತನ್ನ ಶಕ್ತಿಸಾಲಿ ಸಾಮ್ರಾಜ್ಯದೆದುರು ಕುಂತಳ ...ವೊಂದು ಲೆಕ್ಕವೆ? ತನ್ನಾಜ್ಞೆಯನ್ನು ಮೀರುವಷ್ಟು ...ರ್ಯವಾದರೂ ಕುಂತಳ ರಾಜನಿಗೆಲ್ಲಿದೆ? ಇದೇ ಲೆಕ್ಕಾಚಾರ ...ದ ರಾಜಮಾತೆ ಶಿವಗಾಮಿದೇವಿ ರತ್ನ ವೈಢೂರ್ಯಗಳ ...ುರಿಗೆಗಳ ಸಮೇತ ಮಗನಿಗೆ ವಧುವಾಗುವಂತೆ ...ಸೇನೆಗೆ ರಾಜಾಜ್ಞೆ ಕಳುಹಿಸುತ್ತಾಳೆ. ಈ ಹೊತ್ತಿಗಾಗಲೇ ...ುವೇಷದಲ್ಲಿದ್ದ ಬಾಹುಬಲಿಗೆ ಮಾರುಹೋಗಿದ್ದ ...ಸೇನೆ ರಾಜಮಾತೆಯ ಪ್ರಸ್ತಾಪವನ್ನು ತಿರಸ್ಕರಿಸುತ್ತಾಳೆ. ...ರಾಜಮಾತೆಯನ್ನು ಸಿಟ್ಟಿಗೇಳಿಸುತ್ತದೆ. ಇತ್ತ ಕುಂತಳದಲ್ಲಿ ...ತವಾಸದಲ್ಲಿದ್ದ ಬಾಹುಬಲಿಗೆ ತನ್ನ ತಾಯಿ ಕುಂತಳಕ್ಕೆ ...ಹಿಸಿದ ಪ್ರಸ್ತಾವನೆ ತನ್ನ ಮದುವೆಗೆ ಮಾಡಿದ ...ಟೆಂದು ತಪ್ಪಾಗಿ ಭಾವಿಸುತ್ತಾನೆ. ಅದು ತನ್ನ ಮಲ ...ೀದರ ಬಲ್ಲಾಳನದ್ದೆಂದು ಗೊತ್ತಾಗುವುದೇ ಇಲ್ಲ.

...ದೇವಸೇನೆಯ ತಿರಸ್ಕಾರದ ವಿರುದ್ಧ ಆಕೆಯನ್ನು ಬಂಧಿಸಿ ...ುವಂತೆ ರಾಜಮಾತೆ ಕಳುಹಿಸಿದ ಆದೇಶಕ್ಕೆ ಪ್ರತಿಯಾಗಿ ...ಬಲಿ ತನ್ನದೇ ಸೈನ್ಯದ ವಿರುದ್ಧ ಕುಂತಳದ ರಕ್ಷಣೆಗೆ ...ತ್ತಾನೆ. ಭೀಕರ ಯುದ್ಧದಲ್ಲಿ ತನ್ನ ರಾಜ್ಯವನ್ನು ರಕ್ಷಿಸಿದ ...ಬಲಿಗೆ ಕುಂತಳರಾಜ ತನ್ನ ಮಗಳನ್ನು ...ಯರೆಯಲು ಒಪ್ಪುತ್ತಾನೆ. ಬಂಧಿಸಿ ಕರೆತರುವಂತೆ ...ಯ ಆದೇಶವನ್ನು ತಿಳಿಸಿ ದೇವಸೇನೆಯನ್ನು ತಾನೇ ...ಹವಾಗುತ್ತೇನೆಂದು ಮಾತು ಕೊಟ್ಟು ...ಮಾತೆಯೆದುರು ಬಂದ್ದು. ನಿಂತಾಗಲೇ ವಾಸ್ತವದ ...ಾಗುತ್ತದೆ. ತಾನು ಮೋಹಿಸಿದ ರಾಜಕುಮಾರಿ ತನಗಲ್ಲ ...ಮಲಸಹೋದರ ಬಲ್ಲಾಳನಿಗೆಂದು!

...ಮುಂದೆ ಇದೇ ಬಾಹುಬಲಿಗೆ ಮುಳುವಾಗುತ್ತದೆ. ...ಮಾತೆ ತನ್ನ ಮಗನನ್ನೇ ಪಟ್ಟಾಭಿಷೇಕ ತಪ್ಪಿಸಿ ...ರಹಾಕುತ್ತಾಳೆ. ಬಾಹುಬಲಿ ದೇಶಭ್ರಷ್ಟನಾಗಿದ್ದೇ



ರಾಜಮಾತೆಯನ್ನು ಮುಗಿಸಿ ಇಡೀ ಚಕ್ರಾಧಿಪತ್ಯವನ್ನು ಆಕ್ರಮಿಸಲು ಬಲ್ಲಾಳ ಮತ್ತಾತನ ತಂದೆ ಕುತಂತ್ರ ಹೆಣೆದು ಬಾಹುಬಲಿಯನ್ನೇ ಕೊಲ್ಲಿಸುತ್ತಾರೆ.....

ಕತೆ ಮತ್ತು ವಸ್ತುವಿಗೆ ಬಂದರೆ ಇದು ಯಾವುದೋ ಚಂದಮಾಮಾ ಕತೆಯೊಂದರ ಹಾಗೆಯೇ ಇದೆ. ಇದೇ ಮಾದರಿಯ ಅದೆಷ್ಟೋ ವಿಠಲಾಚಾರ್ಯರ ರೀತಿಯ ತೆಲುಗು ಸಿನಿಮಾಗಳು ಬಂದು ಹೋಗಿವೆ. ಆದರೆ ಬಾಹುಬಲಿಯ ವೈಶಿಷ್ಟ್ಯವಿರುವುದು ಅದರ ಫ್ಯಾಂಟಸಿಯಲ್ಲಿ. ಬಾಲಿವುಡ್, ಹಾಲಿವುಡ್‌ನ ರಾಜರಾಣಿಯರ ಚಿತ್ರಗಳ ಹಾಗೆ ಇಲ್ಲಿ ತರ್ಕವಾಗಲಿ, ಕಥಾವಸ್ತುವಾಗಲಿ ಮುಖ್ಯವಾಗುವುದಿಲ್ಲ. ಒಂದಕ್ಕಿಂತ ಒಂದೆನ್ನುವ ಅದ್ದೂರಿಯ ಸೆಟ್ಟುಗಳು, ಯುದ್ಧದ ಭೀಕರತೆ, ಪ್ರಣಯದ ರಮಣೀಯತೆ, ರಾಜವೈಭವ, ಶೃಂಗಾರ, ಅದು ಕಟ್ಟಿಕೊಡುವ ಕಲ್ಪನಾಲೋಕವೇ ಇಡೀ ಚಿತ್ರದ ಹೆಗ್ಗಳಿಕೆ. ಗ್ರಾಫಿಕ್ಸ್ ತನ್ನ ಪಾರಮ್ಯ ಮೆರೆದಂತೆ ಒಂದರ ಮೇಲೊಂದು ರೌದ್ರರಮಣೀಯತೆಯನ್ನು ಕಟ್ಟಿಕೊಡುತ್ತಾರೆ ರಾಜಮೌಳಿ.

ಪಟ್ಟಾಭಿಷೇಕದ ಪೂಜೆಗೆಂದು ರಾಜಮಾತೆ ರಮ್ಯಾಕೃಷ್ಣ ಬಂದಾಗ ಇದ್ದಕ್ಕಿದ್ದಂತೆ ಆನೆಗೆ ಮದವೇರಿ ಸಂಭವಿಸುವ ಅವಘಡ, ಅದನ್ನು ತನ್ನ ದೈತ್ಯ ಬಲದಿಂದ ಬಾಹುಬಲಿ ತಡೆಯುವುದು, ಕುಂತಳದ ಕೋಟೆಯನ್ನು ರಕ್ಷಿಸಲು ಬಲಾಢ್ಯ ಶತ್ರುಸೇನೆಯ ವಿರುದ್ಧ ಗೂಳಿಗಳ ಕೊಂಬಿಗೆ ಬೆಂಕಿಯಿಟ್ಟು ನುಗ್ಗಿಸುವುದು, ಶತ್ರುಸೇನೆಯ ವಿರುದ್ಧ ಅಣೆಕಟ್ಟೆಯನ್ನೇ ಪ್ರವಾಹವಾಗಿ ಹರಿಸುವುದು ಇತ್ಯಾದಿ ದೃಶ್ಯಗಳೆಲ್ಲ ಅದ್ಭುತವಾಗಿ ಮೂಡಿಬಂದಿದೆ. ಯಾವುದೇ ಹಾಲಿವುಡ್ ಅಥವಾ ಚೈನೀಸ್ ಫ್ಯಾಂಟಸಿಗಳಿಗೆ ಸರಿಸಮನಾಗುವಂತೆ ದೃಶ್ಯ ಸೃಷ್ಟಿಯಿದೆ. ದೇವಸೇನೆಯನ್ನು ಹಡಗೊಂದರಲ್ಲಿ ತನ್ನ ರಾಜ್ಯಕ್ಕೆ ಕರೆತರುವಾಗ ಕಟ್ಟಿಕೊಡುವ ರಮಣೀಯತೆಯೊಂದೇ ಜೇಮ್ಸ್ ಕ್ಯಾಮೆರನ್‌ನ 'ಅವತಾರ್' ಚಿತ್ರದ ಗ್ರಾಫಿಕ್ಸ್‌ಗೆ ಸರಿಸಾಟಿಯಂತಿದೆ. ವಿಶಾಲ ಸಾಗರದ ಅಲೆಗಳ ನಡುವೆ ಹೊಸದಂತೆ ತೇಲುವ ನೌಕೆಗೆ ಸಾಗರದಲೆಗಳೇ ಮೋಡಗಳಂತಾಗಿ, ನೌಕೆಯೇ ಹೊಸದಂತೆ ಹಾರಿ, ಅದರ ಜೊತೆಗೆ ಹಂಸಗಳ ಸಾಲು, ಬಿಳಿಯ ಮೋಡಗಳೇ ಅಶ್ವಗಳಾಗಿ ಓಡಿದಂತೆ ರಾಜಮೌಳಿ ಸ್ವರ್ಗಸೀಮೆಯನ್ನೇ ತೆರೆಗಿಳಿಸಿದ್ದಾರೆ.

ಬೇರೆಲ್ಲ ನಿರ್ದೇಶಕರು ಕತೆ ಮತ್ತದರ ನಿರೂಪಣೆಯತ್ತ ಗಂಭೀರ ಕಸರತ್ತಿಗೆ ಕೈಯಿಟ್ಟರೆ ರಾಜಮೌಳಿ ಪ್ರೇಕ್ಷಕನಿಗೆಲ್ಲೂ ಬೋರಾಗದ ಹಾಗೆ ನೋಡಿಕೊಳ್ಳುವುದಕ್ಕೇ ವಿಪರೀತ ಶ್ರಮಿಸುತ್ತಾರೆ. ಒಂದು ಅವಗಢ, ಒಂದು ಭೀಭತ್ಸದ ನಂತರ ಪ್ರಜ್ಞಾಪೂರ್ವಕವಾಗಿ ಪ್ರೇಕ್ಷಕನ ಮನಸ್ಸಿಗೊಂದು ರಿಲೀಫ್ ಕೊಡುತ್ತಾರೆ. ರಕ್ತಪಾತಕ್ಕೆ ಪ್ರೇಕ್ಷಕನ ಮನಸ್ಸು ವಿಹ್ವಲಗೊಳ್ಳುತ್ತಿದ್ದ ಹಾಗೆಯೇ ಶೃಂಗಾರದ ರಮಣೀಯತೆ ಆವರಿಸುತ್ತದೆ. ಯುದ್ಧದ ಭೀಕರತೆಯ ನಡುನಡುವೆಯೇ ಕ್ಯಾಮೆರಾ ಮತ್ತು ಗ್ರಾಫಿಕ್ಸ್ ಅದರ ಸೌಂದರ್ಯವನ್ನು ಅನಾವರಣಗೊಳಿಸುತ್ತವೆ. ಹೀಗಾಗಿ ಇಡೀ ಚಿತ್ರದಲ್ಲಿ ಬೋರು ಅನ್ನಿಸುವ ಕ್ಷಣ ಮಾತ್ರದ ಸನ್ನಿವೇಶವಿಲ್ಲ. ಪ್ರೇಕ್ಷಕನ ಮನಸ್ಸು ಮರುಗುವಂಥ ಪರಿಣಾಮಕಾರಿ ಸನ್ನಿವೇಶದ ಮರುಗಳಿಗೆಯಲ್ಲೇ ಗ್ಲಾಮರ್‌ನ ಕೈಚಳಕ. ಪ್ರಣಯ ಅತಿಯಾಯಿತೆನ್ನುತ್ತಿದ್ದಂತೆಯೇ ಮನಕಲಕುವ ರಕ್ತಪಾತ.

ಅಂದರೆ ಪ್ರೇಕ್ಷಕನೊಬ್ಬನ ಮನಸ್ಸನ್ನು ಹೇಗೆಲ್ಲಾ ನಲಿಸಬೇಕೋ, ನರಳಿಸಬೇಕೋ ರಾಜಮೌಳಿಗೆ ಎರಡೂ ಗೊತ್ತಿದೆ. ಕೆಲವೆಡೆ ರಾಜಮೌಳಿ ತನ್ನ ತೆಲುಗು ವರಸೆಯಿಂದಾಚೆಗೆ ಬರುತ್ತಿಲ್ಲವೆಂಬಂತೆ ಭಾಸವಾದರೂ ದೃಶ್ಯದ ಪರಿಣಾಮದಿಂದಾಗಿ ಅದು ಗೌಣವೆನಿಸುತ್ತದೆ. ಅದ್ದೂರಿಯ ಸೆಟ್‌ಗಳು, ಅವುಗಳನ್ನು ಸೆರೆಹಿಡಿದಿರುವ ಕೋನ, ಅದಕ್ಕೆ ಸಿಂಗರಿಸಿದ ಶಬ್ದಲಾವಣ್ಯ ಎಲ್ಲವೂ ಒಂದಕ್ಕೊಂದು ಹೇಳಿಮಾಡಿಸಿದಂತಿದೆ. ಇದು ರಾಜಮೌಳಿಗೆ ಸಿದ್ಧಿಸಿದ ಗ್ರಾಫಿಕ್ಸ್ ಪರಿಣಿತಿಯೇ ಸರಿ. ಬಹುಶಃ 'ಈಗ' ಚಿತ್ರದಲ್ಲಿ ಗ್ರಾಫಿಕ್ಸ್ ನೊಣದ ಚಮತ್ಕಾರ ಕಟ್ಟಿಕೊಡುವಲ್ಲಿ ರಾಜಮೌಳಿಗೆ ದಕ್ಕಿದ ತಾಂತ್ರಿಕ ಪರಿಣಿತಿಯೇ ಬಾಹುಬಲಿಯಲ್ಲಿ ಪಕ್ವವಾದಂತಿದೆ. ದೇಶವ್ಯಾಪಿ ಜನಪ್ರಿಯತೆಯ ರಜನಿ, ಸಲ್ಮಾನ್‌ರಂಥ ದಿಗ್ಗಜರಿಲ್ಲದ ಕೊರತೆಯನ್ನು ಗ್ರಾಫಿಕ್ಸ್‌ನ ಮತ್ತು **visual effects** ಮೂಲಕ ತುಂಬುತ್ತಾರೆ ರಾಜಮೌಳಿ.


ಅದಕ್ಕೆಂದೇ ತಮಿಳಿನ ಖ್ಯಾತ ವಿಸುವಲ್ ಎಫೆಕ್ಟ್ ತಜ್ಞ ಕಮಲ ಕಣ್ಣನ್‌ರನ್ನು ವಿಸುವಲ್ ಎಫೆಕ್ಟ್ಸ್ ಸೂಪರ್‌ವೈಸರ್ ಆಗಿ ನೇಮಿಸಿಕೊಂಡದ್ದು ಮತ್ತು ತೆಲುಗಿನ ಎಡಿಟಿಂಗ್ ದಿಗ್ಗಜ ಕಲಾಗಿರಿ ವೆಂಕಟೇಶ್ವರ ರಾವ್‌ರನ್ನು ಹಾಕಿಕೊಂಡದ್ದು ರಾಜಮೌಳಿಯ ಕಲೆಗಾರಿಕೆಯ ಪ್ರತೀಕದಂತಿತ್ತು. ಯುದ್ಧದ ದೃಶ್ಯಗಳ ಸಂಯೋಜನೆಗೆಂದೇ ವಿಶ್ವದ ಶ್ರೇಷ್ಠ ಸ್ಟಂಟ್ ಡಿಸೈನರ್‌ಗಳಾದ ಕಿಂಗ್ ಸಾಲೋಮನ್, ಲೀ ವಿಟ್ಟಾಕರ್, ಕೇಚಾ ಮತ್ತು ಪೀಟರ್ ಹೀನ್‌ರನ್ನು ನೇಮಿಸಿಕೊಂಡರು. ಗ್ರಾಫಿಕ್ಸ್ ಮತ್ತು ಬ್ಲೂಮ್ಯಾಟ್ ತಾಂತ್ರಿಕತೆಯನ್ನು ಪ್ರಯೋಗಿಸಿ ಪ್ರತಿ ದೃಶ್ಯವನ್ನೂ ಹೇಗೆ ಪರಿಣಾಮಕಾರಿ ಮತ್ತು ಕಡಿಮೆ ಖರ್ಚಿನಲ್ಲಿ ಸಮೃದ್ಧವಾಗಿಸಬಹುದೆಂಬುದನ್ನು ಈ ತಂಡ ಸಾಧಿಸಿ ತೋರಿಸಿತು. ಸಹಸ್ರಾರು ಮಂದಿ ಸೈನಿಕರಿದ್ದಂತೆ ಗ್ರಾಫಿಕ್ಸ್ ಮೂಲಕ ಸಂಯೋಜಿಸಿ ಅದಕ್ಕೆ ವಾಸ್ತವವಾಗಿ ಇನ್ನೂರೋ ಮುನ್ನೂರೋ ಮಂದಿಯನ್ನಷ್ಟೇ ಬಳಸುವ ಜಾಣತನವಿದು.


ನಟನಟಿಯರ ಸಂಭಾವನೆ, ನಿರ್ಮಾಣ ವೆಚ್ಚದ್ದೇ ಒಂದು ಖರ್ಚಾದರೆ ಗ್ರಾಫಿಕ್ಸ್ ಮತ್ತು ವಿಜುವಲ್ ಎಫೆಕ್ಟಿಗಾಗಿ ತಗುಲಿದ ಖರ್ಚು ಅದರ ದುಪ್ಪಟ್ಟಾಗಿತ್ತು. ಹಾಲಿವುಡ್‌ಗೆ ಸರಿಸಾಟಿಯಾಗಿ ಅಂದರೆ ಜೇಮ್ಸ್ ಕ್ಯಾಮೆರನ್‌ನ ಅವತಾರ್ ಚಿತ್ರದ ಪಂಡೋರಾ ಎಂಬ ಅನ್ಯಗ್ರಹದ ರಮಣೀಯತೆಯನ್ನು ಸರಿದೂಗಿಸಬಲ್ಲ ಸಂಕಲ್ಪ ಮಾಡಿಯೇ ರಾಜಮೌಳಿ ಇನ್ನೂರೈವತ್ತು ಕೋಟಿ ರೂಪಾಯಿಗಳ ಯೋಜನೆ ರೂಪಿಸಿದ್ದರು. ಆದರಿದು ಭಾಗ-2ರ ಹೊತ್ತಿಗೆ ಮುನ್ನೂರೈವತ್ತು ಕೋಟಿ ಮುಟ್ಟಿತ್ತು. ಕೇವಲ ತೆಲುಗೋ ತಮಿಳೋ ಮಾರುಕಟ್ಟೆಯನ್ನಷ್ಟೇ ಗಮನದಲ್ಲಿಟ್ಟುಕೊಂಡಿದ್ದರೆ ಮುನ್ನೂರೈವತ್ತು ಕೋಟಿಯಲ್ಲಿ ಸಿನಿಮಾ ಮಾಡುವುದು ಲುಕ್ಸಾನಿನ ಬಾಬತ್ತೆ. ವಾಸ್ತವವಾಗಿ ರಾಜಮೌಳಿಯ ಗುರಿಯಿದ್ದದ್ದು ಹಾಲಿವುಡ್ ಮಾರುಕಟ್ಟೆಯ ಮೇಲೆ. ಅಂದರೆ ಹಾಲಿವುಡ್‌ನ ಮಟ್ಟದಲ್ಲಿ ಚಿತ್ರದ ಪ್ಲಾನ್ ಮಾಡುವುದು!

ಇದು ಆಕಾಶಕ್ಕೆ ಏಣಿ ಹಾಕಿದಷ್ಟೇ ದುಸ್ಸಾಹಸದ ಕೆಲಸ. ಎಲ್ಲಿಯ ತೆಲುಗು ಚಿತ್ರರಂಗ? ಎಲ್ಲಿಯ ರಾಜಮೌಳಿ? ಎಲ್ಲಿಯ ಹಾಲಿವುಡ್ ಮಾರುಕಟ್ಟೆ? ಆಕಾಶಕ್ಕೆ ಏಣಿ ಹಾಕಿದರೆ ಕನಿಷ್ಠ ಬೆಟ್ಟವನ್ನಾದರೂ ಮುಟ್ಟುವಂತೆ ಬಾಹುಬಲಿ-2 ವಿಶ್ವದ ಒಂಬತ್ತು ಸಾವಿರ ಚಿತ್ರಮಂದಿರಗಳಲ್ಲಿ ತೆರೆಕಂಡಿತ್ತು. ಅಂದರೆ ಈತನಕ ಸಲ್ಮಾನ್ ಖಾನ್, ಅಮೀರ್ ಮತ್ತು ರಜನಿ ಚಿತ್ರಗಳು ತೆರೆ ಕಾಣುವಷ್ಟರ ದುಪ್ಪಟ್ಟು ಸ್ಕ್ರೀನುಗಳು. ಕೇವಲ ಸಂಖ್ಯೆಯ ದೃಷ್ಟಿಯಿಂದಷ್ಟೇ ಚಿತ್ರಮಂದಿರಗಳು ಹೆಚ್ಚಾಗಿ ಪ್ರಯೋಜನವಿಲ್ಲ. ಅದಕ್ಕೆಂದು ದೊಡ್ಡಮಟ್ಟದ ಪ್ರಚಾರ, **promotion** ಕಾರ್ಯಾಚರಣೆಯೇ ಬೇಕು. ಒಂದು ಮೂಲದ ಪ್ರಕಾರ ಬಾಹುಬಲಿ -2ರ **promotion** ಗೆಂದೇ ರಾಜಮೌಳಿ ಸುರಿದದ್ದು ಬರೋಬ್ಬರಿ ನೂರು ಕೋಟಿ!


ಸಾಮಾನ್ಯನೊಬ್ಬ ಮನಸ್ಸು ಮಾಡಿದರೆ ಏನೆಲ್ಲಾ ದುಸ್ಸಾಹಸಕ್ಕೆ ಕೈಹಾಕಬಹುದು ಮತ್ತು ಕಠಿಣ ದುಡಿಮೆಯೊಂದು ಏನೆಲ್ಲಾ ಫಲ ನೀಡಬಹುದೆಂಬುದಕ್ಕೆ ಬಾಹುಬಲಿಯೊಂದೇ ಸಾಕು. ಅದು ದೃಶ್ಯ ವೈಭವವೋ, ಕಲ್ಪನಾ ಲೀಲೆಯೋ, ತೆರೆಮೇಲಿನ ಭವ್ಯ ಕನಸೋ ನಿರ್ಧರಿಸುವರ್‍ಯಾರು? ಭಾಷೆ, ಗಡಿ, ಭೇದ ಮೀರಿ ಹೇಳಬೇಕೆಂದರೆ ಬಾಹುಬಲಿಯೊಂದು ರುದ್ರರಮಣೀಯ ಕಾವ್ಯ....!

● ರಾ. ಸೋಮನಾಥ್





ರಾಮ ಚಾತುರ್ವರ್ಣ ರಕ್ಷಕ



■ ಪ್ರೊ। ಕೆ. ಎಸ್. ಭಗವಾನ್

ರಾಮಮಂದಿರ ನಿರ್ಮಾಣ ಮಾಡುತ್ತೇವೆಂದು ಭಾರತೀಯ ಜನತಾ ಪಕ್ಷ ಹೇಳಿಕೆ ನೀಡಿದೆ. ಈ ಬಗ್ಗೆ ಆಗಾಗ ಹೇಳುತ್ತಲೇ ಇರುವುದು ಅವರ ಒಂದು ವಿನೋದ ಎನ್ನಬೇಕು. ಭಾರತದ ಬಹುದೊಡ್ಡ ರಾಜ್ಯವಾದ ಉತ್ತರಪ್ರದೇಶದಲ್ಲಿ (ಮಾರ್ಚ್ 2017 ರ) ಸಾರ್ವತ್ರಿಕ ಚುನಾವಣೆಯಲ್ಲಿ ಅಭೂತಪೂರ್ವ ವಿಜಯ ಗಳಿಸಿದ (325/403) ಮೇಲೆ ಬಿಜೆಪಿಯ ಪ್ರಚಾರ ಜೋರಾಗಿದೆ. ಕಳೆದ ಸುಮಾರು ನಲವತ್ತು ವರ್ಷಗಳಿಂದಲೂ ಅವರು ಶ್ರೀರಾಮ ದೇಗುಲ ಕಟ್ಟುತ್ತೇವೆ ಎಂಬ ಮಾತು ಆಡುತ್ತಲೇ ಬಂದಿದ್ದಾರೆ. ಆದರೆ ಈ ಬಾರಿ ಅಲ್ಲಿ ಯೋಗಿ ಆದಿತ್ಯನಾಥ ಅವರು ಮುಖ್ಯಮಂತ್ರಿಯಾಗಿ ಉತ್ತರಪ್ರದೇಶ ರಾಜ್ಯದ ಸರ್ಕಾರವನ್ನು ರಚಿಸಿದ ಮೇಲೆ ರಾಮ ದೇವಾಲಯ ಕಟ್ಟುತ್ತೇವೆ ಎಂಬ ಅವರ ಅಟ್ಟಹಾಸ ಮುಗಿಲು ಮುಟ್ಟತೊಡಗಿದೆ.

ನಿಮ್ಮ ಸಂವಿಧಾನದಲ್ಲಿ ನಮಗೆ ನಂಬಿಕೆ ಇಲ್ಲ, ನಮ್ಮ ಸಂವಿಧಾನ ಎಂದರೆ ಚಾತುರ್ವರ್ಣ ಸಿದ್ಧಾಂತ. ಇದೇ ನಮ್ಮ ಧರ್ಮ. ಇದರ ಪ್ರತೀಕವಾದ ರಾಮನಲ್ಲಿ ನಮ್ಮ ಪ್ರತ್ಯೇಕತೆ, ಭಿನ್ನತೆ, ಸಂತೋಷಗಳನ್ನು ನಾವು ಕಂಡುಕೊಳ್ಳುತ್ತೇವೆ ಎನ್ನುವುದಕ್ಕಾಗಿ ರಾಮಮಂದಿರ ಕಟ್ಟಲು ಅವರು ಹಾತೊರೆಯುತ್ತಿದ್ದಾರೆ. ಇದರಿಂದ ಬ್ರಾಹ್ಮಣ ಮತ ಅಮಾನುಷ ಮತ ಎಂದು ಖಚಿತವಾಗುತ್ತದೆ.

ಆದರೆ ಇವರು ರಾಮ ದೇವಸ್ಥಾನವನ್ನೆ ನಿರ್ಮಿಸುತ್ತೇವೆಂದು ಯಾಕೆ ಹೇಳುತ್ತಿದ್ದಾರೆ? ಏಕೆ ಬೇರಾವ ದೇವರ ಬಗ್ಗೆಯೂ ಇವರು ಮಾತನಾಡುವುದಿಲ್ಲ? ಆಸಕ್ತಿ ತೋರಿಸುವುದಿಲ್ಲ? ಭಾರತ ದೇಶದ ಮೂಲದೇವರಾದ ಪರಶಿವನ ಕುರಿತು ಇವರು ಬಾಯಿ ಬಿಡುವುದಿಲ್ಲವಲ್ಲ, ಚರ್ಚಿಸುವುದಿಲ್ಲವಲ್ಲ; ಏನು ಕಾರಣ? ಹಿಮಾಲಯಕ್ಕೆ ಹೋಗುವ ದಾರಿಯನ್ನು ಹರದ್ವಾರ ಎಂದು ಕರೆಯಲಾಗುತ್ತಿದೆ. ಅಲ್ಲದೆ ಅಲ್ಲಿ ಆ ಹೆಸರಿನ ನಗರ ಇದೆ. ಆದರೆ ಹರದ್ವಾರವನ್ನು ಬೇಕೆಂದೇ ಹರಿದ್ವಾರ ಎಂದೇ ಕರೆಯುತ್ತಾರೆ. ಯಾರೂ ಅದನ್ನು ತಿದ್ದುತ್ತಿಲ್ಲ, ಹಾಗೆ ತಪ್ಪಾಗಿ ಹೇಳಬೇಡಿ ಎಂದು ಮೊರೆ ಕೂಡ ಇಲ್ಲ; ಕರೆ ಕೊಡುತ್ತಿಲ್ಲ, ಹರದ್ವಾರ ಎಂದೇ ಕರೆಯಿರಿ ಎಂದು ಜನತೆಗೆ ಮನವಿ ಮಾಡುತ್ತಿಲ್ಲವಲ್ಲ, ಏಕೆ? ಇದನ್ನು ನೋಡಿದರೆ ಇದರಲ್ಲೇನೋ ಪಿತೂರಿ ಇರುವಂತೆ ಕಾಣುತ್ತದೆ. ಹಿಮಾಲಯದಲ್ಲಿ ಇರೋದು ಹರನೇ ಹೊರತು ಹರಿ ಅಲ್ಲ.

ಯಾರನ್ನು ಇವರು ದೇವರು ಎನ್ನುತ್ತಾರೋ ಆ ರಾಮ ಮತ್ತು ಕೃಷ್ಣ ಇಬ್ಬರೂ ಶಿವನನ್ನು ಸ್ತುತಿಸುತ್ತಾರೆ. ಅಂಥದ್ದರಲ್ಲಿ ಶಿವನಿಗೆ ಮಂದಿರ ಕಟ್ಟಲು ಏಕೆ ಇವರು ಹಿಂಜರಿಯುವರು?

ಶಿವ ಸ್ಮಶಾನವಾಸಿ. ಶಿವನು ದಕ್ಷಬ್ರಹ್ಮನ ಯಜ್ಞವನ್ನು ಧ್ವಂಸ ಮಾಡಿದ್ದರಿಂದ ಅವನು ಯಜ್ಞ ವಿರೋಧಿ. ಅವನು ಚಾತುರ್ವರ್ಣಗಳ ಪ್ರತಿಪಾದಕನಲ್ಲ, ಪಾಲಕನಲ್ಲ, ಅವನು ಎಲ್ಲರನ್ನೂ ಸಮಾನವಾಗಿ ಕಂಡಂಥ ದೇವರು. ಸ್ತ್ರೀಯನ್ನು ಕೀಳು ಎಂದು ಹೇಳುವ ಮತ್ತು ನಡೆದುಕೊಳ್ಳುವ ವರ್ಣ ಸಿದ್ಧಾಂತಕ್ಕೆ ಅವನು ವಿರೋಧಿ ಆಗಿದ್ದನು. ಆದ್ದರಿಂದಲೇ ಅವನು ತನ್ನ ದೇಹದ ಅರ್ಧ ಭಾಗವನ್ನು, ಹೃದಯ ಭಾಗವನ್ನು ತನ್ನ ಸತಿ ಪಾರ್ವತಿಗೆ ಕೊಟ್ಟು ಅರ್ಧನಾರೀಶ್ವರ ಆದನು. ಅಖಂಡ ದಾಂಪತ್ಯಕ್ಕೆ ಆದರ್ಶ ಸಂಸಾರಕ್ಕೆ, ಸತಿಪತಿಯರ ಸಮಾನತೆಗೆ ಮತ್ತು ಐಕ್ಯತೆಗೆ ಶಿವಪಾರ್ವತಿಯರು ಸಾರ್ವತ್ರಿಕ ಚಿರಪ್ರತಿಮೆ ಆಗಿದ್ದಾರೆ. ಸತಿಪತಿಯರು ಒಂದೆಂಬ ಅರ್ಧನಾರೀಶ್ವರ ಪರಿಕಲ್ಪನೆ ಪ್ರಪಂಚದ ಬೇರೆ ಯಾವ ಸಂಸ್ಕೃತಿಯಲ್ಲೂ ಕಂಡುಬರುವುದಿಲ್ಲ, ವರ್ಣವ್ಯವಸ್ಥೆಗೆ ಶಿವ ಒಲವು ತೋರಲಿಲ್ಲವಾದುದರಿಂದ ಅವನಿಗೆ ಬೃಹತ್ ರಾಷ್ಟ್ರೀಯ ಮಂದಿರ ನಿರ್ಮಿಸಲು ವರ್ಣವಾದಿಗಳು ಇಷ್ಟಪಡುತ್ತಿಲ್ಲ ಎನ್ನಬೇಕಾಗಿದೆ.

ಶಿವ ಮೃತ್ಯುಂಜಯ. ಅವನಿಗೆ ಸಾವಿಲ್ಲ, ಆದರೆ ರಾಮ ಸಾಯುತ್ತಾನೆ. ಸೀತೆಯನ್ನು ಎರಡನೆಯ ಬಾರಿ ನಿನ್ನ ಪಾತಿವ್ರತ್ಯವನ್ನು ಶಪಥ ಮಾಡು (ಉತ್ತರಕಾಂಡ, ಸರ್ಗ 97, ಶ್ಲೋಕ 10 - 11) ಎಂದು ರಾಮ ಕೇಳಿದನು. ಸೀತಾದೇವಿ ಮೊದಲ ಸಾರಿ ಅಗ್ನಿಪರೀಕ್ಷೆಯಲ್ಲಿ, ನಾನು ಪರಿಶುದ್ಧಳಾದರೆ ನನ್ನನ್ನು ಕಾಪಾಡು ಎಂದು ಅಗ್ನಿಗೆ ಪ್ರಾರ್ಥಿಸಿದ್ದಳು. ಆದರೆ ಈ ಸಲ, "ನಾನು ಪತಿವ್ರತೆಯಾಗಿದ್ದರೆ, ರಾಮನನ್ನು ಬಿಟ್ಟು ಬೇರೆ ಯಾರನ್ನೂ ನಾನು ಮನಸ್ಸಿನಲ್ಲಿ ಯೋಚಿಸದಿದ್ದರೆ ನನ್ನನ್ನು ನಿನ್ನ ಒಳಕ್ಕೆ ಕರೆದುಕೊ" ಎಂದು ಭೂದೇವಿಯನ್ನು ಸೀತೆ ಬೇಡಿಕೊಂಡಳು. ಭೂಮಿಯೊಳಕ್ಕೆ ಸೀತೆ ಹೋಗಿಬಿಟ್ಟಳು (ಉತ್ತರಾಕಾಂಡ, ಸರ್ಗ 97, ಶ್ಲೋಕ 15-17). ಇದರಿಂದ ಸೀತೆಗೆ ರಾಮನ ಕಾಟ ಸಾಕಾಗಿಹೋಗಿತ್ತು ಎಂದು ಗೊತ್ತಾಗುತ್ತದೆ. ಸೀತೆ ಅಗಲಿದ ದುಃಖ ತಾಳಲಾರದೆ ರಾಮ ಸರಯೂ ನದಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡನು (ಉ. ಕಾಂ. ಸರ್ಗ 100, ಶ್ಲೋಕ 7.) ಇಂಥ ರಾಮನನ್ನು ಪೂಜಿಸಿದರೆ ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಮಹಾಭಾರತದಲ್ಲಿ ಕುರುಕ್ಷೇತ್ರ ಯುದ್ಧ ಮುಗಿದ ಮೇಲೆ ಶ್ರೀಕೃಷ್ಣ ಮರದ ಕೆಳಗಡೆ ಮಲಗಿರುತ್ತಾನೆ. ಬೇಟೆಗಾಗಿ ಬಂದಿದ್ದ ಚರ ಎಂಬ ಹೆಸರಿನ ಬೇಡ ಅವನನ್ನು ದೂರದಿಂದ ನೋಡಿ, ಜಿಂಕೆ ಎಂದು ತಪ್ಪಾಗಿ ತಿಳಿದುಕೊಂಡು ಅವನ ಅಂಗಾಲಿಗೆ ಬಾಣ ಹೊಡೆದು ಕೊಂದುಬಿಡುತ್ತಾನೆ. 'ದೇವರು' ಎನ್ನಿಸಿಕೊಂಡ ಈ ಇಬ್ಬರು ವ್ಯಕ್ತಿಗಳೂ ತಮ್ಮ ದುರಂತವನ್ನು ಹೀಗೆ ಕಾಣುತ್ತಾರೆ. ಆದರೆ ದೇವರು ಅಮರ ಎನ್ನುವುದುಂಟು. ಅಂದರೆ ದೇವರಿಗೆ ಸಾವು ಇಲ್ಲ, ಅಂಥದ್ದರಲ್ಲಿ ವಿಷ್ಣುವಿನ ಅವತಾರಗಳೆಂಬ ಈ ಇಬ್ಬರೂ ಸಾಯುತ್ತಾರೆ ಎಂದರೆ ಏನರ್ಥ? ಇವರು ದೇವರಲ್ಲ ಎಂಬುದು ಇದರಿಂದ ಖಚಿತವಾಗುತ್ತದೆ.

ಹರಿಕಥೆ ದಾಸರು ಮತ್ತು ಪುರೋಹಿತರು ಮುಗ್ಧ ಜನರನ್ನು ನಂಬಿಸಿರುವಂತೆ ರಾಮ ದೇವರಲ್ಲ, ಇದನ್ನು ರಾಮಾಯಣ ಕಾವ್ಯ ಬರೆದ ವಾಲ್ಮೀಕಿಯೇ ಸ್ಪಷ್ಟಪಡಿಸಿದ್ದಾನೆ. ನನಗೆ ಒಬ್ಬ ಆದರ್ಶ ವ್ಯಕ್ತಿಯ ಬಗ್ಗೆ ತಿಳಿಸಿಕೊಡಿರೆಂದು - "ಜ್ಞಾತುಂ ಏವಂ ವಿಧ ನರಂ" (ವಾಲ್ಮೀಕಿ ರಾಮಾಯಣ, 1. 1. 5). ತ್ರಿಲೋಕ ಸಂಚಾರಿಯಾದ - ಅಂದರೆ ಅನೇಕ ದೇಶಗಳನ್ನು ಸುತ್ತಾಡಿ ವಿಷಯ ತಿಳಿದಿರುವ - ನಾರದನನ್ನು ಕುತೂಹಲಿಯಾದ ವಾಲ್ಮೀಕಿ ಮಹರ್ಷಿ ಕೇಳುತ್ತಾನೆ. ಅದಕ್ಕೆ ನಾರದ "ನೀನು ಕೇಳಿದಂಥ ವ್ಯಕ್ತಿ ಲೋಕದಲ್ಲಿ ಅಪರೂಪ. ಆದರೂ ಒಬ್ಬ ಇದ್ದಾನೆ. ಅವನು ರಾಮ; ಅಯೋಧ್ಯೆಯಲ್ಲಿ ಇದ್ದಾನೆ" ಎಂದು ನಾರದ ಸುಮಾರು ತೊಂಬತ್ತು ಶ್ಲೋಕಗಳಲ್ಲಿ ರಾಮಾಯಣ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುತ್ತಾನೆ. (ಬಾಲಕಾಂಡ, ಸರ್ಗ 1, ಶ್ಲೋಕ 8 - 97.)

ವಾಲ್ಮೀಕಿ ಕೇಳುವುದು ಬಹಳ ಮುಖ್ಯವಾಗಿ ಎರಡು ಅಂಶಗಳು: ಒಂದು, ಅಂಥ ಆದರ್ಶ ಮನುಷ್ಯ ಬದುಕಿರಬೇಕು. ಏಕೆಂದರೆ ನೋಡಿದರೆ ಮಾತ್ರ ನಂಬಿಕೆ ಬರುತ್ತದೆ. ಎರಡು, ಈಗ ('ಸಾಂಪ್ರತಂ', ಬಾಲಕಾಂಡ, ಸರ್ಗ, 1. ಶ್ಲೋಕ 2.) ಅವನು ಜೀವಂತ ಇರಬೇಕು ಎನ್ನುತ್ತಾನೆ. ಹಿಂದೆ ಇದ್ದ ಎಂದರೆ ಪುರಾಣವಾಗುತ್ತದೆ; ಮುಂದೆ ಬರುತ್ತಾನೆ ಎಂದರೆ ಕಲ್ಪನೆ ಆಗುತ್ತದೆ. ದೇವರನ್ನು ಸರ್ವಜ್ಞ ಸರ್ವಶಕ್ತ ಸರ್ವಾಂತರ್ಯಾಮಿ ಎಂದಲ್ಲವೆ ಹೇಳೋದು? ರಾಮ ದೇವರಾಗಿದ್ದರೆ ಸೀತೆಯನ್ನು ಯಾರು ಕದ್ದೊಯ್ದಿದ್ದಾರೆಂದು ಗೊತ್ತಾಗಬೇಕಿತ್ತಲ್ಲ? ಸೀತೆಯನ್ನು ಹುಡುಕಲು ಕಪಿ ದಂಡನ್ನು ರಾಮ ಏಕೆ ಕಳುಹಿಸಬೇಕು?

ರಾಮ ರಾವಣರ ಯುದ್ಧ ಮುಗಿದ ಮೇಲೆ ದೇವತೆಗಳು ರಾಮನನ್ನು ಶ್ಲಾಘಿಸಿ, ನೀನು ವಿಷ್ಣುವಿನ ಅವತಾರ ಇತ್ಯಾದಿಯಾಗಿ ಪ್ರಶಂಸಿಸುತ್ತಾರೆ. ಆಗ ರಾಮ ಆಡುವ ನುಡಿ ಮೌಲಿಕವಾದುದು: "ಆತ್ಮಾನಂ ಮಾನುಷಂ ಮನ್ಯೇ, ರಾಮಂ ದಶರಥಾತ್ಮಜಂ - ನಾನು ಮನುಷ್ಯ, ದಶರಥನ ಮಗ ಎಂಬುದಷ್ಟೆ ನನಗೆ ಗೊತ್ತು" (ಯುದ್ಧಕಾಂಡ, ಸರ್ಗ 120, ಶ್ಲೋಕ 11.). ಹೀಗೆ ರಾಮ ತನ್ನ ಮನುಷ್ಯತ್ವವನ್ನು ಸ್ಥಿರಪಡಿಸಿ, ದೇವತ್ವವನ್ನು ನಿರಾಕರಿಸುವಂಥದ್ದು ಅನುಕರಣೀಯವಾದುದು, ಪ್ರಮುಖವಾದುದು. ಬ್ರಹ್ಮ ಇತ್ಯಾದಿ ದೇವತೆಗಳು ರಾಮನಿಗೆ ನೀನು ದೇವರು, ವಿಷ್ಣುವಿನ ಅವತಾರ ಎಂದು ಹೇಳುವುದೆಲ್ಲ ಅನುಕೂಲ ಪಡೆದವರು ಹೇಳುವ ಲೋಕಾರೂಢಿ ಮೆಚ್ಚುಗೆಯ ಮಾತು. ಸೀತೆ ಅಪಹರಣವಾಗಿ ರಾಮ ದುಃಖಿಸುತ್ತಿದ್ದಾಗ ಬ್ರಹ್ಮ ಮುಂತಾದವರು ಬಂದು ಏಕೆ ಅವನಿಗೆ ಸಮಾಧಾನ ಹೇಳುವುದಿಲ್ಲ?

ಆದರೆ ಕೃಷ್ಣ 'ನಾನು ದೇವರು' ಎಂದು ಘಂಟಾಘೋಷವಾಗಿ ಸಾರುತ್ತಾನೆ. ನಾನು, ನಾನು, ನಾನೇ ಸರ್ವಸ್ವ ಎಂಬ ಕೃಷ್ಣನ ದುರಹಂಕಾರ ಭಗವದ್ಗೀತೆಯಲ್ಲಿ ತುಂಬಿ ತುಳುಕುತ್ತಿದೆ. ಅವನು ಭಗವದ್ಗೀತೆಯಲ್ಲಿ ವಿಶ್ವರೂಪ ತೋರಿಸುತ್ತಾನೆ. ಆದರೆ ಇದು ವಿಶ್ವರೂಪ ಹೇಗಾದೀತು? ಬೇರೆ ಬೇರೆ ದೇಶಗಳ ವಿವರಗಳಿಲ್ಲದ ಇದು ಬರಿ ಭರತಖಂಡದ ದರ್ಶನವಾಗಿದೆ. ಆದರೂ ಅದು ಸಮಗ್ರವಾಗಿ ಇಲ್ಲ, ಭಗವದ್ಗೀತೆಯ ರಚನಾಕಾರನ ಭೌಗೋಳಿಕ ಜ್ಞಾನ ಭಾರತದ ಕೆಲವು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದೆ.

ಮೂಲ ರಾಮಾಯಣದಲ್ಲೇ ಇಷ್ಟೆಲ್ಲ ಖಚಿತ ಅಂಶಗಳು ಇದ್ದರೂ "ರಾಮ ದೇವರಲ್ಲ!" ಎಂದರೆ ಏಕೆ ಜನರು ಸಿಟ್ಟುಗೊಳ್ಳುತ್ತಾರೆ? ಕಾರಣ, ಕನ್ನಡದಲ್ಲಿ ಮತ್ತು ದೇಶ ಭಾಷೆಗಳಲ್ಲಿ ಬಂದಿರುವುದೆಲ್ಲ ಮೂಲ ರಾಮಾಯಣದ ಸಾರಾಂಶವಷ್ಟೇ ಆಗಿದೆ. ವಾಲ್ಮೀಕಿ ರಾಮಾಯಣ ಏಳು ಕಾಂಡಗಳಲ್ಲಿ ಹರಡಿಕೊಂಡಿದೆ ಎಂಬ ಅರಿವು ಅಗತ್ಯ:

ಚತುರ್ ವಿಂಶತ್ ಸಹಸ್ರಾಣಿ ಶ್ಲೋಕಾನಾಂ ಉಕ್ತವಾನ್ ಋಷಿಃ


ತಥಾ ಸರ್ಗ ಶತಾನ್ ಪಂಚ ಷಟ್ ಕಾಂಡಾನಿ ತಥೋತ್ತರಮ್.

ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂಧಾಕಾಂಡ, ಸುಂದರಕಾಂಡ, ಯುದ್ಧಕಾಂಡ ಮತ್ತು ಉತ್ತರಕಾಂಡ; ಇವುಗಳ ಒಟ್ಟು ಸರ್ಗಗಳು 637, ಒಟ್ಟು ಶ್ಲೋಕಗಳು 24253 (ಬಾಲಕಾಂಡ ಸರ್ಗ 4, ಶ್ಲೋಕ 2.)

ರಾಮಾಯಣ ಕತೆಯನ್ನು ಸಂಕ್ಷಿಪ್ತ ರೂಪದಲ್ಲಿ ಓದಿರುವ ಜನರು ತಾವು ಓದಿದ್ದೇ ಸಂಪೂರ್ಣ ರಾಮಾಯಣ ಎಂಬ ಭ್ರಮೆಯಲ್ಲಿದ್ದಾರೆ. ಸಂಕ್ಷಿಪ್ತವಾಗಿ ರಾಮಾಯಣ ಕತೆ ಬರೆಯುವವರು ಉದ್ದೇಶಪೂರ್ವಕವಾಗಿ ವರ್ಣವ್ಯವಸ್ಥೆಯ ವಿಚಾರವನ್ನು ಸುರಕ್ಷಿತವಾಗಿ ಕೈಬಿಟ್ಟಿದ್ದಾರೆ; ಬ್ರಾಹ್ಮಣ ವರ್ಗ ದೇವರ ಹೆಸರಿನಲ್ಲಿ ಎಷ್ಟು ಮೋಸ ಮಾಡಿದೆ, ಜನಸಾಮಾನ್ಯರನ್ನು ಭಯಂಕರವಾಗಿ ತುಳಿದಿದೆ ಎಂಬುದನ್ನು ಉದ್ದೇಶಪೂರ್ವಕವಾಗಿ ಮರೆಮಾಚಲಾಗಿದೆ.

ರಾಮ ದೇವರು ಅಥವಾ ದೇವರ ಅವತಾರ ಎನ್ನುವುದಾದರೆ ಅವನು ಪ್ರತಿನಿಧಿಸುವ ಧರ್ಮ ಯಾವುದು?

ಬಾಲಕಾಂಡದ ಪ್ರಾರಂಭದಲ್ಲೇ ಈ ಮಾತುಗಳು ಬರುತ್ತವೆ: "ಚಾತುರ್ವರ್ಣ್ಯ ಹಿತಾರ್ಥಾಯ ಕರ್ತವ್ಯಂ ರಾಜಸೂನು ನ - ಚತುರ್‌ವರ್ಣದ ಹಿತಕ್ಕಾಗಿ ರಾಜನ ಮಗ ಕರ್ತವ್ಯ ಮಾಡಬೇಕು" (ಸರ್ಗ 4, ಶ್ಲೋಕ 17.). ರಾಮ "ಚಾತುರ್‌ವರ್ಣಸ್ಯ ರಕ್ಷಿತಾ - ಚಾತುರ್‌ವರ್ಣವನ್ನು ರಕ್ಷಿಸುತ್ತಿದ್ದಾನೆ" ಹಾಗೂ "ಬ್ರಾಹ್ಮಣಾನಾಂ ಉಪಾಸಿತಾ - ಬ್ರಾಹ್ಮಣರ ಸೇವೆಯಲ್ಲಿ ನಿರತನಾಗಿದ್ದಾನೆ" (ಸುಂದರಕಾಂಡ ಸರ್ಗ 35, ಶ್ಲೋಕ 11 ಮತ್ತು 13.). ರಾಮ ಸಮಾನತಾವಾದಿಯಲ್ಲ, ವರ್ಣವಾದಿ; ಚಾತುರ್ವರ್ಣ ಪರಿಪಾಲಕ. ಬ್ರಾಹ್ಮಣರು ಮೇಲು, ಉಳಿದವರೆಲ್ಲ ಕೀಳು ಎಂದು ಅವನು ನಡೆದುಕೊಳ್ಳುತ್ತಾನೆ. ಏಕೆಂದರೆ, ಬ್ರಾಹ್ಮಣರು ತಾವು ದೇವರಿಗೂ ದೇವರೆಂದು ಹೇಳಿಕೊಂಡಿದ್ದಾರೆ. ಈ ದೇವರುಗಳೆಲ್ಲ ಬ್ರಾಹ್ಮಣರು ತಮ್ಮ ಪಟ್ಟಭದ್ರಹಿತಾಸಕ್ತಿಯನ್ನು ಕಾಯ್ದುಕೊಳ್ಳಲು ಸೃಷ್ಟಿಸಿರುವ ಬೆದರುಬೊಂಬೆಗಳು. ಬ್ರಾಹ್ಮಣರು ತಾವೇ ದೇವರು ಎಂದು ಹೇಳಿಕೊಂಡಿರುವುದರಿಂದ 'ದೇವರು' ಎಂಬುದು ಇಲ್ಲ ಎಂದು ಅವರೇ ಖಚಿತಪಡಿಸಿದಂತಾಯಿತು.



ಇದೇ ಸಂದರ್ಭದಲ್ಲಿ ಕೃಷ್ಣನ ಬಗ್ಗೆ ಡಾ. ಬಾಬಾಸಾಹೇಬ ಅಂಬೇಡ್ಕರ್ ಹೇಳಿರುವುದನ್ನು ಗಮನಿಸಬೇಕು:

"ಧರ್ಮರಾಯನ ರಾಜಸೂಯ ಯಾಗದಲ್ಲಿ ಬ್ರಾಹ್ಮಣರ ಕಾಲು ತೊಳೆಯುವ ಕೆಲಸವನ್ನು ಕೃಷ್ಣನು ವಹಿಸಿಕೊಂಡನಂತೆ! (ಡಾ. ಬಾಬಾ ಸಾಹೇಬ ಅಂಬೇಡ್ಕರ್: 'ರೈಟಿಂಗ್ಸ್ ಅಂಡ್ ಸ್ಪೀಚಸ್' ಸಂ. 4, ಪು. 339).

ಇದೇನಿದು? ದೇವರೇ ಬ್ರಾಹ್ಮಣರ ಸೇವೆ ಮಾಡುವುದೆ? ಬ್ರಾಹ್ಮಣರಲ್ಲವೇ ದೇವರ ಸೇವೆ ಮಾಡಬೇಕಾದದ್ದು? ಎಂದರೆ ಅದು ಬ್ರಾಹ್ಮಣ ಧರ್ಮಕ್ಕೇ ವಿರುದ್ಧವಾದದ್ದು.

ದೇವರನ್ನೇ ಸೇವೆಗೆ ಇಟ್ಟುಕೊಂಡಿರುವ ಬ್ರಾಹ್ಮಣರಿಗೆ ಹುಲುಮಾನವರಾದ, ಅಲ್ಲ, ಕ್ರಿಮಿಗಳಿಗೂ ಕೀಳಾದ ಶೂದ್ರರು ಯಾವ ಲೆಕ್ಕ? ಆದ್ದರಿಂಧ ಶೂದ್ರರನ್ನು ಅವರು ತಮ್ಮ ಗುಲಾಮರನ್ನಾಗಿ ಮಾಡಿಕೊಂಡಿದ್ದಾರೆ. 'ಮನುಸ್ಮೃತಿ'ಯ ಈ ಮಾತುಗಳನ್ನು ತಿಳಿದುಕೊಳ್ಳಿ:

"ದಾಸ್ಯಂ ಶೂದ್ರಂ ದ್ವಿಜನ್ಮನಾಂ. (8. 410) ಬ್ರಾಹ್ಮಣರ ದಾಸನಾಗಿ ಶೂದ್ರ ಸೇವೆ ಮಾಡಬೇಕು".

ಶೂದ್ರಂ ತು ಕಾರಯೇತ್ ದಾಸ್ಯಂ ಕ್ರೀತಂ ಅಕ್ರೀತಂ ಏವ ವಾ

ದಾಸ್ಯಾಯೈವ ಹಿ ಸೃಷ್ಟೋಽಸೌ ಬ್ರಾಹ್ಮಣಸ್ಯ ಸ್ವಯಂಭುವಾ. (8. 413.)

"ಶೂದ್ರ ಜೀತಕ್ಕಿರಲಿ ಅಥವಾ ಇಲ್ಲದಿರಲಿ, ಅವ... ಸೇವೆ ಮಾಡುವಂತೆ ಬಲವಂತಪಡಿಸಬೇಕು. ಏಕೆಂ... ಶೂದ್ರನನ್ನು ದೇವರು ಸೃಷ್ಟಿಸಿರುವುದೇ ಬ್ರಾಹ್ಮಣರ ... ಮಾಡುವುದಕ್ಕಾಗಿ."

ಯಾರ್‍ಯಾರು ಶೂದ್ರರು ಮತ್ತು ಅವರು ... ಶೂದ್ರರಾಗುತ್ತಾರೆ ಎಂದು ಮನು ಹೇಳುತ್ತಾನೆ:

ಧ್ವಜಾಹೃತೋ ಭಕ್ತದಾಸೋ ಗೃಹಜಃ ಕ್ರೀತದತ್ತ್ರಿ...

ಪೈತ್ರಿಕೋ ದಂಡದಾಸಶ್ಚ ಸಪ್ತೈತೇ ದಾಸಯೋನ...

(8. 416.)

"ಯುದ್ಧದಲ್ಲಿ ಸೋತು ಸಿಕ್ಕಿದವನು, ಅನ್ನ... ಸೇರಿದವನು, ದಾಸಿಯಲ್ಲಿ ಹುಟ್ಟಿದವನು, ಕ್ರಯಕ್ಕೆ ಬಂದ... ದಾನವಾಗಿ ಸಿಕ್ಕಿದವನು, ಪಿತ್ರವಿನ ದಾಸನು, ಅಪರಾಧ... ದಂಡಿಸಿ ಬಂದವನು - ಹೀಗೆ ಏಳು ರೀತಿಯಲ್ಲಿ ಜನ... ಶೂದ್ರರಾಗುತ್ತಾರೆ." ಇಂಥ ಅವಮಾನ ಸಹಿಸಿಕೊಂಡಿ... ಶೂದ್ರರು ಮನುಷ್ಯರೇ?"

ಈ ಘೋರ ಅಪಮಾನವನ್ನು ಸಹಿಸದ ಮಹಾಮಾ... ಪ್ರೇಮಿಗಳಾದ ಅಂಬೇಡ್ಕರ್ ಮತ್ತು ಪೆರಿಯಾ... 'ಮನುಸ್ಮೃತಿ'ಯನ್ನು ಸುಟ್ಟುಹಾಕಿದರು.

ಇಂಥ ದೊಡ್ಡ ಘಟನೆ ನಡೆದಿದ್ದರೂ ಶೂದ್ರರು ಬದಲಾಗಲಿಲ್ಲ? ಈ ಸಂದರ್ಭದಲ್ಲಿ ಮನು ಹೇಳು...

ನ ಸ್ವಾಮಿನಾ ನಿಸೃಷ್ಟೋಽಪಿ ಶೂದ್ರೋ ದಾಸ... ವಿಮುಚ್ಯತೇ

ನಿಸರ್ಗಜಂ ಹಿ ತತ್ತಸ್ಯ ಕಸ್ತಸ್ಮಾತ್ತದಪೋಹತಿ. 414.)

"ಶೂದ್ರ ತನ್ನ ಒಡೆಯನ ದಾಸ್ಯದಿಂದ ಬಿಡು... ಪಡೆದರೂ ಅವನಿಗೆ ಬಿಡುಗಡೆ ಎಂಬುದೇ ಇಲ್ಲ, ಏಕೆಂ... ದಾಸ್ಯ ಅವನಿಗೆ ಸ್ವಭಾವತಃ ಬಂದಿದೆ. ಯಾರು ತಾ... ಅವನನ್ನು ಬಿಡುಗಡೆ ಮಾಡಲು ಸಾಧ್ಯ?" ಎಂಬ ಮಾತು ಭಾರೀ ಅವಮಾನಕರವಾಗಿದೆ.

ಶೂದ್ರರು ಬಿಡುಗಡೆ ಆಗದಂತೆ ದೇವರು ದೇವ... ಜ್ಯೋತಿಷ್ಯ ಮುಂತಾದ ಬೇಡಿಗಳ... ಪುರೋಹಿತಶಾಹಿ ಅವರಿಗೆ ತೊಡಿಸಿದೆ. ... ಬಂಧನದ ಬೇಡಿಗಳನ್ನೆಲ್ಲ ಕಿತ್ತೆಸೆದು ಶೂದ... ಹೊರಬರುವರೇ?

ಬ್ರಾಹ್ಮಣರು ಹೇಗೆ ತಮ್ಮನ್ನು ತಾ... ಮೇಲೇರಿಸಿಕೊಂಡಿದ್ದಾರೆ ಎಂಬುದನ್ನು ಗಮ...

ದೈವಾಧೀನಂ ಜಗತ್ ಸರ್ವಂ... ಮಂತ್ರಾಧೀನಾಃ ಚ ದೇವತಾಃ

ತೇ ಮಂತ್ರಾಃ ಬ್ರಾಹ್ಮಣಾಧೀನಾಃ ತಸ್ಮಾ... ಬ್ರಾಹ್ಮಣಃ ದೈವತಂ.


"ಇಡೀ ವಿಶ್ವ ದೇವತೆಗಳ ಅಧೀನದ... ದೇವತೆಗಳು ಮಂತ್ರದ ಅಧೀನದಲ್ಲಿದ್ದಾರೆ. ಮಂತ್ರ... ಬ್ರಾಹ್ಮಣರ ಅಧೀನದಲ್ಲಿವೆ. ಆದ್ದರಿಂದ ಬ್ರಾಹ್ಮಣ... ದೇವರು." (**W. J. Wilkins: Mode... Hinduism**, ಪು. 240; 1975)

"ಬ್ರಾಹ್ಮಣಃ ಸಂಭವೇನೈವ ದೇವಾನಾಮಪಿ ದೈ... - ಹುಟ್ಟಿನಿಂದಲೇ ಬ್ರಾಹ್ಮಣ ದೇವರಿಗೂ ದೇವರಾಗಿದ... (ಮನುಸ್ಮೃತಿ 11. 84.)

ಹೀಗೆ ಬ್ರಾಹ್ಮಣರು ತಾವು ಭೂಸುರರು ... ವಿಚಾರವನ್ನು ಹರಡಿಕೊಂಡಿರಬೇಕು. ಸ್ವಲ್ಪವೂ ಸಂಕೋ... ನಾಚಿಕೆ, ಸ್ವವಿಮರ್ಶೆ ಇಲ್ಲದೆ ಬ್ರಾಹ್ಮಣರು ಹೇಗೆ ತಮ... ಹೊಗಳಿಕೊಂಡಿದ್ದಾರೆ ನೋಡಿ. ತಮ್ಮನ್ನು ತಾ... ಹೊಗಳಿಕೊಳ್ಳುವ ಹಾಗೂ ಶೂದ್ರಾದಿಗಳನ್ನು ತೆಗಳುವ... ಹಿಂದೆ ಶೂದ್ರರ ಸಹನೆ ಇದೆ ಅಲ್ಲವೆ? ಬ್ರಾಹ್ಮ... ಅಸಹನೆ ಸಹಮಾನವನನ್ನು ಕ್ರೂರವಾಗಿ ನೋಡು... ಮಾಡಿದ್ದರೆ ಶ್ರಮಜೀವಿಗಳಾದ ಶೂದ್ರರೆಲ್ಲಾ ಕ್ರೌಯ... ಸದಾ ಒಳಗಾಗುತ್ತಲೇ ಬಂದಿದ್ದಾರೆ.

ಹಾಗಾಗಿ ಬ್ರಾಹ್ಮಣರಿಗೆ ತೊಂದರೆ ಕೊಟ್ಟಿರುವ, ... ಮಾಡಿರುವ ದೇವರುಗಳು ಇಲ್ಲ, ಬ್ರಾಹ್ಮಣರು ಸೃಷ್ಟಿಸಿ... ದೇವರುಗಳೆಲ್ಲ ಚಾತುರ್ವರ್ಣ ಪ್ರತಿಪಾದಕರು ... ಚಾತುರ್ವರ್ಣ ಪರಿಪಾಲಕರಾಗಿದ್ದಾರೆ. ಇದರ... ಬ್ರಾಹ್ಮಣರು ಏಕೆ ರಾಮ ಮತ್ತು ಕೃಷ್ಣ ತಮ್ಮ ಅಧೀನರೆಂ... ಸೇವಕರೆಂದು ಬರೆದಿದ್ದಾರೆಂಬುದು ಓದುಗ... ಅರ್ಥವಾಗುತ್ತದೆ. ಇಂಥ ದೇವರುಗಳು ಪೂಜ... ಯೋಗ್ಯರೇ? ಇವರನ್ನು ಪೂಜೆ ಮಾಡುವವ... ಸ್ವಾಭಿಮಾನಿಗಳೇ? ಈ ಗುಲಾಮದೇವರನ್ನು ಪೂಜಿಸುವ... ಇನ್ನೂ ದೊಡ್ಡ ಗುಲಾಮರಲ್ಲವೆ? ಶೂದ್ರರು ಶಾಶ್ವತ... ಸೇವಕರಾಗೇ ಇರಲಿ ಎಂದೇ ಈ ಗುಲಾಮಿ ದೇವರು... ದೇವಸ್ಥಾನ ಕಟ್ಟುತ್ತಿದ್ದಾರೆ.

(ಮುಂದುವರೆಯುವ...



ಹುಲಿಯ ವಿಧವಿಧದ ಕೂಗುಗಳು

ಇಂಗ್ಲಿಷ್ ಮೂಲ: ಆರ್ಥರ್ ಫೋವೆಲ್
ಕನ್ನಡಕ್ಕೆ: ವಸಂತ್ ನಡಹಳ್ಳಿ



ಹುಲಿಯ ದೊಡ್ಡಗಂಟಲಿನ ಘರ್ಜನೆಯನ್ನು ...ವುದು ಕಾಡಿನ ಅತ್ಯಂತ ರೋಮಾಂಚಕಾರಿ ಅನುಭವ. ...ಕೂಗು ಭಯಾಶ್ಚರ್ಯಗಳನ್ನು ಒಮ್ಮೆಲೇ ಮೂಡಿಸುವಷ್ಟು ...ಷ್ಟದಾಗಿರುತ್ತದೆ. ಸುತ್ತಲಿನ ಎಲ್ಲಾ ಪ್ರಾಣಿಗಳ ಎದೆಯಲ್ಲಿ ...ಕ ಹುಟ್ಟಿಸುವ ಈ ಶಬ್ದ ಅವುಗಳನ್ನು ಸುರಕ್ಷಿತ ...ಗಳತ್ತ ಓಡಿಸುತ್ತದೆ. ಹುಲಿಯ ಘರ್ಜನೆ ಸುಮಾರು ...ಡು ಮೈಲು ದೂರದವರೆಗೂ ಕೇಳುತ್ತದೆ. ಆದರೆ ...ರ ಪೂರ್ಣ ಸ್ವರೂಪದ ಪರಿಚಯವಾಗಬೇಕಾದರೆ ... ಹೊತ್ತಿನಲ್ಲಿ 200 ಅಡಿ ದೂರದಿಂದ ಇದನ್ನು ...ಬೇಕು. ಇಷ್ಟು ಹತ್ತಿರದಿಂದ ನಾನು ಮಚಾನಿನಲ್ಲಿ ...ತು ಕೇಳಿದಾಗ ಕೂಡ ನನ್ನ ಕೂದಲುಗಳು ನಿಮಿರಿ ...ಲ್ಲುತ್ತಿದ್ದವು.

...ಗಂಡುಹೆಣ್ಣುಗಳು ಸೇರುವ ಸಮಯದಲ್ಲಿ ಕೂಗನ್ನು ...ಯೋಗಿಸಿ ಸಂಗಾತಿಯನ್ನು ಆಕರ್ಷಿಸುತ್ತವೆ. ಹೆಣ್ಣುಹುಲಿ ... ಮಾಮೂಲಿನ ಸ್ಥಳದಿಂದ ದೂರಹೋಗದೆ ಗಂಡನ್ನು ...ಗಿ ಕರೆಯುತ್ತದೆ. ಈ ಕರೆಯನ್ನು ಕೇಳಿದ ಗಂಡುಹುಲಿ ... ಅದಕ್ಕೆ ಉತ್ತರಿಸದಿದ್ದರೂ ಹೆಣ್ಣಿರುವ ಸ್ಥಳದ ಕಡೆ ...ಲಿಗಾಗಿ ಹೊರಡುತ್ತದೆ. ನಾನು ಹುಲಿಯ ಧ್ವನಿನಕಲನ್ನು ...ಡಿದಾಗ ತಕ್ಷಣ ಉತ್ತರಿಸಿದ ಗಂಡುಹುಲಿಗಳು ನಂತರ ...ಯಿಡೀ ಉದ್ರೇಕದಿಂದ ಘರ್ಜಿಸುತ್ತಾ ಅಲೆದಾಡಿದ್ದು ... ಅನುಭವಕ್ಕೆ ಬಂದಿದೆ. ಗಂಡುಹುಲಿಯೇ ಸಂಗಾತಿಗಾಗಿ ...ಗುತ್ತಾ ಹುಡುಕುವುದು ಅಪರೂಪ. ಅದರ ತಿರುಗಾಟ ... ಹೆಣ್ಣುಹುಲಿ ಇರುವುದು ಅದಕ್ಕೆ ಖಾತ್ರಿಯಾದಾಗ ... ಕರೆಯನ್ನು ಮಾಡುವ ಸಾಧ್ಯತೆಗಳಿರುತ್ತವೆ.

...ನಾನು ಧ್ವನಿನಕಲನ್ನು ಪ್ರಾರಂಭಿಸಿದಾಗ ಹುಲಿಗಳ ...ರ್ಣಪ್ರಮಾಣದ ಘರ್ಜನೆಯ ಸದ್ದಿಗಿಂತ ಹೆಚ್ಚಿನ ಸದ್ದನ್ನು ...ಡುತ್ತಿದ್ದೆ. ಇದು ನನಗೆ ಮತ್ತು ಶಿಕಾರಿಗಳಿಗೆ ಖುಷಿ ...ತ್ತಿತ್ತು. ಕಾಡಿನ ಇತರ ಪ್ರಾಣಿಗಳಿಗೂ ಇದು ಭಯ ...ಟ್ಟಿಸುತ್ತಿತ್ತು. ದೊಡ್ಡ ಹುಲಿಯೊಂದು ಇದಕ್ಕೆ ಉತ್ತರಿಸ ...ದರೂ ಇಂತಹ ಭಾರೀ ಘರ್ಜನೆಯನ್ನು ಮಾಡಬಲ್ಲ ...ನ್ನೊಂದು ಹುಲಿಯ ಶಕ್ತಿಯನ್ನು ಅಳೆಯಲು ಅದನ್ನು ...ಡುಕಿಕೊಂಡು ಬರುತ್ತಿತ್ತು. ಗಂಡುಹುಲಿಯನ್ನು ಕರೆಯು ...ಗ ಹೆಣ್ಣಿನ ಮೃದುಧ್ವನಿಯನ್ನು ಹೊರಡಿಸುವುದು ...ಪಯುಕ್ತವೆಂದು ನಾನು ಈಗ ಕಲಿತಿದ್ದೇನೆ. ಆದರೆ ...ತಹ ಮೃದುಧ್ವನಿ ಇನ್ನೊಂದು ಹೆಣ್ಣುಹುಲಿಗೆ ಆಕರ್ಷಕವೆ...ನಿಸುವುದಿಲ್ಲ! ಪ್ರಾಣಿಸಂಗ್ರಹಾಲಯದಲ್ಲಿ ಹುಲಿಗಳು ...ರಗಳಿಗೆ ಅಥವಾ ಕಬ್ಬಿಣದ ಸರಳುಗಳಿಗೆ ಮೈ ...ಜ್ಜುವುದು ಮತ್ತು ಮೂಸುವುದನ್ನು ನಾನು ನೋಡಿದ್ದೇನೆ. ...ು ಕೇವಲ ತುರಿಕೆಯನ್ನು ತೃಪ್ತಿಪಡಿಸುವುದಕ್ಕಾಗಿ ಅಲ್ಲ ...ವುದು ನನ್ನ ನಂಬಿಕೆ. ತಮ್ಮ ವಾಸನೆಯನ್ನು ಉಜ್ಜಿದ ...ಗಳ ಮೇಲೆ ಮೂಡಿಸಿ ತಮ್ಮ ಎತ್ತರದ ಅಂದಾಜನ್ನು ...ರ ಸ್ವಜಾತೀಯ ಪ್ರಾಣಿಗಳಿಗೆ ರವಾನಿಸುವುದು ಇದರ ...ದ್ದೇಶವಿ ರಬೇಕು. ಎತ್ತರದ ಹುಲ್ಲು ಅಥವಾ ನೇರವಾಗಿ ...ರುವ ವಸ್ತುಗಳ ಮೇಲೆ ಹಿಮ್ಮುಖವಾಗಿ ಮೂತ್ರ ...ಸುವಾಗಲೂ ಹುಲಿಗಳಿಗೆ ಇದೇ ಉದ್ದೇಶವಿರಬೇಕು. ... ಹೊಸದಾಗಿ ಕೊಲ್ಲಲಾದ ಪ್ರಾಣಿಯನ್ನು ತಿನ್ನಲು ಸಂಗಾತಿಯನ್ನು ಕರೆಯುವಾಗ ಕೂಡ ಘರ್ಜನೆಯನ್ನು ಹುಲಿಗಳು ಉಪಯೋಗಿಸುತ್ತವೆ. ಆದರೆ ಈ ವಿಷಯದಲ್ಲಿ ಹೆಣ್ಣುಹುಲಿ ಗಂಡುಹುಲಿಯಷ್ಟು ಉದಾರಿಯಾಗಿರುವದಿಲ್ಲ. ಅದು ಗಂಡನ್ನು ಕೊಂದ ಪ್ರಾಣಿಯಿಂದ ದೂರ ಕರೆದುಕೊಂಡು ಹೋಗಿದ್ದನ್ನು ನಾನು ನೋಡಿದ್ದೇನೆ.

ಅದು ಹುಲಿಗಳ ಸಂಗಮದ ಸಮಯವಾಗಿತ್ತು. ಹೆಣ್ಣುಹುಲಿಯೊಂದು ನಾವು ಕಟ್ಟಿದ್ದ ಬಲಿಪಶುವನ್ನು ಕೊಂದಿತ್ತು. ನನಗೆ ಬೇಟೆಯಾಡುವ ಉದ್ದೇಶವಿಲ್ಲದಿದ್ದರೂ ಮಚಾನಿನಲ್ಲಿ ಕುಳಿತು ಗಮನಿಸುತ್ತಿದ್ದೆ. ಸಂಗಾತಿಯನ್ನು ಬಲಿಪ್ರಾಣಿಯ ಬಳಿಗೆ ಕರೆಯುತ್ತದೆಯೇ ಎನ್ನುವ ಬಗೆಗೆ ನನಗೆ ಕುತೂಹಲವಿತ್ತು. ಕತ್ತಲಾಗುವ ಸಮಯದಲ್ಲಿ ಅರ್ಧಮೈಲು ದೂರದಿಂದ ಈ ಹುಲಿ ಪದೇಪದೇ ಕೂಗಲು ತೊಡಗಿತು. ದೂರದಿಂದ ಗಂಡುಹುಲಿಯೊಂದು ಇದಕ್ಕೆ ಉತ್ತರಿಸಿತು. ಹೀಗೆ ಸಂಪರ್ಕವನ್ನು ಕಲ್ಪಿಸಿಕೊಂಡ ಹೆಣ್ಣುಹುಲಿ ನಿಧಾನವಾಗಿ ಗಂಡುಹುಲಿಯನ್ನು ತಾನು ಬೇಟೆಯಾಡಿದ್ದ ಸ್ಥಳದಿಂದ ದೂರಕರೆದುಕೊಂಡು ಹೋಯಿತು. ಮರುದಿನ ಬೆಳಗ್ಗೆ ನಾನು ಮತ್ತೆ ಅದೇ ಸ್ಥಳಕ್ಕೆ ಹೋದಾಗ ರಾತ್ರಿ ಹೆಣ್ಣುಹುಲಿಯೊಂದೇ ಬಂದು ಭೋಜನ ಮಾಡಿರುವುದನ್ನು ಗಮನಿಸಿದೆ!

ದೊಡ್ಡಗಂಟಲಿನ ಘರ್ಜನೆಗಳ ಮಧ್ಯೆ ಹುಲಿಗಳು ಕೆಲವೊಮ್ಮೆ ಸಣ್ಣದಾದ ಉಲಿತದ ಧ್ವನಿಯನ್ನು ಹೊರಡಿಸುತ್ತವೆ. ಗಂಡು ಮತ್ತು ಹೆಣ್ಣು ಹುಲಿಗಳು ಹತ್ತಿರ ಬರುತ್ತಿದ್ದಂತೆ ಉಲಿತದ ಧ್ವನಿಯಿಂದ ಸಂಪರ್ಕವನ್ನು ಮುಂದುವರೆಸುತ್ತವೆ. ಅಥವಾ ಕರಡಿ, ಚಿರತೆ, ಆನೆಗಳಂತಹ ದೊಡ್ಡ ಪ್ರಾಣಿಗಳು ತಾವು ಕೊಂದು ಅಡಗಿಸಿದ್ದ ಪ್ರಾಣಿಯ ಬಳಿ ಇರುವ ಸೂಚನೆ ಸಿಕ್ಕಾಗ ಇಂತಹ ಉಲಿತದ ಧ್ವನಿಯಿಂದ ಹುಲಿ ಅವುಗಳಿಗೆ ಎಚ್ಚರಿಕೆಯ ಸಂದೇಶ ಕಳಿಸುತ್ತದೆ. ಕಾಡಾನೆಗಳು ಸನಿಹದಲ್ಲಿ ಇದ್ದರೆ ಅವುಗಳು ಜಾಗ ಖಾಲಿಮಾಡಬೇಕೆಂಬ ಸೂಚನೆಯನ್ನೂ ಉಲಿತದ ಮೂಲಕ ಕೊಡಬಹುದು. ಇದರ ಅರ್ಥ ಹುಲಿ ಹೇಡಿ ಅಂತಲ್ಲ, ಅದೊಂದು ಶಾಂತಿಪ್ರಿಯ ವನ್ಯಮೃಗ. ಹುಲಿಗೆ ತನ್ನ ಶಕ್ತಿಯ ಅರಿವಿದ್ದರೂ ಅನಗತ್ಯವಾದ ಕಾಳಗವನ್ನು ಅದು ಇಷ್ಟಪಡುವುದಿಲ್ಲ. ನಿದ್ದೆ ಮಾಡುತ್ತಿರುವ ಅಥವಾ ಮರಿಗಳನ್ನು ರಕ್ಷಿಸುತ್ತಿರುವ ಕರಡಿಗಳು ಅಥವಾ ಮರಿಯೊಂದಿಗೆ ಇರುವ ಹೆಣ್ಣಾನೆಗಳು ಹುಲಿಯ ಮೇಲೆ ಅಪಾಯಕಾರೀ ಆಕ್ರಮಣ ಮಾಡುವ ಸಾಧ್ಯತೆಗಳಿರುತ್ತವೆ. ಇವುಗಳಿಗೆ ತನ್ನ ಉಲಿತದಿಂದ ಮೊದಲೇ ಸೂಚನೆ ನೀಡುವುದರ ಮೂಲಕ ಹುಲಿ ತನ್ನ ಘನತೆಯನ್ನು ಕಾಯ್ದು ಕೊಳ್ಳಲು ಬಯಸುತ್ತದೆ. ಕೆಲವೊಮ್ಮೆ ಇಂತಹ ಉಲಿತವನ್ನು ದಟ್ಟಕಾಡಿನಲ್ಲಿ ಅಡಗಿರುವ ಬೇಟೆಪ್ರಾಣಿಗಳಲ್ಲಿ ಭಯಹುಟ್ಟಿಸಿ ಅವುಗಳನ್ನು ಹೊರತಂದು ಬೇಟೆಯಾಡಲು ಅಥವಾ ತನ್ನ ಸಂಗಾತಿ ಇರುವ ಸ್ಥಳದ ಕಡೆ ಓಡಿಸಲೂ ಉಲಿತದ ಧ್ವನಿಯನ್ನು ಉಪಯೋಗಿಸುತ್ತದೆ.

ತಮ್ಮ ಅಸಮ್ಮತಿ ಅಥವಾ ಅಸಹನೆಯನ್ನು ಕೂಡ ಹುಲಿಗಳು ಒಂದುರೀತಿಯ ಒತ್ತಿಹಿಡಿದ ಉಲಿತದ ಮೂಲಕ ವ್ಯಕ್ತಪಡಿಸುತ್ತವೆ. ಸಂದರ್ಭಕ್ಕನುಸಾರವಾಗಿ ಹುಲಿಗಳು ತಮ್ಮ ಘರ್ಜನೆ ಮತ್ತು ಕೂಗಿನಲ್ಲಿ ಸಾಕಷ್ಟು ಬದಲಾವಣೆ ಮಾಡಿಕೊಳ್ಳುತ್ತವೆ. ಈ ಎಲ್ಲಾ ಅಂಶಗಳನ್ನು ನಾನು ಕಾಡಿನಲ್ಲಿನ ನನ್ನ ಅನುಭವದಿಂದ ಹೇಳುತ್ತಿದ್ದೇನೆ.

ಹುಲಿ ಸಿಟ್ಟಿನಿಂದ ಘರ್ಜಿಸುವಾಗ ತನ್ನ ಬಾಲವನ್ನು ಮೇಲೆಕೆಳಗೆ ಅಲ್ಲಾಡಿಸುತ್ತದೆ. ಭಾರತದ ಕೆಲವು ಭಾಗಗಳಲ್ಲಿ ಗೋಡೆಯ ಮೇಲೆ ಬರೆದ ಚಿತ್ರಗಳಲ್ಲಿ ಹುಲಿಯ ಬಾಲದ ತುದಿ ತಲೆಯನ್ನು ಮುಟ್ಟುತ್ತಿರುವಂತೆ ತೋರಿಸಲಾಗಿದೆ. ಇದು ಸ್ವಲ್ಪ ಉತ್ಪ್ರೇಕ್ಷೆಯೆನ್ನಿಸಿದರೂ ಸಂಪೂರ್ಣ ಆಧಾರ ರಹಿತವಲ್ಲ.

ಹುಲಿಗಳಿಗೆ ಬಾಲದ ತುದಿಯಲ್ಲಿ ಒಂದು ಉಗುರು ಇರುತ್ತದೆ ಎಂದು ಹಳೆಯ ತಲೆಮಾರಿನ ಭಾರತೀಯ ಬೇಟೆಗಾರರು ನಂಬುತ್ತಾರೆ. ಸಿಂಹಗಳ ವಿಚಾರದಲ್ಲಿ ಇದು ಅರ್ಧಸತ್ಯ. ಸಿಂಹಗಳ ಬಾಲದ ತುದಿಯಲ್ಲಿನ ರೋಮಗಳಡಿಯಲ್ಲಿ ಮೂಳೆಯಂತಹ ಅಂಗವಿರುತ್ತದೆ. ಭಾರತದಲ್ಲಿ ಸಿಂಹಗಳು ಹೇರಳವಾಗಿದ್ದ ಸಮಯದಲ್ಲಿನ ಈ ತಿಳಿವಳಿಕೆಯನ್ನು ಹುಲಿಗಳಿಗೂ ವರ್ಗಾಯಿಸಿರಬಹುದು.

ಭಾರತದ ಶಿಕಾರಿಗಳ ಪ್ರಕಾರ ಹುಲಿಯ ಬಾಲದ ಚಲನೆ ಅದರ ಮನಸ್ಥಿತಿಯನ್ನು ಸೂಚಿಸುತ್ತದೆ. ಬಾಲ ಎಡಬಲಕ್ಕೆ ಚಲಿಸುತ್ತಿದ್ದರೆ ಹುಲಿ ಇಲ್ಲ ಎಂದು ಹೇಳುತ್ತಿರುತ್ತದೆ. ಆದರೆ ಅದು ಮೇಲೆಕೆಳಗೆ ಚಲಿಸಲು ಶುರುಮಾಡಿದರೆ ಆಕ್ರಮಣಕ್ಕೆ ಸಿದ್ಧವಾಗಿದೆ ಎಂದು ಎಚ್ಚರ ವಹಿಸಬೇಕು.

ಮೇಲೆ ಹೇಳಿದ ಎಲ್ಲಾ ರೀತಿಯ ಹುಲಿಯ ಕೂಗುಗಳಲ್ಲಿ ಅವುಗಳ ಪ್ರೇಮಗಾನವನ್ನು ನಾನು ಸೇರಿಸದಿರುವುದಕ್ಕೆ ಕಾರಣ ನನಗೆ ಅದನ್ನು ಕೇಳಲು ಸಾಧ್ಯವಾಗಲಿಲ್ಲ. ಹುಲಿಗಳು ಸಂಗಮ ಸಮಯದಲ್ಲಿ ಮಾಡಬಹುದಾದ ಸದ್ದುಗಳನ್ನು ಆಲಿಸಲು ಸಾಧ್ಯವಾಗುವಂತೆ ಮಾಹಿತಿ ನೀಡಲು ಜನರನ್ನು ನೇಮಿಸಿದ್ದರೂ ಮತ್ತು ಅದಕ್ಕಾಗಿ ಹಲವಾರು ಮೈಲಿಗಳ ದೂರ ಹೋಗಿದ್ದರೂ ಅದೃಷ್ಟ ನನ್ನನ್ನು ಇಂತಹ ಅವಕಾಶದಿಂದ ವಂಚಿಸಿದೆ.

ಕೈಕೊಟ್ಟ ಬಂದೂಕು

ಹುಲಿಗಳೇ ಇರದಿದ್ದ ಅರಣ್ಯದಲ್ಲಿ ನಾನೊಮ್ಮೆ ನಾಲ್ಕೈದು ದಿನ ಅದನ್ನು ಹುಡುಕಲು ವ್ಯರ್ಥಪ್ರಯತ್ನ ಮಾಡಿ ಇನ್ನೇನು ಅಲ್ಲಿಂದ ಹೊರಡಬೇಕೆಂದು ನಿರ್ಧರಿಸಿದ್ದೆ. ಆಗ ಅರಣ್ಯಪಾಲಕನೊಬ್ಬ ಒಂದು ದಿನ ಬೆಳಗ್ಗೆ ನಾಲ್ಕು ಮೈಲಿ ದೂರದಲ್ಲಿ ಹುಲಿಯಕೂಗನ್ನು ತಾನು ಕೇಳಿರುವುದಾಗಿ ತಿಳಿಸಿದ. ತಕ್ಷಣ ನಾನು ಅಲ್ಲಿಗೆ ಹೊರಟೆ.

ಆಗ ಬೆಳಗಿನ ಹನ್ನೊಂದು ಗಂಟೆಯಾಗಿದ್ದರಿಂದ ಹುಲಿಗಳು ಮಲಗಿರುವ ಸಾಧ್ಯತೆಗಳೇ ಹೆಚ್ಚಾಗಿತ್ತು. ಒಂದು ಸಣ್ಣ ಹಳ್ಳದ ಪಕ್ಕದಲ್ಲಿ ಮುಂದುವರೆದು ದಟ್ಟವಾದ ಪೊದೆಗಳಿದ್ದ ಜಾಗಕ್ಕೆ ಬಂದೆವು. ಸುತ್ತಲಿನ ಪ್ರದೇಶ ಕಾಣುವಂತಹ ಸುರಕ್ಷಿತ ಸ್ಥಳವೊಂದರಲ್ಲಿ ಕುಳಿತು ನಾನು ಹುಲಿಯ ಧ್ವನಿನಕಲನ್ನು ಮಾಡತೊಡಗಿದೆ. ಇದಕ್ಕೆ ಉತ್ತರ ರೂಪದಲ್ಲಿ ಒಂದು ಕೋತಿಯ ಎಚ್ಚರಿಕೆಯ ಕೂಗು ಮಾತ್ರ ಬರುತ್ತಿತ್ತು. ಧ್ವನಿನಕಲಿನ ಉಪಕರಣವನ್ನು ಸಹಾಯಕನಿಗೆ ನೀಡಿ ನಾನು ಇತರ ಕೆಲವು ಶಿಕಾರಿಗಳೊಂದಿಗೆ ಸ್ವಲ್ಪ ಮುಂದುವರೆಯಲು ನಿರ್ಧರಿಸಿದೆ. ಹಳ್ಳದ ಪಕ್ಕದಲ್ಲೇ ಸುಮಾರು 200 ಅಡಿಗಳು ಮುಂದುವರೆದು ಕುಳಿತುಕೊಂಡೆವು. ಹತ್ತಿರದ ಮರದಲ್ಲಿದ್ದ ಕೋತಿ ನಮ್ಮನ್ನು ನೋಡಿ ಸುರಕ್ಷಿತ ಭಾವನೆಯನ್ನು ತಳೆದು ವಿರಮಿಸಿತು. ನನ್ನ ಸಹಾಯಕ ಧ್ವನಿನಕಲನ್ನು ಮಾಡಲು ಯತ್ನಿಸಿದಾಗ ಗಂಟಲು ಕೆಟ್ಟಿರುವ ಮೊಸಳೆಯಿಂದ ಬರುವ ಶಬ್ದ ಹೊರಟಿತು! ಅವನು ಇದನ್ನೇ ಮುಂದುವರೆಸಿದಾಗ ನಾನು ಶಿಕಾರಿಯೊಬ್ಬನನ್ನು ಅವನ ಕಿವಿಹಿಂಡಲು ಕಳಿಸಿದೆ. ಶಿಕಾರಿ ಹೊರಡುವಾಗ ಅವನ ಬಳಿ ಇದ್ದ ನನ್ನ ಇನ್ನೊಂದು ಬಂದೂಕನ್ನು ಕೊಟ್ಟುಹೋಗಬೇಕೆಂದು ಹೇಳಬಯಸಿದ್ದೆ. ಆದರೆ ನನ್ನ ಹತ್ತಿರ ಆಗಲೇ ಎರಡು ನಳಿಕೆಯ ಬಂದೂಕು ಇದ್ದುದರಿಂದ ಸುಮ್ಮನಾದೆ.

ಶಿಕಾರಿ ಅಲ್ಲಿಂದ ಹೋದತಕ್ಷಣ ಕೋತಿ ಮತ್ತೆ ಕೂಗಲು ಶುರುಮಾಡಿತು. ಕೆಲವೇ ಕ್ಷಣಗಳಲ್ಲಿ ಮರವೊಂದರ ಕೆಳಗೆ ಪೊದೆಗಳಲ್ಲಿ ಹುಲಿಯತಲೆ ಕಾಣಿಸಿತು. ಸುಮಾರು 150 ಅಡಿ ದೂರದಲ್ಲಿದ್ದ ಅದು ನಿದ್ದೆಯ ಮಂಪರಿನಲ್ಲಿ ತಲೆಎತ್ತಿ ನಿಧಾನವಾಗಿ ಚಲಿಸುತ್ತಿತ್ತು. ಬಂದೂಕಿನ ಸೇಫ್ಟಿಕ್ಯಾಚ್‌ನ್ನು ತಳ್ಳಿ ಗುಂಡುಹಾರಿಸಲು ನಾನು ಸಿದ್ಧನಾದೆ. ಆದರೆ ಬೆರಳಿಗೆ ಗಾಯಮಾಡಿಕೊಂಡು ತಳ್ಳಿದರೂ ಸೇಫ್ಟಿಕ್ಯಾಚ್ ಮುಂದೆ ಹೋಗಲೇಇಲ್ಲ! ಅಷ್ಟುಹೊತ್ತಿಗೆ ಹುಲಿ ಹಳ್ಳದ ಎದುರಿನ ದಂಡೆಯ ಬಯಲು ಪ್ರದೇಶದಲ್ಲಿ ಕೇವಲ 70 ಅಡಿ ದೂರದಲ್ಲಿತ್ತು. ಜೇಬಿನಲ್ಲಿದ್ದ ಸಣ್ಣ ಚಾಕುವಿನಿಂದ ಕೂಡ ಸೇಫ್ಟಿಕ್ಯಾಚ್ ಅಲುಗಾಡಲಿಲ್ಲ. ಹುಲಿ ಈಗ ಹಳ್ಳವನ್ನು ದಾಟಿ ನೇರವಾಗಿ ನನ್ನಕಡೆ ಬರುತ್ತಿತ್ತು. ಏನು ಮಾಡಬೇಕೆಂದು ತಿಳಿಯದೆ ನಾನು ಹುಲಿ ನನ್ನನ್ನು ನೋಡಿ ದಾರಿ ಬದಲಾಯಿಸಬಹುದೆಂಬ ನಿರೀಕ್ಷೆಯಿಂದ ನಿಂತೇ ಇದ್ದೆ. ನನ್ನನ್ನು ನೋಡಿದ ಹುಲಿ ಬೇರೆಕಡೆ ಹೊರಳದೆ ದೃಷ್ಟಿಯನ್ನು ನೇರವಾಗಿ ಇಟ್ಟು ಗುರ್ರೆನ್ನುತ್ತಾ ಮುಂಗಾಲುಗಳನ್ನು ಬಗ್ಗಿಸಿ ಹಾರಲು ಸಿದ್ಧವಾಯಿತು! ನಿರುಪಯುಕ್ತ ಬಂದೂಕನ್ನು ಹಿಡಿದುಕೊಂಡಿದ್ದ ನಾನು ಸಂಪೂರ್ಣ ಹುಲಿಯ ಕೃಪೆಯಲ್ಲಿದ್ದೆ. ಆಗ ದೇವರದಯೆಯಿಂದ ನನಗೊಂದು ಯೋಚನೆ ಹೊಳೆಯಿತು. ಹುಲಿಯನ್ನು ನೋಡಿಯೇ ಇಲ್ಲವೆನ್ನುವಂತೆ ನಾನು ಹಳ್ಳದ ಮತ್ತೊಂದು ದಿಕ್ಕಿನತ್ತ ಗಮನಹರಿಸಿದೆ. ಮುಂದಿನ ಕ್ಷಣ ನನ್ನ ಭವಿಷ್ಯ ನಿರ್ಧಾರವಾಗುತ್ತದೆಂದು ನನಗೆ ಗೊತ್ತಿತ್ತು. ನಾನು ಓರೆಗಣ್ಣಿನಿಂದ ನೋಡುತ್ತಿದ್ದಂತೆ ಹುಲಿ ಹಿಂದೆತಿರುಗಿ ಎದುರಿನ ಹಳ್ಳದ ದಂಡೆಯನ್ನೇರಿ ಕಾಡಿನಲ್ಲಿ ಮರೆಯಾಯಿತು!

ಜೊತೆಗೆ ಬಂದಿದ್ದ ಶಿಕಾರಿಗಳು ನನ್ನ ಕತೆಯನ್ನು ನಂಬಲೇ ಇಲ್ಲ. ಬಂದೂಕಿನ ವಿಫಲತೆಯಿಂದಾದ ಬೇಸರದಿಂದ ನಾನು ಕ್ಯಾಂಪ್‌ಗೆ ಹಿಂತಿರುಗಿದೆ.

(ಮುಂದುವರೆಯುವುದು)

ಯಲಬುರ್ಗಾ: ಸಿ.ಎಚ್. ಪಾಟೀಲ್ರು ಬಿಜೆಪಿ ಸೇರ್ತಾರಾ?



ಕಳೆದ 20 ವರ್ಷಗಳಿಂದ ಯಲಬುರ್ಗಾದಲ್ಲಿ ತನ್ನದೇ ...ಗು ಹೊಂದಿರುವ ಸಿ.ಎಚ್. ಪಾಟೀಲರು ಬಿಜೆಪಿ ...ತ್ತಾರೆನ್ನುವ ಮಾತುಗಳಿಗೆ ಇದೀಗ ಹುಷ್ಕಿ ಬಂದಿದೆ. ...ಸ್, ಜೆಡಿಎಸ್, ಕೆಜೆಪಿ ಅಂತೆಲ್ಲ ರಾಜಕೀಯ ಭವಿಷ್ಯ ...ದರೆ ಗೆಲುವಿಗಿಂತ ಸೋಲುಗಳೇ ಅವರನ್ನು ...ದ್ದು ಹೆಚ್ಚು. ಅದರಲ್ಲೂ ಸತತ ಎರಡು ಬಾರಿ ... ಎಲೆಕ್ಷನ್‌ನಲ್ಲಿ ಸೋತ ಅವರಿಗೆ ಒಂದೆರಡು ... ಟಿಕೆಟ್ ತಪ್ಪಿದ ದುರಂತಗಳೂ ಇವೆ.

...ಮೊದಲಿನಿಂದಲೂ ಹಾಲಿ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿಯ ವಿರುದ್ಧ ರಾಜಕಾರಣ ಮಾಡುತ್ತಲೇ ಬಂದಿರುವ ಸಿ.ಎಚ್. ಪಾಟೀಲರು ಈ ಬಾರಿ ಬಿಜೆಪಿ ಸೇರಿಕೊಳ್ಳಲಿದ್ದಾರೆ ಎನ್ನುವ ಮಾತುಗಳು ಮೊದಲಿನಿಂದಲೂ ಕೇಳಿಬಂದಿದ್ದವು. ಕಳೆದ ಸಲ ಯಡಿಯೂರಪ್ಪನ ಕೆಜೆಪಿಯಿಂದ ಸ್ಪರ್ಧಿಸಿ ಸೋತಿದ್ದ ಅವರಿಗೆ ಬೇರೆ ಆಯ್ಕೆಗಳೂ ಇರಲಿಲ್ಲ. ಯಾಕೆಂದರೆ ಕಾಂಗ್ರೆಸ್‌ಗೆ ಹೋದರೆ ತನ್ನ ಕಟ್ಟಾ ವಿರೋಧಿ ಬಸವರಾಜ್ ರಾಯರೆಡ್ಡಿಯ ಅಡಿಯಾಳಾಗಬೇಕು. ಅದು ಸುತರಾಂ ಸಾಧ್ಯವಿಲ್ಲ. ಇನ್ನು ಜೆಡಿಎಸ್‌ಗೆ ಹೋಗಲು ಈ ಹಿಂದೆ ಆ ಪಕ್ಷ ಪಾಟೀಲರಿಗೆ ಮಾಡಿದ ನಂಬಿಕೆ ದ್ರೋಹ ಅಡ್ಡಿ!

ಮೊದಲು ಕಾಂಗ್ರೆಸ್‌ನಲ್ಲಿದ್ದ ಪಾಟೀಲರು, ಶಿವಶರಣಪ್ಪಗೌಡ ಪಾಟೀಲರನ್ನು ಮೂರು ಬಾರಿ ಎಂಎಲ್‌ಎ ಮಾಡಿಸಲು ಇತರ ಕಾರ್ಯಕರ್ತರಂತೆ ಪ್ರಾಮಾಣಿಕವಾಗಿ ಹೆಣಗಾಡಿದ್ದರು. ಆದರೆ 1997ರಲ್ಲಿ ಸಿ.ಎಚ್. ಪಾಟೀಲರು ಎಪಿಎಂಸಿ ಅಧ್ಯಕ್ಷನಾಗುವ ಅವಕಾಶ ಬಂದಿದ್ದಾಗ ಅದೇ ಶಿವಶರಣಪ್ಪಗೌಡ ಪಾಟೀಲ ಅಡ್ಡಗಾಲು ಹಾಕಿ ತಪ್ಪಿಸಿದ್ದರು. ಇದರಿಂದ ಸಿಟ್ಟಿಗೆದ್ದ ಪಾಟೀಲರು ಕಾಂಗ್ರೆಸ್‌ಗೆ ಗುಡ್‌ಬೈ ಹೇಳಿ 2003ರಲ್ಲಿ ಜೆಡಿಎಸ್ ಸೇರಿಕೊಂಡಿದ್ದರು. 2004ರ ಎಲೆಕ್ಷನ್‌ನಲ್ಲಿ ಅದೇ ಪಾರ್ಟಿಯಿಂದ ಸ್ಪರ್ಧಿಸಿ ಸೋತರು. ಆದರೆ 2005ರಲ್ಲಿ ಜಿಲ್ಲಾ ಪಂಚಾಯತಿ ಎಲೆಕ್ಷನ್‌ನಲ್ಲಿ ಗೆದ್ದನಂತರ ತಾಲ್ಲೂಕಿನಲ್ಲಿ ಜೆಡಿಎಸ್ ಪಕ್ಷವನ್ನು ಕಟ್ಟಲು ಸಿ.ಎಚ್.ಪಾಟೀಲರು ಅಪಾರ ಶ್ರಮ ಹಾಕಿದ್ದು ಸುಳ್ಳಲ್ಲ.

2008ರ ಎಮ್ಮೆಲ್ಲೆ ಎಲೆಕ್ಷನ್‌ನಲ್ಲಿ ಜೆಡಿಎಸ್ ಟಿಕೆಟ್ ಕೊಡಲಿಲ್ಲ. ಆಗಲೂ ಅವರು ಪಕ್ಷಕ್ಕಾಗಿ ದುಡಿಯುತ್ತಲೇ ಬಂದರು. ಆದರೆ 2013ರ ಎಲೆಕ್ಷನ್ ವೇಳೆಗೆ ಯಲಬುರ್ಗಾದಲ್ಲಿ ಪಾಟೀಲರ ಪರ ಒಲವು ಮೂಡಲು ಆರಂಭಿಸಿತ್ತು. ಬಿಜೆಪಿಯಂತೂ ಒಡೆದು ಛಿದ್ರವಾಗಿತ್ತು. ಇನ್ನು ಕಾಂಗ್ರೆಸ್‌ಗೆ ಪೈಪೋಟಿ ಕೊಡಲು ತಾಲ್ಲೂಕಿನಲ್ಲಿ ಸುಮಾರು 40 ಸಾವಿರದಷ್ಟು ಮತಗಳಿರುವ ಪಂಚಮಸಾಲಿಗಳ ಸಿ.ಎಚ್.ಪಾಟೀಲರಿಗೆ ಜೆಡಿಎಸ್ ಟಿಕೆಟ್ ಸಿಗಲಿದೆ ಅಂತಲೇ ಎಲ್ಲರೂ ಲೆಕ್ಕ ಹಾಕಿದ್ದರು.

ಆದರೆ ಜೆಡಿಎಸ್ ವರಿಷ್ಠರು ಕಣಕ್ಕಿಳಿಸಲು ಬಿ-ಫಾರ್ಮ್ ಕೊಟ್ಟಿದ್ದು ಪಂಪಾಪತಿ ಎಂಬ ಗಣಿಕುಳನಿಗೆ. ಆತನ ಬಳಿಯಿದ್ದ ರೊಕ್ಕದ ಗಂಟಿಗೆ ಜೆಡಿಎಸ್ ಟಿಕೆಟು ಬಿಕರಿಯಾಗಿತ್ತು ಅನ್ನೋ ಮಾತುಗಳೂ ಕೇಳಿಬಂದಿದ್ದವು. ಆಗ ಯಡಿಯೂರಪ್ಪನ ಕೆಜೆಪಿ ಹೊಕ್ಕ ಸಿ.ಎಚ್. ಪಾಟೀಲರು ತೆಂಗಿನಕಾಯಿಯ ಹುರಿಯಾಳಾಗಿ ನಿಂತಿದ್ದರು. ಆದರೂ ಪಂಚಮಸಾಲಿಗಳ ಓಟು ಒಲಿಯಲಿಲ್ಲ. ಮತ್ತೆ ಸೋತರು.

ಕಳೆದ ನಾಲ್ಕು ವರ್ಷಗಳಿಂದ ರಾಜಕೀಯವಾಗಿ ಅತಂತ್ರವಾಗಿರುವ ಸಿ.ಹೆಚ್.ಪಾಟೀಲ್‌ರು ಯಡಿಯೂರಪ್ಪನ ಶಿಷ್ಯ ಮಾಜಿ ಎಮ್.ಎಲ್.ಸಿ. ಮೋಹನ್ ಲಿಂಬಿಕಾಯಿ ಮುಖಾಂತರ ಯಡ್ಡಿಯನ್ನು ಭೇಟಿಯಾಗಿ ಚರ್ಚೆ ನಡೆಸಿದ್ದು ಬಿಜೆಪಿ ಸೇರಲು ವೇದಿಕೆ ಸಿದ್ಧ ಮಾಡಿಕೊಂಡಿದ್ದಾರೆ ಎನ್ನಲಾಗುತ್ತಿದೆ. ಈಗಾಗಲೇ ಮಾಜಿ ಎಂಎಲ್‌ಸಿ ಹಾಲಪ್ಪ ಆಚಾರ್ ಯಲಬುರ್ಗಾದ ಬಿಜೆಪಿ ಕ್ಯಾಂಡಿಡೇಟ್ ಅಂತ ಬಿಂಬಿಸಲಾಗುತ್ತಿದೆ. ಹಾಗಾಗಿ ಟಿಕೆಟ್ ಮೇಲಿನ ಆಸೆಯಿಟ್ಟುಕೊಂಡು ಸಿ.ಎಚ್.ಪಾಟೀಲರು ಕಮಲದತ್ತ ಮುಖ ಮಾಡಿರಲಾರರು. ಮತ್ತೇನು ಭರವಸೆಗಳು ಸಿಕ್ಕಿವೆಯೋ ಗೊತ್ತಿಲ್ಲ. ಆದರೆ ಪಾಟೀಲರ ಸೇರ್ಪಡೆಯಿಂದ ಕಾಂಗ್ರೆಸ್‌ನ ಬಸವರಾಜ್ ರಾಯರೆಡ್ಡಿ ವಿರುದ್ಧ ಸೆಣಸಾಡಲು ಬಿಜೆಪಿಗೆ ಮತ್ತಷ್ಟು ಬಲ ಸಿಗಲಿದೆ ಎಂಬುದಂತೂ ಸುಳ್ಳಲ್ಲ.

■ ಸ.ಶರಣಪ್ಪ ಪಾಟೀಲ್

ಟಿಪ್ಪು ಮತ್ತು ರಾಷ್ಟ್ರೀಯತೆಯ ಪರಿಕಲ್ಪನೆಗಳು



ಟಿಪ್ಪು ಸುಲ್ತಾನರನ್ನು ವಿರೋಧಿಸುವವರು ಮತ್ತು ಟಿಪ್ಪುವಿನ ಕುರಿತಂತೆ ಸದಭಿಪ್ರಾಯ ಹೊಂದಿದ ಇತಿಹಾಸಕಾರರಲ್ಲಿ ಕೆಲವರು ಟಿಪ್ಪುವನ್ನು ಓರ್ವ ಸ್ವಾತಂತ್ರ್ಯ ಹೋರಾಟಗಾರ ಎಂದು ಒಪ್ಪುವುದಿಲ್ಲ. ಮೊದಲನೆಯ ಗುಂಪಿನವರು ತಮ್ಮ ರಾಜಕೀಯ ಕಾರಣಗಳಿಗೆ ಟಿಪ್ಪುವನ್ನು ವಿರೋಧಿಸುತ್ತಿದ್ದರೆ, ಎರಡನೇ ಗುಂಪಿನವರು ಆ ಕಾಲದಲ್ಲಿ ಅಖಂಡ ಭಾರತದ ಪರಿಕಲ್ಪನೆಯೇ ಇರಲಿಲ್ಲ ಎಂದಮೇಲೆ ಅದು ಸ್ವಾತಂತ್ರ್ಯ ಹೋರಾಟ ಹೇಗಾಗುತ್ತದೆ ಎಂದು ಪ್ರಶ್ನಿಸುತ್ತಾರೆ. ಆದರೆ ಟಿಪ್ಪುವನ್ನು ಸ್ವಾತಂತ್ರ್ಯ ಹೋರಾಟಗಾರ ಎನ್ನಲು ಮತ್ತು ರಾಷ್ಟ್ರೀಯತೆಯ ಪರಿಕಲ್ಪನೆ ಹೊಂದಿದ್ದ ರಾಜ ಎನ್ನಲು ಇತಿಹಾಸದ ಪುಟಗಳಲ್ಲಿ ಧಾರಾಳ ದಾಖಲೆಗಳಿವೆ. ಅವುಗಳ ಮೇಲೆ ಪಕ್ಷಿನೋಟ ಬೀರುವ ಒಂದು ಪ್ರಯತ್ನವಿದು.

ಎಲ್ಲಾ ಇತಿಹಾಸಕಾರರು ಅಭಿಪ್ರಾಯ ಭೇದವಿಲ್ಲದೇ ಒಪ್ಪುವ ಒಂದು ವಿಚಾರ ಬ್ರಿಟಿಷರಿಗೆ ಸಂಪೂರ್ಣ ಭಾರತವನ್ನು ವಶಪಡಿಸಿಕೊಳ್ಳಲು ಏಕೈಕ ಮತ್ತು ಪ್ರಬಲ ತಡೆಯಾಗಿದ್ದುದು ಟಿಪ್ಪು. ಮೊದಲ ಎರಡು ಆಂಗ್ಲೋ ಮೈಸೂರು ಯುದ್ಧಗಳಲ್ಲಿ ಟಿಪ್ಪು ಸಾಧಿಸಿದ ಗೆಲುವೇ ಇದಕ್ಕೆ ಒಳ್ಳೆಯ ಸಾಕ್ಷಿ. ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಹುತಾತ್ಮರಾದಾಗ ಸಂತೋಷಕೂಟ ವೊಂದರಲ್ಲಿ ತಲ್ಲೀನನಾಗಿದ್ದ ಬ್ರಿಟಿಷ್ ಗವರ್ನರ್ ಜನರಲ್ ರಿಚರ್ಡ್ ವೆಲ್ಲೆಸ್ಲಿ ಟಿಪ್ಪು ಹುತಾತ್ಮತೆಯ ಸುದ್ದಿ ತಿಳಿದು ತನ್ನ ಕೈಯಲ್ಲಿದ್ದ ಮದ್ಯದ ಲೋಟವನ್ನೆತ್ತಿ "ಲೇಡೀಸ್ ಎಂಡ್ ಜಂಟ್ಲ್‌ಮೆನ್, ಮದ್ಯದ ಈ ಗುಟುಕು ಇಂಡಿಯಾದ ಹೆಣಕ್ಕೆ" ಎಂದು ಸಂತೋಷಾಚರಣೆ ಮಾಡಿದ್ದ (ದಿ ಸ್ವೋರ್ಡ್ ಆಫ್ ಟಿಪ್ಪು ಸುಲ್ತಾನ್- ಭಗವಾನ್ ಎಸ್ ಗಿಡ್ವಾಣಿ). ಒಂದು ವೇಳೆ ಟಿಪ್ಪು ರಾಷ್ಟ್ರೀಯವಾದಿಯಾಗಿರದಿದ್ದರೆ ಆತ ಹಾಗೇಕೆ ಹೇಳುತ್ತಿದ್ದ? ಇಂಡಿಯಾದ ಹೆಣ ಎನ್ನುವ ಬದಲಿಗೆ ಮೈಸೂರಿನ ಹೆಣ ಎನ್ನುತ್ತಿದ್ದನಲ್ಲವೇ?

ಟಿಪ್ಪು ಸುಲ್ತಾನ್ ದೇಶೀಯ ರಾಜರುಗಳೊಡನೆ ಬೇರೆ ಬೇರೆ ಸಂದರ್ಭಗಳಲ್ಲಿ ಯುದ್ಧ ಮಾಡಿದ್ದರಾದರೂ, ಯಾವತ್ತೂ ಆತ ದೇಶೀಯ ರಾಜರಿಗೆದುರಾಗಿ ವಿದೇಶಿ ಶಕ್ತಿಗಳೊಡನೆ ಕೈಜೋಡಿಸಿದ ಏಕೈಕ ಉದಾಹರಣೆಯೂ ಸಿಗುವುದಿಲ್ಲ.

ಟಿಪ್ಪು ದೇಶೀಯ ರಾಜರುಗಳಾದ ಮರಾಠರನ್ನು ಮತ್ತು ನಿಜಾಮರನ್ನು ಮನವೊಲಿಸಲು ಅನೇಕ ಬಾರಿ ಪ್ರಯತ್ನಿಸಿದ್ದರು. ನಾನು ನಿಮ್ಮ ಶತ್ರುವಲ್ಲ, ಬ್ರಿಟಿಷರು ನಮ್ಮೆಲ್ಲರ ಶತ್ರುಗಳು, ನಾವು ಅವರನ್ನು ಇಲ್ಲಿಂದ ತೊಲಗಿಸಲೇಬೇಕು ಎಂದು ಪರಿಪರಿಯಾಗಿ ಬೇಡಿಕೊಂಡಿದ್ದರು. ಆದರೆ ಅವರು ಟಿಪ್ಪುವಿನ ಸತತ ಮನವೊಲಿಕೆಯ ಪ್ರಯತ್ನದ ಬಳಿಕವೂ ಅವರು ಬ್ರಿಟಿಷರ ಸಂಗ ತೊರೆಯಲಿಲ್ಲ, ಬದಲಾಗಿ ಟಿಪ್ಪುವಿನ ವಿರುದ್ಧ ಬ್ರಿಟಿಷರೊಡನೆ ಕೈಜೋಡಿಸಿದರು.

ಮೂರನೇ ಆಂಗ್ಲೋ ಮೈಸೂರು ಯುದ್ಧದ ಬಳಿಕ ಟಿಪ್ಪು ಮರಾಠರ ಪ್ರತಿನಿಧಿ ಹರಿಪಂತನನ್ನು ರಹಸ್ಯವಾಗಿ ಭೇಟಿಯಾಗಿ "ಚೆನ್ನಾಗಿ ತಿಳಿದುಕೊಳ್ಳಿ, ಖಂಡಿತವಾಗಿಯೂ ನಾನು ನಿಮ್ಮ ಶತ್ರುವಲ್ಲ, ನಿಮ್ಮ ನಿಜವಾದ ಶತ್ರುಗಳು ಇಂಗ್ಲಿಷರು. ಅವರ ಕುರಿತು ಎಚ್ಚರದಿಂದಿರಿ" ಎಂದಿದ್ದರು (ದಿ ಸ್ವೋರ್ಡ್ ಆಫ್ ಟಿಪ್ಪು ಸುಲ್ತಾನ್- ಭಗವಾನ್ ಎಸ್ ಗಿಡ್ವಾಣಿ). ಆದರೆ ಮರಾಠರು ಕೊನೆಗೂ ಟಿಪ್ಪುವನ್ನು ನಂಬಲಿಲ್ಲ. ಆದಾಗ್ಯೂ ಟಿಪ್ಪು ತನ್ನ ಮನವೊಲಿಕೆಯ ಪ್ರಯತ್ನವನ್ನು ಮುಂದುವರಿಸಿದರು.

ಟಿಪ್ಪು ಮರಾಠಾ ಪೇಶ್ವೆ ಬಾಜಿರಾಯನ ಬಳಿಗೆ ತನ್ನ ದೂತನನ್ನು ಇದೇ ಸಂದೇಶದೊಂದಿಗೆ ಕಳುಹಿಸಿದ್ದರು. ಆದರೆ ಬಾಜಿರಾಯ ಅದಾಗಲೇ ತನ್ನ ಬುದ್ಧಿ ಮತ್ತು ಸ್ವಾಭಿಮಾನವನ್ನು ಬ್ರಿಟಿಷರಿಗೆ ಒತ್ತೆ ಇಟ್ಟಿದ್ದನು.

ಟಿಪ್ಪು ಹುತಾತ್ಮರಾದ ಸುದ್ದಿ ತಿಳಿದು ಮರಾಠರ 'ನಾನಾ' ಹೃದಯವೇದನೆ ತಾಳಲಾರದೇ ಹೇಳಿದ ಮಾತನ್ನು ದೇಶೀಯ ಮತ್ತು ಮಹಾಹತುಶಾಹಿ ಇತಿಹಾಸಕಾರರು ದಾಖಲಿಸಿದ್ದಾರೆ. "ಟಿಪ್ಪು ಕತೆ ಮುಗಿಯಿತು. ಬ್ರಿಟಿಷರ ಶಕ್ತಿ ಇನ್ನಷ್ಟು ಹೆಚ್ಚಿದೆ. ಈಗಾಗಲೇ ಈಶಾನ್ಯ ಭಾರತ ಅವರದ್ದಾಗಿದೆ. ಪೂನ ಅವರು ಮುಂದಿನ ಬಲಿಪಶುವಾಗಲಿದೆ. ಕೆಟ್ಟದಿನಗಳು ನಮ್ಮ ಮುಂದಿವೆ. ಇದರಿಂದ ತಪ್ಪಿಸಿಕೊಳ್ಳಲಿಕ್ಕಾಗದು" (ಕೋ-ಚೆನ್ನಬಸಪ್ಪ - ಹಿಂದೂ ಧರ್ಮ ರಕ್ಷಕ ಟಿಪ್ಪು ಸುಲ್ತಾನ್) ಟಿಪ್ಪುವಿನ ವಿಶಾಲ ಮನೋಭಾವನೆಯನ್ನು ಅರಿತಿದ್ದರೂ 'ನಾನಾ' ರಾಜಕೀಯವಾಗಿ ಅಸಹಾಯಕನಾಗಿದ್ದ.

ಟಿಪ್ಪು ಬ್ರಿಟಿಷರನ್ನು ಉಪಖಂಡದಿಂದ ಒದ್ದೋಡಿಸುವ ಸಲುವಾಗಿ ತನ್ನ ಕೊನೆಯುಸಿರಿನವರೆಗೂ ಹೋರಾಡಿದರು. ಬ್ರಿಟಿಷರ ಶತ್ರುಗಳಾದ ಫ್ರೆಂಚರ ಜತೆ ಮತ್ತಿತರ ವಿದೇಶೀ ರಾಜರ ಜೊತೆಯೂ ಮೈತ್ರಿ ಸಾಧಿಸಲು ಒಂದು ಹಂತದವರೆಗೆ ಟಿಪ್ಪು ಯಶಸ್ವಿಯಾಗಿದ್ದರು. ಆದರೆ ಯಾವನೇ ಒಬ್ಬ ದೇಶೀಯ ರಾಜನೂ ಟಿಪ್ಪುವಿನ ಈ ಮಹಾನ್ ಉದ್ದೇಶಕ್ಕೆ ಸಾಥ್ ನೀಡಲಿಲ್ಲ. ಮಾತ್ರವಲ್ಲದೇ ಮತ್ತೆ ಮತ್ತೆ ಬ್ರಿಟಿಷರೊಂದಿಗೆ ಕೈ ಜೋಡಿಸಿದರು. ಆದಾಗ್ಯೂ ಇತಿಹಾಸ ಮರಾಠ ಪೇಶ್ವೆಗಳನ್ನು ಕೊಂಡಾಡುತ್ತದೆ. ಒಂದು ನಿಖರ ರಾಷ್ಟ್ರೀಯ ಧ್ಯೇಯೋದ್ದೇಶಗಳನ್ನಿಟ್ಟುಕೊಂಡು ಹೋರಾಡಿ ನಾಡಿಗಾಗಿ ಯುದ್ಧ ಭೂಮಿಯಲ್ಲಿ ಪ್ರಾಣ ತ್ಯಜಿಸಿದ ಟಿಪ್ಪುವಿನ ವಿರುದ್ಧ ನಿರಂತರ ದಾಳಿ ಮಾಡುತ್ತಲೇ ಇರುವುದು ಇತಿಹಾಸದ ಕ್ರೂರ ವ್ಯಂಗ್ಯವೇ ಸರಿ.

"ಒಂದು ವೇಳೆ ಹೈದರ್ ಜೀವಿಸಿದ್ದರೆ ಆತ ಬಹುಶಃ ಇಂಗ್ಲಿಷರೊಡನೆ ಸಂಧಾನ ಮಾಡಿಕೊಳ್ಳುತ್ತಿದ್ದನೇನೋ. ಆದರೆ ಟಿಪ್ಪುವಿನ ಉದ್ದೇಶ ಮಾತ್ರ ಬ್ರಿಟಿಷರನ್ನು ಭಾರತದಿಂದ ಒದ್ದೋಡಿಸುವುದಾಗಿತ್ತು" ಎಂದು ಆಲ್ಬುಡ್ ಇಕ್ಬೈಟ್ ತನ್ನ 'ರೋಮಾನ್ಸ್ ಆಫ್ ಇಂಡಿಯಾ' ಕೃತಿಯಲ್ಲಿ ದಾಖಲಿಸಿದ್ದಾನೆ. ದುರದೃಷ್ಟವಶಾತ್ ಬ್ರಿಟಿಷರನ್ನು ಭಾರತದಿಂದ ಒದ್ದೋಡಿಸುವ ಟಿಪ್ಪುವಿನ ಮಹದುದ್ದೇಶಕ್ಕೆ ಟಿಪ್ಪು ಹುತಾತ್ಮರಾಗುವುದರೊಂದಿಗೆ ತೆರೆ ಬಿತ್ತು.

1787ರ ಫೆಬ್ರವರಿ 2 ರಂದು ಕಲ್ಲಿಕೋಟೆಯ ಫೌಜುದಾರ ಅರ್ಷದ್ ಬೇಗ್ ಖಾನನಿಗೆ ಬರೆದ ಪತ್ರವೊಂದರಲ್ಲಿ ಟಿಪ್ಪು ಹೀಗೆ ಉಲ್ಲೇಖಿಸಿದ್ದರು. "ನೀನು ಬ್ರಿಟಿಷರಿಂದ ಯಾವೊಂದು ವಸ್ತುವನ್ನೂ ಕೊಂಡಕೊಳ್ಳಕೂಡದೆಂದು ಕಲ್ಲಿಕೋಟೆಯ ಜನರಿಗೆ ಕಟ್ಟಾಜ್ಞೆ ಕೊಡಬೇಕು. ಅವರು ಇಲ್ಲಿಗೆ ಬಂದಿರುವುದು ಕೇವಲ ವ್ಯಾಪಾರಕ್ಕಷ್ಟೆ. ನಾವು ಅವರಿಂದ ಯಾವುದೇ ಸಾಮಾನು ಸರಂಜಾಮುಗಳನ್ನು ಕೊಳ್ಳದಿದ್ದರೆ, ವ್ಯಾಪಾರ ಮಾಡದಿದ್ದರೆ ಎಷ್ಟು ಸಮಯ ಅವರಿಲ್ಲಿ ಉಳಿದುಕೊಂಡಾರು" (ಟಿಪ್ಪು ಸುಲ್ತಾನನ ಆಯ್ದ ಪತ್ರಗಳು- ಕರ್ಕ್ ಪಾಟ್ರಿಕ್).

ಭಾರತದ ಆಧುನಿಕ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಾಂಧೀಜಿ ಬ್ರಿಟಿಷರ ವಿರುದ್ಧದ ಹೋರಾಟದ ಒಂದು ಪ್ರಬಲ ಅಸ್ತ್ರವಾಗಿ ಅಸಹಕಾರ ಚಳವಳಿಯನ್ನು ಘೋಷಿಸಿದ್ದರು. ಈ ಅಸಹಕಾರ ಚಳವಳಿಯ ಕುರಿತಂತೆ ಅದಕ್ಕಿಂತ ನೂರೈವತ್ತು ವರ್ಷಗಳ ಹಿಂದೆಯೇ ಟಿಪ್ಪು ಯೋಚಿಸಿದ್ದರು ಮತ್ತು ಆ ನಿಟ್ಟಿನಲ್ಲಿ ಮುಂದಡಿಯಿಟ್ಟಿದ್ದರು ಎಂಬುದು ಈ ಮೇಲಿನ ಪತ್ರದ ಉಲ್ಲೇಖದಿಂದ ತಿಳಿದುಬರುತ್ತದೆ.

ಗಾಂಧೀಜಿಯವರು 1945 ರ ಟಿಪ್ಪು ಸ್ಮಾರಕೋತ್ಸವ ಸಂದರ್ಭ ಎ.ಕೆ. ಖಲೀಲರಿಗೆ ಬರೆದ ಪತ್ರದಲ್ಲಿ ಮತ್ತು ತನ್ನ ಯಂಗ್ ಇಂಡಿಯಾದ ಲೇಖನವೊಂದರಲ್ಲಿ ಟಿಪ್ಪುವನ್ನು "ಸ್ವಾತಂತ್ರ್ಯ ಪ್ರವಾದಿ" ಎಂದು ಕೊಂಡಾಡಿದ್ದರು.

ಜವಾಹರ್‌ಲಾಲ್ ನೆಹರೂ ಅವರು ತನ್ನ 'ಡಿಸ್ಕವರಿ ಆಫ್ ಇಂಡಿಯಾ' ಎಂಬ ಗ್ರಂಥದಲ್ಲಿ ಹೈದರಾಲಿ ಮತ್ತು ಟಿಪ್ಪು ಕುರಿತಂತೆ "ಹೈದರಾಲಿ - ಟಿಪ್ಪು ಸುಲ್ತಾನರಿಬ್ಬರೂ ಬ್ರಿಟಿಷರ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿ ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿಸಹೊರಟ ಪ್ರಭುತ್ವವನ್ನು ಸಂಪೂರ್ಣ ನಿರ್ನಾಮ ಮಾಡುವ ಹಂತಕ್ಕೆ ತಲುಪಿ ಬ್ರಿಟಿಷರಿಗೆ ವಿಪರೀತವಾದ ಯಾತನೆಯನ್ನು ತಂದೊಡ್ಡಿದ್ದರು. ಭಾರತದ ಇತಿಹಾಸದಲ್ಲಿ ಹೈದರಾಲಿ ಒಬ್ಬ ಅಸಾಮಾನ್ಯ ವ್ಯಕ್ತಿಯಾಗಿ ಸ್ಥಾನವನ್ನು ಅಲಂಕರಿಸುತ್ತಾನೆ. ಅವನು ಒಂದು ರಾಷ್ಟ್ರೀಯ ಧ್ಯೇಯಗಳೊಂದಿಗೆ ಮುಂದಾಲೋಚನೆಗಳನ್ನಿಟ್ಟು ಕೊಂಡು ಹೋರಾಡಿದ ಆ ಕಾಲದ ಒಬ್ಬ ಪ್ರಬುದ್ಧ ರಾಜ. ಅವನ ಕಾಲದಲ್ಲಿ ಭಾರತದ ಇನ್ನುಳಿದ ಭಾಗಗಳನ್ನಾಳಿದ ರಾಜರುಗಳಿಗೆ ಹೋಲಿಸಿದರೆ ಮೈಸೂರು ಪ್ರಾಂತ್ಯಕ್ಕೆ ಬ್ರಿಟಿಷರ ನೌಕಾಪಡೆಯಿಂದ ಬಂದೊದಗಬಹುದಾದ ಬೆದರಿಕೆಯನ್ನು ತಡೆಗಟ್ಟಲು ನೌಕಾನೆಲೆಯನ್ನು ಕರಾವಳಿ ತೀರದಲ್ಲಿ ಸ್ಥಾಪಿಸುವ ಪ್ರಾಮುಖ್ಯತೆಯ ಕುರಿತು ಆಲೋಚಿಸಿದ್ದನು. ಅದನ್ನು ಹತ್ತಿಕ್ಕಲು ಅವನು ಜಂಟಿ ಕಾರ್ಯಾಚರಣೆಯನ್ನು ಸನ್ನದ್ಧಗೊಳಿಸಿದ್ದನು. ಇವನು ಸ್ಥಾಪಿಸಿದ ನೌಕಾದಳದ ಶಕ್ತಿಯನ್ನು ಅವನ ಮಗನಾದ ಟಿಪ್ಪು ಸುಲ್ತಾನ್ ಮತ್ತಷ್ಟು ವೃದ್ಧಿಗೊಳಿಸಿದನು. ಟಿಪ್ಪು ಬ್ರಿಟಿಷರಿಂದ ಆಗುವ ಬೆದರಿಕೆಯ ಸ್ವರೂಪವನ್ನು ರಾಯಭಾರಿಗಳ ಮೂಲಕ ನೆಪೋಲಿಯನ್ ಬೋನೆ ಪಾರ್ಟನಿಗೂ ಮತ್ತು ಕಾನ್‌ಸ್ಟಾಂಟಿನೋಪಲ್ ಸುಲ್ತಾನನಿಗೂ ತಲುಪಿಸುತ್ತಿದ್ದನು".

ನೆಹರೂ ಅವರ ವಾಕ್ಯಗಳು ಟಿಪ್ಪುವಿನ ರಾಷ್ಟ್ರೀಯವಾದಿ ಆಲೋಚನೆಗಳನ್ನು ಮತ್ತು ಅದರ ಸಾಕಾರಕ್ಕಾಗಿ ಆತ ಕೈಗೊಂಡ ಕ್ರಮಗಳನ್ನು ಚೆನ್ನಾಗಿ ವಿಶ್ಲೇಷಿಸುತ್ತದೆ.

ತಾರಾಚಂದ್ ಅವರು ತಮ್ಮ 'ಹಿಸ್ಟರಿ ಆಫ್ ಫ್ರೀಡಮ್ ಮೂವ್‌ಮೆಂಟ್ ಆಫ್ ಇಂಡಿಯಾ' ಎಂಬ ಗ್ರಂಥದಲ್ಲಿ "ಮೈಸೂರಿನ ಸುಲ್ತಾನರಾದ ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಕನ್ನಡನಾಡಿನ ಉಳಿವಿಗಾಗಿ ಹೋರಾಡಿ ತಮ್ಮ ಶಕ್ತಿಯನ್ನು ಪ್ರದರ್ಶಿಸಿದರು. ಬ್ರಿಟಿಷ್ ಮತ್ತು ಅವರ ಮಿತ್ರರನ್ನು ಭೇದಿಸಿದರು. ಅವರೊಂದಿಗೆ ನಾಲ್ಕು ಮೈಸೂರು ಯುದ್ಧಗಳನ್ನು ಸಾರಿದರು. ನಾಲ್ಕನೇ ಯುದ್ಧದಲ್ಲಿ ಟಿಪ್ಪು ತನ್ನ ಪ್ರಭಾವವನ್ನು ಯಶಸ್ವಿಯಾಗಿ ಪ್ರದರ್ಶಿಸಿದರು. ಅವರ ಮಂತ್ರಿಗಳೇ ಅವರಿಗೆ ದ್ರೋಹವೆಸಗಿದರು. ಆದರೂ ಟಿಪ್ಪು ಶರಣಾಗಲು ಒಪ್ಪದೇ ಧೈರ್ಯದಿಂದ ತನ್ನ ಶ್ರೀರಂಗಪಟ್ಟಣ ಕೋಟೆಯನ್ನು ಉಳಿಸಿಕೊಳ್ಳಲು ಕೊನೆಯವರೆಗೂ ಹೋರಾಡಿ ರಣರಂಗದಲ್ಲಿಯೇ ಹುತಾತ್ಮರಾದರು" ಎಂದು ದಾಖಲಿಸಿದ್ದಾರೆ. ಈ ಮೇಲಿನ ಎಲ್ಲಾ ಉದಾಹರಣೆಗಳು ಟಿಪ್ಪು ರಾಷ್ಟ್ರೀಯವಾದದ ಪರಿಕಲ್ಪನೆಯಿಂದ ಹೋರಾಡಿದ್ದರು ಎಂಬುವು ದನ್ನು ಸಾಬೀತುಪಡಿಸುತ್ತದೆ. ಟಿಪ್ಪುವಿನ ಹೋರಾಟವನ್ನು ಸ್ವಾತಂತ್ರ್ಯ ಹೋರಾಟವಲ್ಲ ಅದು ಕೇವಲ ತನ್ನ ರಾಜ್ಯದ ರಕ್ಷಣೆಗಾಗಿ ಮಾಡಿದ ಹೋರಾಟ ಎಂದು ಅನೇಕರು ಸರಳೀಕರಿಸುತ್ತಾರೆ. ಸ್ವಾತಂತ್ರ್ಯ ಹೋರಾಟದ ನಿಜವಾದ ಪರಿಕಲ್ಪನೆಯನ್ನು ಅರ್ಥೈಸದವರು ಮಾತ್ರ ಇಂತಹ ಸರಳೀಕೃತ ಮತ್ತು ಬಾಲಿಶ ತೀರ್ಮಾನ ನೀಡಲು ಸಾಧ್ಯ. ಭಾರತದ ಸ್ವಾತಂತ್ರ್ಯ ಹೋರಾಟ ಗಾಂಧಿಯ ನೇತೃತ್ವದಲ್ಲಿ ನಡೆದಾಗಲೂ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಒ… ವಿಧದಲ್ಲಿ ಮತ್ತು ಏಕಕಾಲದಲ್ಲಿ ನಡೆದಿಲ್ಲ.

ಆಯಾ ಕಾಲ ಮತ್ತು ಪ್ರದೇಶದ ಜನರು ಬ್ರಿಟಿ… ಆಯಾ ಪ್ರದೇಶದಲ್ಲಿ ನಡೆಸಿದ ದಬ್ಬಾಳಿಕೆಯನ್ನು ಮುಂ… ಮಾಡಿದರು. ಉದಾ: ಉಪ್ಪಿನ ಸತ್ಯಾಗ್ರಹವಾಗಲೀ, ಅಸ… ಚಳವಳಿಯಾಗಲೀ ದೇಶದ ಎಲ್ಲೆಡೆಯೂ ನಡೆದಿಲ್ಲ. … ಕೆಲವೆಡೆ ಬ್ರಿಟಿಷರು ಭಾರತೀಯರ ವ್ಯಾಪಾರ ವಹಿವಾ… ಕೃಷಿ ಇತ್ಯಾದಿ ಚಟುವಟಿಕೆಗಳಿಗೆ ತೊಂದರೆ ಕೊ… ಭಾರತೀಯರು ಅವರ ವಿರುದ್ಧ ಬಂಡೆದ್ದು ಹೋ… ಕಟ್ಟಿದರು. ಅದೆಲ್ಲವನ್ನೂ ಸ್ವಾತಂತ್ರ್ಯ ಹೋರಾ… ಪರಿಧಿಯೊಳಗೆ ತರದಿರಲಿಕ್ಕೆ ಸಾಧ್ಯವೇ? ಅವುಗ… ಅವರವರ ಸ್ವಾರ್ಥಕ್ಕಾಗಿ ಮಾಡಿದ ಹೋರಾಟವೆ… ಸಂಕುಚಿತಗೊಳಿಸಲು ಸಾಧ್ಯವೇ?

ಟಿಪ್ಪು ಬ್ರಿಟಿಷರ ಉದ್ದೇಶವನ್ನು ಬಹಳ ಸ್ಪಷ್ಟ… ಮತ್ತು ಆಳವಾಗಿ ಅರ್ಥೈಸಿದ್ದರು. ಆ ಕಾರಣದಿಂದಾಗಿ… ಅವರನ್ನು ಉಪಖಂಡದಿಂದಲೇ ಹೊರಗೋಡಿಸಬೇಕ… ಹಠಕ್ಕೆ ಬಿದ್ದರು. ಆ ಕಾರಣಕ್ಕಾಗಿಯೇ ಬ್ರಿಟಿಷರ ವಿ… ದೇಶೀಯ ರಾಜರ ಮೈತ್ರಿಕೂಟ ಸ್ಥಾಪನೆಗೆ ಟಿಪ್ಪು ಪ್ರಯ… ದ್ದು. ಮೊದಲ ಆಂಗ್ಲೋ-ಮೈಸೂರು ಯುದ್ಧದಿಂದ… ಟಿಪ್ಪುವಿನ ಪ್ರತಿಪಾದನೆ ಬ್ರಿಟಿಷರನ್ನು ಭಾರತ… ಓಡಿಸುವುದು ಎಂಬುವುದನ್ನು ಬಲಪಂಥೀಯ ಒ… ಇತಿಹಾಸಕಾರರೂ, ಬ್ರಿಟಿಷ್ ಇತಿಹಾಸಕಾರರೂ ಒಪ್ಪಿ… ಈ ವಿಚಾರದಲ್ಲಿ ಯಾರಿಗೂ ಅಭಿಪ್ರಾಯ ವ್ಯತ್ಯಾಸವಿರ… ಟಿಪ್ಪು ಬ್ರಿಟಿಷರೊಂದಿಗೆ ಮಾಡಿದ ಯಾವುದೇ ಯುದ್ಧ… ಸಾಮ್ರಾಜ್ಯ ವಿಸ್ತರಣೆಯ ಧ್ಯೇಯ ಪ್ರಮುಖವಾಗಿರಲೇ… ಇವೆಲ್ಲವೂ ಟಿಪ್ಪುವನ್ನು ಓರ್ವ ಸ್ವಾತಂತ್ರ್ಯ ಹೋರಾಟ… ಎನ್ನುವುದಕ್ಕೆ ಪುಷ್ಠಿ ಒದಗಿಸುತ್ತದೆ.

ನಮ್ಮ ಕೆಲವು ಇತಿಹಾಸಕಾರರ ದ್ವಿಮುಖ ನೀತಿ… ಗಮನಿಸಿ. 15-16 ನೇ ಶತಮಾನದ ನಮ್ಮದೇ ಉಳ್ಳಾ… ರಾಣಿ (ಒಂದು ಪುಟ್ಟ ನಾಡಿನ ರಾಣಿ) ಅಬ್ಬಕ್ಕಳನ್ನು ಭಾ… ಪ್ರಪ್ರಥಮ ಸ್ವಾತಂತ್ರ್ಯ ಹೋರಾಟಗಾರ್ತಿ ಎನ್ನಲಾಗು… ಅಬ್ಬಕ್ಕ ಹೋರಾಡಿದ್ದು ಒಂದು ಅಪ್ಪಟ ವ್ಯಾಪಾರೀ ಉದ್ದೇ… ವಿದೇಶೀ ಗುಂಪಾದ ಪೋರ್ಚುಗೀಸರ ವಿರು… ಪೋರ್ಚುಗೀಸರು ಆ ಕಾಲಕ್ಕೆ ಯಾವುದೇ ವಿಧದ… ಭಾರತದಲ್ಲಿ ತಮ್ಮ ಸಾಮ್ರಾಜ್ಯ ಸ್ಥಾಪನೆ ಮಾಡಿರ… ಆದಾಗ್ಯೂ ಅವರ ವಿರುದ್ಧ ಹೋರಾಡಿದ ಅಬ್ಬಕ್ಕ… ಸ್ವಾತಂತ್ರ್ಯ ಹೋರಾಟಗಾರ್ತಿ ಎನ್ನಲಾಗುತ್ತದೆ. … ಹೆಚ್ಚುಕಡಿಮೆ ಭಾರತವನ್ನು ತಮ್ಮ ಕೈವಶ ಮಾಡಿಕೊಂ… ಭಾರತೀಯ ರಾಜರುಗಳನ್ನು ತಮ್ಮ ಅಧೀನ ರಾಜ… ಪರಿವರ್ತಿಸಿದ್ದ ಬ್ರಿಟಿಷರ ವಿರುದ್ಧ ಹೋರಾಡಿದ ಟಿಪ್ಪು… ಸ್ವಾತಂತ್ರ್ಯ ಹೋರಾಟಗಾರ ಎಂದು ಇತಿಹಾಸಕಾ… ಒಪ್ಪಲು ತಯಾರಿಲ್ಲದಿರುವುದನ್ನು ಅವರ ಪಕ್ಷ… ನೀತಿಯೆನ್ನಬೇಕೇ ಅಥವಾ ದ್ವಿಮುಖ ಧೋರಣೆಯೆನ್ನಬೇ…

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಾಗಲೂ ಅದು ಹತ್ತು ಹ… ರಾಜರುಗಳಿಂದ ಆಳಲ್ಪಡುತ್ತಿತ್ತು. ಭಾರತವೆಂಬ ಏಕ… ಸ್ಥಾಪನೆಯಾಗಿದ್ದು ಸ್ವಾತಂತ್ರ್ಯಾನಂತರವೇ ಆಗಿತ್ತು. ಟಿಪ್ಪು… ರಾಷ್ಟ್ರೀಯತೆಯ ಪರಿಕಲ್ಪನೆಯಿರಲಿಲ್ಲ ಎಂ… ವಾದಿಸುವವರೆಲ್ಲರ ಪ್ರತಿಪಾದನೆ ಆಗ ಅಖಂಡ ಭಾ… ಪರಿಕಲ್ಪನೆಯೇ ಇರಲಿಲ್ಲ ಎನ್ನುವುದು. ಅಖಂಡ ಭ… ಉಂಟಾಗಿದ್ದೇ ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕವಷ್ಟೆ … ಸಹಜ ಸತ್ಯವನ್ನು ಇತಿಹಾಸಕಾರರು ಕಡೆಗಣಿಸುತ್ತಿರುವುದ…

■ ಇಸ್ಮತ್ ಫಜೀ…

ಸಂಪಾದಕೀಯ


ಕೃಪೆ: *Economic and Political Weekly*
April 29, 2017. Vol. 52, No. 17.

■ ಅನು: ಶಿವಸುಂದರ್

ಹಸುಗಳನ್ನು ಎಣಿಸಿ, ಮನುಷ್ಯರನ್ನು ಸಾಯಿಸಿ

ನರೇಂದ್ರ ಮೋದಿಯವರ 'ನವ ಭಾರತ' ನಮೂನೆಗಳು


ತನ್ನ ದೇಶದ ಅಲ್ಪಸಂಖ್ಯಾತ ಜನತೆ ಏನೆಂದು ಭಾವಿಸುತ್ತದೆ ಅಥವಾ ಆಲೋಚಿಸುತ್ತದೆ ಎಂಬುದನ್ನು ಉದ್ದೇಶಪೂರ್ವಕವಾಗಿ ತಿರಸ್ಕರಿಸುವ ಈ ಸುಸ್ಪಷ್ಟ ಪಕ್ಷಪಾತಿತನದ ಸಂದೇಶವು ಈ ದೇಶದ ಪ್ರಜಾತಂತ್ರದ ಭವಿಷ್ಯಕ್ಕಿರುವ ಆತಂಕಗಳಿಗೆ ಹಿಡಿದಿರುವ ಕನ್ನಡಿಯಾಗಿದೆ.



ರಾಜಸ್ಥಾನದ ಅಲ್ವರ್‌ನ ಪೆಹ್ಲೂ ಖಾನ್ ಎಂಬ 55 ವರ್ಷದ ರೈತನೊಬ್ಬನನ್ನು ಗೋರಕ್ಷಕರ ಗುಂಪೊಂದು-ಅಥವಾ ಅವರನ್ನು ಕೊಲೆಗಡುಕರ ಗುಂಪೆಂದೇ ಕರೆಯಬಹುದು- ಕಳೆದ ಏಪ್ರಿಲ್ 1 ರಂದು ಹಾಡುಹಗಲಿನಲ್ಲೇ ಹೊಡೆದು-ಬಡಿದು ಕೊಂದುಹಾಕಿತು. ಹಸುವಿನ ಹೆಸರಿನಲ್ಲಿ 2015ರ ಅಕ್ಟೋಬರ್‌ನಲ್ಲಿ ದಾದ್ರಿಯಲ್ಲಿ ಮೊಹಮ್ಮದ್ ಅಕ್ಲಾಕ್‌ನ ಕೊಲೆಯಿಂದ ಪ್ರಾರಂಭವಾದ ಅಪರಾಧಗಳ ಸರಣಿಗೆ ಇದು ಮತ್ತೊಂದು ಸೇರ್ಪಡೆಯಾಗಿದೆ. ಅಗಿನಿಂದ ಭಾರತದ ತಥಾಕಥಿತ ಗೋ ಪ್ರದೇಶ (ಕೌ ಬೆಲ್ಟ್) ದಲ್ಲಿ ಮಾನವ ಹಕ್ಕುಗಳಿಗಿಂತ ಗೋವುಗಳ ಹಕ್ಕುಗಳೇ ಪ್ರಮುಖವಾಗಿಬಿಟ್ಟಿದೆ. ಹೀಗಾಗಿ ಈ ಕೊಲೆಗಡುಕ ಗುಂಪುಗಳು ದನಗಳ ಅಥವಾ ಹಸುಗಳ ಸಾಗಾಟವನ್ನು ಪತ್ತೆಹಚ್ಚಿ ಅದರಲ್ಲಿ ತೊಡಗಿರುವ ಮುಸ್ಲಿಮರ ಮೇಲೆ ಮಾತ್ರ (ಮತ್ತು ಕೆಲವು ವಿಶೇಷ ಸಂದರ್ಭಗಳಲ್ಲಿ ದಲಿತರ ಮೇಲೂ) ಪ್ರಾಣಾಂತಿಕ ದಾಳಿ ನಡೆಸುತ್ತಿದ್ದಾರೆ ಅಥವಾ ಕೊಲ್ಲುತ್ತಿದ್ದಾರೆ. ಈ ಕೊಲೆಗಳು ನಡೆಯಬೇಕಾದರೆ ಕಾನೂನುಪಾಲಕರು ಯಾವುದೇ ಕ್ರಮ ತೆಗೆದುಕೊಳ್ಳದೆ ಮೌನ ವೀಕ್ಷಕರಾಗುತ್ತಾರೆ. ಇದಕ್ಕೆ ಮತ್ತೊಂದು ಕರಾಳ ಮುಖವಿದೆ. ಇಂಥಾ ಬಹುಪಾಲು ಪ್ರಕರಣಗಳಲ್ಲಿ ದಾಳಿಗೆ ಬಲಿಯಾದವರನ್ನೇ ಬಂಧಿಸಲಾಗುತ್ತದೆಯೇ ವಿನಃ ದಾಳಿಕೋರರನ್ನಲ್ಲ. ದಾಳಿಕೋ… ಬಿಟ್ಟುಬಿಡಲಾಗುತ್ತದೆ ಅಥವಾ 'ಅಪರಿಚಿತ ವ್ಯಕ್ತಿಗಳು' … ದೂರು ದಾಖಲಾಗುತ್ತದೆ.

ಅಕ್ಲಾಕ್‌ನ ಕೊಲೆಯ ನಂತರದಲ್ಲಿ ಗುಜರಾತ್, ರಾಜ… ಉತ್ತರ ಪ್ರದೇಶ, ಜಾರ್ಖಂಡ್, ಮಹಾರಾಷ್ಟ್ರ … ಕರ್ನಾಟಕದಂಥ ರಾಜ್ಯಗಳಲ್ಲಿ ಆಕ್ರಮಣಕಾರಿ ಗೋರಾಜಕ… ಚಲಾವಣೆಗೆ ಬಂದಿದೆ. ಇವುಗಳಲ್ಲಿ ಕರ್ನಾಟಕವೊಂದನ್ನು … ಉಳಿದವೆಲ್ಲವೂ ಬಿಜೆಪಿ ರಾಜ್ಯಗಳೇ ಆಗಿವೆ. ಸುಪ್ರೀಂಕೋರ್ಟಿನಲ್ಲಿ 1976ರ ಮಹಾರಾಷ್ಟ್ರ ಪ್ರಾಣಿ … ಕಾಯಿದೆಯ ರೀತಿ ವಿವಿಧ ಪ್ರಾಣಿ ರಕ್ಷಣಾ ಕಾಯಿದೆಗಳಡಿ … ಇರುವ ಇಂಥಾ ಗೋ ರಕ್ಷಕ ಪುಂಡ ಗುಂಪು… ಬಚಾವಾಗಿಬಿಡುವಂಥ ಕಲಮುಗಳ ಬಗ್ಗೆ ವಿಚಾರಣೆ ನಡೆಯ… ಆ ಅಹವಾಲಿನಲ್ಲಿ ಪ್ರಸ್ತಾಪಿಸಲಾಗಿರುವ ಆರು ರಾಜ್ಯ… ಹೊರತುಪಡಿಸಿ ಮಧ್ಯಪ್ರದೇಶ ಮತ್ತು ಹರ್ಯಾಣಗ… ಈ ರೀತಿಯ ಪ್ರಕರಣಗಳು ಮರುಕಳಿಸಿದೆಯಲ್ಲದೆ … ಏಪ್ರಿಲ್‌ನಲ್ಲಿ ದೆಹಲಿ ಮತ್ತು ಜಮ್ಮು-ಕಾಶ್ಮೀರಗಳಲ್ಲೂ ಇ… ಪ್ರಕರಣಗಳು ದಾಖಲಾಗಿವೆ. ಕೊನೆಯ … ಪ್ರಕರಣಗಳಲ್ಲಂತೂ 'ಪೆಹ್ಲೂ ಖಾನ್' ಪ್ರಕರಣದಲ್ಲಿ ಲಭ್ಯವಾ… ವಿಡಿಯೋ ಸಾಕ್ಷಿಗಳು ಸಹ ಲಭ್ಯವಾಗಿವೆ. ಅವು ಆ ಕೊಲೆ… ಗುಂಪುಗಳ ಕ್ರೌರ್ಯವನ್ನೂ ಮತ್ತು ಪೊಲೀಸರ ನಿಷ್ಕ್ರಿಯತೆ… ಸಾಬೀತುಪಡಿಸುತ್ತವೆ. ಜಮ್ಮು-ಕಾಶ್ಮೀರದ ಪ್ರಕರ… ಲಭ್ಯವಾಗಿರುವ ಚಿತ್ರಗಳು ಅತ್ಯಂತ ಭೀಕರವಾಗಿದೆ. ಅಲ್ಲಿ… ದನಗಾಹಿ ಕುಟುಂಬವೊಂದು ಕಟ್ಟಿಕೊಂಡಿದ್ದ ಆಗ… ಈಗಲೋ ಕುಸಿದುಬೀಳುವಂತಿದ್ದ ಟೆಂಟಿನ ಮೇಲೆ… ಕೊಲೆಗಡುಕ ಗೋ ರಕ್ಷಕ ಗುಂಪು ದಾಳಿ ಮಾಡಿ…

ಮೋದಿ ಸರ್ಕಾರದಡಿ ಭಾರತ ಹೆಚ್ಚು ಪ್ರಕಾಶಮಾನವಾಗಿದೆಯಂತೆ!



2012ಕ್ಕೆ ಹೋಲಿಸಿದರೆ 2016ರಲ್ಲಿ ಇರುಳಲ್ಲಿ ಭಾರತ ಹೆಚ್ಚು ಉಜ್ವಲವಾಗಿ ಬೆಳಗುತ್ತಿದೆ ಎಂಬ ಇತ್ತೀಚಿನ ಬಿಸಿಬಿಸಿ ವರ್ತಮಾನ ಕೇಳಿ ಮೋದಿಪೂಜಕರೆಲ್ಲ ರೋಮಾಂಚನಗೊಂಡಿದ್ದಾರೆ. ಈ ವ್ಯತ್ಯಾಸವನ್ನು ಬಿಂಬಿಸುತ್ತಿರುವ ಅಮೆರಿಕದ ನಾಸಾ ಸಂಸ್ಥೆಯ ನಕ್ಷೆಗಳನ್ನು 2011ರಲ್ಲಿ ಗಗನಕ್ಕೇರಿಸಲಾದ ಉಪಗ್ರಹ (NASA-NOAA Suomi National Polar-orbiting Partnership) ರವಾನಿಸಿದ ಮಾಹಿತಿಗಳ ಆಧಾರದಲ್ಲಿ ತಯಾರಿಸಲಾಗಿದೆ. ಇದರಿಂದ ಹಿಗ್ಗಿ ಹೀರೇಕಾಯಾದ ಮೋದಿಭಕ್ತರು ಇದಕ್ಕೆ ಮೋದಿ ಸರ್ಕಾರದ ಎಲ್ಲರಿಗೂ ಎಲ್‌ಇಡಿ ಬಲ್ಬು ವಿತರಣೆಯ 'ಉಜಾಲಾ' ("Unnat Jeevan by Affordable LED for All") ಕಾರ್ಯಕ್ರಮ ಮತ್ತು ಗ್ರಾಮೀಣ ವಿದ್ಯುದೀಕರಣದ 'ದೀನ ದಯಾಳು ಉಪಾಧ್ಯಾಯ ಗ್ರಾಮಜ್ಯೋತಿ' ಕಾರ್ಯಕ್ರಮಗಳೇ ಕಾರಣ ಎಂದು ಬೊಗಳೆ ಬಿಡಲಾರಂಭಿಸಿದ್ದಾರೆ. ಆದರೆ ಇಲ್ಲಿ ತಮಾಷೆಯ ಸಂಗತಿ ಏನೆಂದರೆ ಭೂಮಿಯಿಂದ 833 ಕಿಮೀ ಅಂತರದಲ್ಲಿ ಸುತ್ತುತ್ತಿರುವ ಈ ಉಪಗ್ರಹ ಮನೆಯೊಳಗಿನ ಎಲ್‌ಇಡಿ ಬಲ್ಬುಗಳ ಬೆಳಕನ್ನು ಪತ್ತೆ ಹಚ್ಚಲಾರದು! ಅದರ ಸೆನ್ಸಾರ್‌ಗಳು ಏನಿದ್ದರೂ ಬೀದಿದೀಪ, ಅನಿಲಾಗ್ನಿ, ಧೂಮಪ್ರಭೆ, ಕಾಳ್ಗಿಚ್ಚು ಮತ್ತು ಪ್ರತಿಫಲಿತ ಬೆಳದಿಂಗಳುಗಳ ಬೆಳಕನ್ನಷ್ಟೆ ಗುರುತಿಸಬಲ್ಲವು!


ಹಳೆ ಯೋಜನೆಗಳಿಗೆ ಹೊಸ ಹೆಸರು ಕೊಟ್ಟು ಅವು ತನ್ನ ಯೋಜನೆಗಳೆಂದು ಬಿಂಬಿಸುವ ಮೂಲಕ ಜನಪ್ರಿಯತೆ ಹೆಚ್ಚಿಸಿಕೊಳ್ಳುವುದು ಮೋದಿ ಸರ್ಕಾರದ ಜಾಯಮಾನವೆ ಆಗಿಬಿಟ್ಟಿದೆ. ಅದು ಆರಂಭದಿಂದಲೂ ಇದೇ ಆಟವನ್ನು ಆಡುತ್ತಾ ಜನರಿಗೆ ಮಂಕುಬೂದಿ ಎರಚುತ್ತಾ ಬಂದಿದೆ. ಆದರ ತಂತ್ರಗಳು ಕೇವಲ ಹೆಸರು ಬದಲಾವಣೆಗಷ್ಟೆ ಸೀಮಿತವಾಗಿರದೆ ಅಂಕಿಅಂಶಗಳ ಲೆಕ್ಕಾಚಾರಕ್ಕೂ ವಿಸ್ತರಿಸಿರುವುದಕ್ಕೆ ಅತ್ಯುತ್ತಮ ನಿದರ್ಶನವೆಂದರೆ ಈ 'ಉಜಾಲಾ' ಮತ್ತು 'ದೀನ ದಯಾಳು ಉಪಾಧ್ಯಾಯ ಗ್ರಾಮಜ್ಯೋತಿ' ಯೋಜನೆಗಳು.

'ಉಜಾಲಾ

ಇಂಧನ ಕ್ಷಮತೆಯ ಎಲ್‌ಇಡಿ ಬಲ್ಬುಗಳನ್ನು ಅಗ್ಗ ಬೆಲೆಗೆ ಸಾರ್ವಜನಿಕರಿಗೆ ವಿತರಿಸುವ ತನ್ನ 'ಉಜಾಲಾ' ಯೋಜನೆಯ ಫಲವಾಗಿ ಅಪಾರ ಇಂಧನ ಉಳಿತಾಯ ವಾಗುತ್ತಿದೆ ಎಂದು ಮೋದಿ ಸರ್ಕಾರ ಜಂಬ ಕೊಚ್ಚುತ್ತಿದೆ. ಆದರೆ ಇದರ ಮೂಲ ಐಡಿಯ ಮೋದಿಯದೂ ಅಲ್ಲ, ಆತನ ಇಂಧನ ಸಚಿವ ಪೀಯೂಷ್ ಗೋಯಲ್‌ನದೂ ಅಲ್ಲ, ವಾಸ್ತವದಲ್ಲಿ ಈ 'ಉಜಾಲಾ' ಎನ್ನುವುದು ಯುಪಿಎ ಸರ್ಕಾರ ಪ್ರಾರಂಭಿಸಿದ್ದ 'ಡೆಲ್ಪ್' ("Demand Side Management-based Efficient Lighting Programme") ಯೋಜನೆಯ ಮುಂದುವರಿಕೆಯೆ ಹೊರತು ಹೊಸ ಯೋಜನೆಯೇನೂ ಅಲ್ಲ, ಇಲ್ಲಿ ಆಗಿರುವುದು ಹಳೆ ಮದ್ಯವನ್ನು ಹೊಸ ಬಾಟಲಿನಲ್ಲಿ ಮಾರುವ ಕೆಲಸ, ಅಷ್ಟೆ! 'ಡೆಲ್ಪ್' ಯೋಜನೆಗೂ ಮುಂಚೆ 'ಬಚತ್ ಲ್ಯಾಂಪ್' ಎಂಬ ಯೋಜನೆಯೊಂದನ್ನು ಜಾರಿಗೊಳಿಸಲಾಗಿತ್ತು, ಅದರಡಿ ದೇಶಾದ್ಯಂತ 2.9 ಕೋಟಿ ಸಿಎಫ್‌ಎಲ್ ಬಲ್ಬುಗಳನ್ನು ತಲಾ ರೂ. 15ರಂತೆ ವಿತರಿಸಲಾಗಿತ್ತು, ಇದರಿಂದಾಗಿ ಮಾರುಕಟ್ಟೆ ಬೆಲೆಗಳಲ್ಲಿ ಇಳಿಕೆಯಾಗಿ ದೇಶದೆಲ್ಲೆಡೆ ಬಲ್ಬುಗಳಿಗೆ ಬೇಡಿಕೆ ಹೆಚ್ಚಿತ್ತು, ಮುಂದೆ 2013ರಲ್ಲಿ ಸಿಎಫ್‌ಎಲ್ ಬಲ್ಬುಗಳನ್ನು ಇನ್ನಷ್ಟು ದಕ್ಷ, ಆದರೆ ದುಬಾರಿ ಎಲ್‌ಇಡಿ ಬಲ್ಬುಗಳಿಗೆ ಬದಲಾಯಿಸುವ ನಿರ್ಧಾರವನ್ನು ತೆಗೆದುಕೊಂಡು ಅದಕ್ಕೆ 'ಡೆಲ್ಪ್' ಎಂಬ ಹೆಸರನ್ನಿತ್ತು, ಅದರ ಅಡಿಯಲ್ಲಿ ಬಲ್ಬು ವಿತರಣೆಗೆ ಅದೇ ಅಗ್ಗ ದರಗಳ ತಂತ್ರವನ್ನು ಅಳವಡಿಸ ಲಾಗಿತ್ತು. ಹೀಗಿದೆ 'ಉಜಾಲಾ' ಯೋಜನೆಯ ಇತಿಹಾಸ!

'ಉಜಾಲಾ' ಯೋಜನೆಯಡಿ ಎಲ್‌ಇಡಿ ಬಳಕೆಯ ಕುರಿತು ಅಧ್ಯಯನ ನಡೆಸಲು ಯೋಚಿಸಿದ ಮೋದಿ ಸರ್ಕಾರ ಆ ಕಾರ್ಯವನ್ನು ಪ್ರೈಸ್ ವಾಟರ್‌ಹೌಸ್ ಕೂಪರ್ಸ್ ಎಂಬ ಸಂಸ್ಥೆಗೆ ವಹಿಸಿತು. ಪ್ರೈಸ್ ತಂಡ ಸೆಪ್ಟೆಂಬರ್ 2015ರಲ್ಲಿ ಪುದುಚೇರಿ ಮತ್ತು ಆಂಧ್ರ ಪ್ರದೇಶದ ನಾಲ್ಕು ಜಿಲ್ಲೆಗಳಲ್ಲಿನ ಪ್ರಾಯೋಗಿಕ ಯೋಜನೆಗಳನ್ನು ಪರಿಶೀಲಿಸಿ ವರದಿಯೊಂದನ್ನು ತಯಾರಿಸಿದೆ. ಆ ವರದಿಯಲ್ಲಿ "ದೋಷಯುಕ್ತ ಮತ್ತು ಬಳಕೆಯಾಗದ ಬಲ್ಬುಗಳನ್ನು ಕೂಡ ಪರಿಗಣನೆಗೆ ತೆಗೆದುಕೊಂಡರೆ ಪ್ರತಿ ಎಲ್‌ಇಡಿ ಬಲ್ಬಿನಿಂದ ವರ್ಷಕ್ಕೆ 134 ಕಿ.ವಾ. ವಿದ್ಯುತ್ ಉಳಿಸಬಹುದು" ಎಂದು ಹೇಳಲಾಗಿತ್ತು. ಪ್ರೈಸ್ ಪ್ರಕಾರ ಒಂದು ಬಲ್ಬು ವರ್ಷಕ್ಕೆ 134 ಕಿ.ವಾ. ಉಳಿಸಬಲ್ಲುದಾದರೆ 'ಉಜಾಲಾ' ಯೋಜನೆಯ ಉದ್ದೇಶಿತ 77 ಕೋಟಿ ಬಲ್ಬುಗಳಿಂದ 20,100 ಮೆ.ವಾ. ವಿದ್ಯುಚ್ಛಕ್ತಿ ಉಳಿತಾಯವಾಗಲಿದೆ. ಇಷ್ಟೊಂದು ವಿದ್ಯುತ್ತನ್ನು ಉತ್ಪಾದಿಸಬಲ್ಲ ಐದು ಹೊಸ ಅತ್ಯಾಧುನಿಕ ಮೆಗಾ ವಿದ್ಯುತ್ ಘಟಕಗಳ ನಿರ್ಮಾಣಕ್ಕೆ ರೂ. 97,000 - 1,29,000 ಕೋಟಿ ದುಡ್ಡು ಬೇಕು. ಫೆಬ್ರವರಿ 7ರಂದು ಲೋಕಸಭೆಯಲ್ಲಿ ಇದೇ ಅಂಕಿ ಅಂಶಗಳನ್ನು ಉಲ್ಲೇಖಿಸಿದ ಮೋದಿ, 21 ಕೋಟಿ ಹೊಸಾ ಬಲ್ಬುಗಳನ್ನು ಬಳಸಿದುದರ ಪರಿಣಾಮವಾಗಿ ಕುಟುಂಬಗಳ ವಿದ್ಯುತ್ ಬಿಲ್‌ನಲ್ಲಿ ಒಟ್ಟು ರೂ. 11,000 ಕೋಟಿಯಷ್ಟು ಉಳಿತಾಯ ಆಗಲಿದೆ ಎಂದು ಕೊಚ್ಚಿಕೊಂಡಿದ್ದಾನೆ. ಇದರರ್ಥ ಏನೆಂದರೆ 'ಉಜಾಲಾ' ಯೋಜನೆಯಿಂದಾಗಿ ಬರೀ ರೂ. 11,000 ಕೋಟಿ ವೆಚ್ಚದಲ್ಲಿ 20,100 ಮೆ.ವಾ. ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿದಂತಾಗಲಿದೆ.

ಆದರೆ ಮೋದಿ ಹರಿಯಬಿಟ್ಟ ಉಳಿತಾಯದ ಅಂಕಿ ಅಂಶಗಳು ಎಷ್ಟರಮಟ್ಟಿಗೆ ಸರಿ ಎಂದು ಕೇಳಬೇಕಾಗುತ್ತದೆ. ಕಾರಣವೇನೆಂದರೆ ಅಸಲಿಗೆ ಪ್ರೈಸ್‌ನ ವಾದ ಕೆಲವೊಂದು ಊಹೆಗಳನ್ನು ಆಧರಿಸಿದೆ. ಒಂದು, 60 ವಾಟ್‌ನ ಹಳೆ ಬಲ್ಬುಗಳ ಜಾಗಕ್ಕೆ 7 ವಾಟ್‌ನ ಹೊಸ ಬಲ್ಬುಗಳು ಬರಲಿವೆ.


Piyush Goyal added 2 new photos
2 hrs Thursday, April 13, 2017 at 11:15pm

For the past 3 years, we are working tirelessly towards power for all, and the results are evident from some of the images taken by NASA - National Aeronautics and Space Administration.
Image 1 - India at Night in 2012. Image 2 - India at Night in 2016.
https://www.nasa.gov/.../new-night-lights-maps-open-up-possib...

Provide translation to Bengali

ಎರಡು, ಪ್ರತಿಯೊಂದು ಬಲ್ಬು ದಿನವೊಂದರ 8 ತಾಸಿನಂತೆ ವರ್ಷದಲ್ಲಿ 320 ದಿನ (=2560 ತಾಸು) ಉರಿಯಲಿದೆ. ಆದರೆ ಈ ಊಹೆಗಳು ಸರಿಯೆ? ಹಗಲಿನ ಅವಧಿ ಕಡಮೆ ಇರುವ ಜಾಗಗಳಲ್ಲಿ ಇದು ಓಕೆ. ಆದರೆ ದೇಶದಾದ್ಯಂತ ಇದೇ ಪರಿಸ್ಥಿತಿ ಇಲ್ಲ, ಮಾತ್ರವಲ್ಲದೆ ಋತುಮಾನವನ್ನು ಹೊಂದಿ ಕೊಂಡೂ ವಿದ್ಯುದ್ದೀಪಗಳ ಬಳಕೆಯಲ್ಲಿ ಏರುಪೇರು ಗಳಾಗುತ್ತವೆ. ಒಂದು ಬಲ್ಬನ್ನು ವರ್ಷದಲ್ಲಿ ಸರಾಸರಿ 913 ತಾಸು ಉರಿಸಲಾಗುತ್ತದೆ ಎಂದು 2008ರಲ್ಲಿ ವಿಶ್ವ ಬ್ಯಾಂಕು ನಡೆಸಿದ ಅಧ್ಯಯನ ವೊಂದರಿಂದ ತಿಳಿದುಬಂದಿದೆ. 'ಉಜಾಲಾ' ಯೋಜನೆಯನ್ನು ಜಾರಿಗೊಳಿಸುತ್ತಿರುವ ಸರ್ಕಾರಿ ಸಂಸ್ಥೆ (Energy Efficiency Services Ltd) ಕೂಡ ಒಂದು ಬಲ್ಬನ್ನು ದಿನವೊಂದರ 3.5 ತಾಸು, ವರ್ಷವೊಂದರ 300 ದಿನ (= 1050 ತಾಸು) ಉರಿಸಲಾಗುತ್ತದೆ ಎಂದು ಹೇಳುತ್ತದೆ. ಹೀಗೆ ಲೆಕ್ಕ ಹಾಕಿದಾಗ ಇದರಿಂದಾಗುವ ಉಳಿತಾಯದ ಮೊತ್ತ ರೂ. 3,960ರಿಂದ 4,510 ಕೋಟಿ ಅಷ್ಟೆ. ರೂ. 11,000 ಕೋಟಿಯ ಬೂಸಿ ಎಲ್ಲಿ ಇದೆಲ್ಲಿ?!

'ದೀನ ದಯಾಳು ಉಪಾಧ್ಯಾಯ ಗ್ರಾಮಜ್ಯೋತಿ ಯೋಜನೆ

ಭಾರತ ಹೆಚ್ಚು ಪ್ರಕಾಶಮಾನವಾಗಲು ಹಳ್ಳಿಗಳ ವಿದ್ಯುದೀಕರಣವೆ ಕಾರಣ ಎನ್ನುವ ಮೋದಿಭಕ್ತರ ಕುವಾದವನ್ನು ಒಂದು ಪಕ್ಷ ಒಪ್ಪಿದರೂ ಈ ಕ್ಷೇತ್ರದಲ್ಲಿ ಎನ್‌ಡಿಎಗಿಂತಲೂ ಯುಪಿಎ ಅಧಿಕಾರಾವಧಿಯಲ್ಲೆ ಹೆಚ್ಚು ಸಾಧನೆ ಆಗಿರುವುದನ್ನು ಕಾಣಬಹುದು! ಅಂದಹಾಗೆ ಮೋದಿ ಸರ್ಕಾರದಡಿ ಗ್ರಾಮೀಣ ವಿದ್ಯುದೀಕರಣ ಕಾರ್ಯಕ್ರಮ ನಡೆಯುತ್ತಿರುವುದು 'ದೀನ ದಯಾಳು ಉಪಾಧ್ಯಾಯ ಗ್ರಾಮಜ್ಯೋತಿ ಯೋಜನೆ' ಎಂಬ ಹೆಸರಿನಲ್ಲಿ. ಈ ದೀದಉಗ್ರಾ ಯೋಜನೆಯೂ ಇನ್ನೊಂದು 'ಹೊಸ ಬಾಟಲಿನಲ್ಲಿ ಹಳೆ ಮದ್ಯ'! ವಾಸ್ತವವಾಗಿ ದೀದಉಗ್ರಾ ಯೋಜನೆ ಅಡಿಯಲ್ಲಿ ಏನೆಲ್ಲ ಕೆಲಸಗಳು ಆಗುತ್ತಿವೆಯೊ ಅದೆಲ್ಲವನ್ನು 2005ರ ಏಪ್ರಿಲ್‌ನಷ್ಟು ಹಿಂದೆಯೆ 'ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆ' ಹೆಸರಿನಲ್ಲಿ ಪ್ರಕಟಿಸಲಾಗಿದೆ. ಅದರಲ್ಲಿ (ಅ) 'ಗ್ರಾಮ ವಿದ್ಯುದೀಕರಣ' ಅರ್ಥಾತ್ ವಿದ್ಯುತ್ ಇಲ್ಲದಲ್ಲಿಗೆ ವಿದ್ಯುತ್ ಸಂಪರ್ಕ ನೀಡುವುದರೊಂದಿಗೆ (ಆ) ಭಾರತದಾದ್ಯಂತದ ಸುಮಾರು 6,00,000 ಹಳ್ಳಿಗಳಲ್ಲಿ ಈಗಾಗಲೆ ಇರುವ ಸೌಲಭ್ಯಗಳನ್ನು ಇನ್ನಷ್ಟು ಬಲಪಡಿಸುವ 'ಸಾಂದ್ರೀಕೃತ ವಿದ್ಯುದೀಕರಣ' ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿದೆ.

ಗ್ರಾಮ ವಿದ್ಯುದೀಕರಣ

2012ರಿಂದ 2014ರ ತನಕ ಯುಪಿಎ ಸರ್ಕಾರದ ಆಡಳಿತವಿತ್ತು ಮತ್ತು 2014 ಮೇನಿಂದ ಎನ್‌ಡಿಎ ಆಡಳಿತ ಪ್ರಾರಂಭವಾಗಿದೆ ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಗ್ರಾಮ ವಿದ್ಯುದೀಕರಣ ಯೋಜನೆಯ ಅನುಷ್ಠಾನದ ಬಗ್ಗೆ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ ಏನು ಹೇಳುತ್ತದೆಂದು ನೋಡೋಣ. ಪ್ರಾಧಿಕಾರ ದಾಖಲಿಸಿರುವ ದತ್ತಾಂಶಗಳು ಹೀಗಿವೆ:

ದಿನಾಂಕ	ವಿದ್ಯುದೀಕರಣಗೊಂಡ ಗ್ರಾಮಗಳು
31-1-2012	5,52,947
30.4.2014	5,71,168
31-12-2016	5,90,488

* ಮೇಲಿನ ಅಂಕಿಅಂಶಗಳನ್ನು ಇನ್ನಷ್ಟು ವಿಶ್ಲೇಷಿಸಿದಾಗ ತಿಳಿದುಬರುವುದೇನೆಂದರೆ 31-1-2012ರಿಂದ 30.4.2014 ವರೆಗಿನ 27 ತಿಂಗಳುಗಳ ಅವಧಿಯಲ್ಲಿ 18,221 ಹಳ್ಳಿಗಳ ವಿದ್ಯುದೀಕರಣ ಆಗಿದೆ. ಅಂದರೆ ಸರಾಸರಿ ತಿಂಗಳೊಂದರ 674.85 ಹಳ್ಳಿಗಳಿಗೆ ವಿದ್ಯುತ್ತು ಸಂಪರ್ಕ ದೊರೆತಿದೆ.

* 30.4.2014 ರಿಂದ 31-12-2016 ವರೆಗಿನ 32 ತಿಂಗಳುಗಳಲ್ಲಿ 19320 ಹಳ್ಳಿಗಳ ವಿದ್ಯುದೀಕರಣ ಆಗಿದೆ. ಸರಾಸರಿ ನೋಡಿದರೆ ತಿಂಗಳೊಂದರ 603.75 ಹಳ್ಳಿಗಳಿಗೆ ವಿದ್ಯುತ್ತು ಸಂಪರ್ಕ ದೊರೆತಿದೆ.

ಇದರರ್ಥ ಏನೆಂದರೆ ಇಡೀ ದೇಶವನ್ನು ತೆಗೆದುಕೊಂಡರೆ ಅತ್ಯಧಿಕ ಪ್ರಮಾಣದಲ್ಲಿ ವಿದ್ಯುದೀಕರಣ ನಡೆದಿರುವುದು ಯುಪಿಎ ಸರ್ಕಾರದ ಕಾಲದಲ್ಲಿ ಹೊರತು ಮೋದಿ ಸರ್ಕಾರದ ಆಡಳಿತಾವಧಿಯಲ್ಲಿ ಅಲ್ಲ! ರಾಜ್ಯಗಳನ್ನು ತೆಗೆದುಕೊಂಡರೂ ಅದೇ ಬೆಳವಣಿಗೆಯನ್ನು ಕಾಣಬಹುದು. ಉದಾಹರಣೆಗೆ 2016ರ ನಾಸಾ ನಕ್ಷೆಯಲ್ಲಿ ಕಾಣಸಿಗುವ ಹೆಚ್ಚು ಕಾಂತಿಯುತ ಪ್ರದೇಶಗಳ ಪೈಕಿ ಬಿಹಾರವೂ ಒಂದು. ಈ ಜಾಗದ ಪ್ರಕಾಶ ಹೆಚ್ಚಾಗಿರುವುದು ಮೋದಿ ಸರ್ಕಾರ ಬಂದನಂತರ ಎಂದು ಮೋದಿಭಕ್ತನೊಬ್ಬ ಬೂಸಿ ಬಿಟ್ಟಿದ್ದಾನೆ. ಆದರೆ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದ ಅಂಕಿಅಂಶಗಳ ಪ್ರಕಾರ ಯುಪಿಎ ಸರ್ಕಾರ ಆಡಳಿತದಲ್ಲಿದ್ದಾಗ ಬಿಹಾರ ರಾಜ್ಯದಲ್ಲಿ 24 ತಿಂಗಳಲ್ಲಿ 2913 ಹಳ್ಳಿಗಳ ವಿದ್ಯುದೀಕರಣ ಆಗಿದ್ದರೆ ಮೋದಿ ಸರ್ಕಾರದಡಿ 32 ತಿಂಗಳಲ್ಲಿ ಕೇವಲ 1450 ಹಳ್ಳಿಗಳ ವಿದ್ಯುದೀಕರಣ ಆಗಿದೆ ಅಷ್ಟೆ!

ಸಾಂದ್ರೀಕೃತ ವಿದ್ಯುದೀಕರಣ

ರಾಗಾಗ್ರಾವಿ ಯೋಜನೆಯಡಿ 2014ರ ತನಕ 3,01,261 ಹಳ್ಳಿಗಳಲ್ಲಿ ಸಾಂದ್ರೀಕೃತ ವಿದ್ಯುದೀಕರಣ ಮುಗಿದಿದೆ. ಅಂದರೆ ಸರಾಸರಿ ವರ್ಷವೊಂದರ 30,000 ಹಳ್ಳಿಗಳಂತೆ. ಅದೇ ಮೋದಿ ಸರ್ಕಾರದ ಆಡಳಿತದಡಿ ಅಂದರೆ 2014-16ರ ಅವಧಿಯಲ್ಲಿ ಸಾಂದ್ರೀಕೃತ ವಿದ್ಯುದೀಕರಣ ನಡೆದಿರುವುದು 53,491 ಹಳ್ಳಿಗಳಲ್ಲಿ, ಅರ್ಥಾತ್ ಸರಾಸರಿ ವರ್ಷವೊಂದರ 26,745 ಹಳ್ಳಿಗಳಂತೆ.

ನಿಜವಾಗಿ ಮನೆಗಳ ವಿದ್ಯುದೀಕರಣಕ್ಕೂ ಭಾರತದ ಭೂಭಾಗ ಹೆಚ್ಚು ಪ್ರಕಾಶಿಸುತ್ತಿರುವುದಕ್ಕೂ ಸಂಬಂಧವೆ ಇಲ್ಲ. ಅಸಲಿಗೆ ಹೆಚ್ಚು ಬೆಳಕಿನ ಮೂಲವೆ ನಗರ ಪ್ರದೇಶಗಳು. ಇದನ್ನು ಬಹಳ ಸುಲಭದಲ್ಲಿ ಸಾಬೀತುಪಡಿಸಬಹುದು. ಭಾರತದ ಪ್ರಮುಖ ನಗರಗಳ ನಕ್ಷೆಯನ್ನು ನಾಸಾ ನಕ್ಷೆಯ ಮೇಲೆ ಇರಿಸಿದಾಗ ಪ್ರಕಾಶಮಾನ ಜಾಗಗಳೆಲ್ಲವೂ ನಗರಗಳೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಆದುದರಿಂದ 2012ಕ್ಕೆ ಹೋಲಿಸಿದರೆ 2016ರಲ್ಲಿ ಭಾರತದ ಭೂಭಾಗ ಅಧಿಕ ಕಾಂತಿಯುತವಾಗಿರುವುದಕ್ಕೆ ನಗರಗಳ ವಿಸ್ತಾರವೆ ಮುಖ್ಯ ಕಾರಣ ಎನ್ನುವುದು ಸ್ಪಷ್ಟ. ಉದಾಹರಣೆಗೆ ನಾಸಾ ನಕ್ಷೆಯಲ್ಲಿ ಅತ್ಯಧಿಕ ಪ್ರಕಾಶಮಾನ ಪ್ರದೇಶವೆಂದರೆ ಅತಿ ವೇಗದಲ್ಲಿ ಬೆಳೆಯುತ್ತಿರುವ ಮತ್ತು ವಿಶ್ವದ ಅತಿ ದೊಡ್ಡ ನಗರ ಪ್ರದೇಶಗಳಲ್ಲೊಂದಾಗಿರುವ ರಾಷ್ಟ್ರೀಯ ರಾಜಧಾನಿ ಪ್ರದೇಶ (ದಿಲ್ಲಿ, ನೋಯ್ಡಾ, ಗುರ್ಗಾಂವ್ ಒಳಗೊಂಡಿದೆ).

ವಾಸ್ತವಾಂಶ ಹೀಗಿರುವಾಗ ಮೋದಿ ಸರ್ಕಾರದ 'ಉಜಾಲಾ' ಮತ್ತು 'ದೀನ ದಯಾಳು ಉಪಾಧ್ಯಾಯ ಗ್ರಾಮಜ್ಯೋತಿ ಯೋಜನೆ'ಗಳಿಂದಾಗಿ ಅದು ಹೇಗೆ ಭಾರತ ಹೆಚ್ಚು ಪ್ರಕಾಶಮಾನವಾಯಿತು ಎಂಬುದನ್ನು ಮೋದಿಭಕ್ತರ ವಿವರಿಸಬೇಕು.

■ ಸುರೇಶ್ ಭಟ್ ಬಾಕ್ರಬೈಲ್

(ಆಧಾರ: ಏಪ್ರಿಲ್ 16ರ Alt News ನಲ್ಲಿ ಪ್ರತೀಕ್ ಸಿನ್ಹಾ ಲೇಖನ; ಏಪ್ರಿಲ್ 21ರ the quint ನಲ್ಲಿ ಅಮಿತಾಬ್ ದುಬೆ ಲೇಖನ)

ದರೊಳಗಿದ್ದ ತನ್ನ ಮಗುವನ್ನು ಕಾಪಾಡಿಕೊಳ್ಳಲು ತಾಯಿಯೊಬ್ಬಳು ಅವರನ್ನು ಅಂಗಲಾಚುತ್ತಾ ಕೊನೆಯವರೆಗೂ ನಡೆಸುವ ಪ್ರಯತ್ನ ಹೃದಯವಿದ್ರಾವಕವಾಗಿದೆ.

ಇಂಥಾ ಬೆಳವಣಿಗೆಗಳು ಯಾವುದೇ ನಾಗರಿಕ ಸಮಾಜದಲ್ಲಿ ಆಘಾತವನ್ನು ಮತ್ತು ಆಕ್ರೋಶವನ್ನು ಉಂಟುಮಾಡಬೇಕು. ಆದರೆ ಭಾರತದಲ್ಲಿ?


ಇದರ ವಿರುದ್ಧ ಅಲ್ಲಲ್ಲಿ ಪ್ರತಿರೋಧದ ಧ್ವನಿಗಳು ಎದ್ದಿವೆ. ಆದರೆ ಒಂದೆಡೆ ಅಧಿಕೃತ ಕಿವುಡು-ಮೌನ ಮತ್ತೊಂದೆಡೆ ಇಂಥಾ ಕ್ರೌರ್ಯಗಳ ಬಹಿರಂಗ ಸಮರ್ಥನೆಗಳ ಅಬ್ಬರದಲ್ಲಿ ಆ ಧ್ವನಿಗಳು ಕೊಚ್ಚಿಹೋಗುತ್ತಿವೆ. ಅಲ್ವಾರ್‌ನಲ್ಲಿ ನಡೆದ ಕಗ್ಗೊಲೆಯ ನಂತರ ಆ ಘಟನೆಯ ಬಗ್ಗೆ ತನಗೆ ಯಾವುದೇ ಪಶ್ಚಾತ್ತಾಪವಿಲ್ಲವೆಂದು ಗ್ಯಾನ್ ದೇವ ಅಹೂಜನೆಂಬ ರಾಜಸ್ಥಾನದ ಬಿಜೆಪಿ ಶಾಸಕ ಹೇಳಿಕೆ ನೀಡಿದ. ಅಲ್ಲಿನ ಗೃಹಮಂತ್ರಿ ಗುಲಾಬ್ ಚಂದ್ ಅವರು ಪೆಹ್ಲೂ ಖಾನ್ ಒಬ್ಬ ದನಗಳ್ಳನಾಗಿದ್ದನೆಂದು ವಿಧಾನಸಭೆಯಲ್ಲಿ ಹೇಳಿಕೊಂಡರು. ಆದರೆ ಇದನ್ನು ಸ್ವಯಂ ಆ ರಾಜ್ಯದ ಪೊಲೀಸ್ ಮುಖ್ಯಸ್ಥರೇ ನಿರಾಕರಿಸಿದರು. ಈ ಬಗ್ಗೆ ಸಂಸತ್ತಿನಲ್ಲಿ ಕೋಲಾಹಲವೇ ನಡೆದು ಸರ್ಕಾರದ 23 ಹಿರಿಯ ಉನ್ನತ ಅಧಿಕಾರಿಗಳು ಬಲವಾದ ಹೇಳಿಕೆಯನ್ನು ನೀಡಿದ ನಂತರದಲ್ಲಿ ಆ ರಾಜ್ಯದ ಮುಖ್ಯಮಂತ್ರಿ ವಸುಂಧರೆ ರಾಜೆ ಸಿಂಧಿಯಾ ಅವರು ಪ್ರಕರಣದ ಬಗ್ಗೆ ತಮ್ಮ ಮೌನ ಮುರಿದರು. ಇಂಥಾ ಅಸಾಧ್ಯಾಭೂತಿಗಳು ಮತ್ತು ನಿರ್ದಯತೆಗಳ ನಡುವೆ ಸಾಮಾನ್ಯ ಮನುಷ್ಯರಾದ ಖಾನ್ ಆಗಲೀ ಅವರ ಸಂಬಂಧಿಕರಾಗಲೀ ಏನು ಮಾಡಲು ಸಾಧ್ಯವಿದೆ?

ಹಸುವು ಹಿಂದುತ್ವ ರಾಜಕಾರಣದ ಕೇಂದ್ರಬಿಂದುವೇ ಆಗಿದ್ದೂ ವಿಷಯದ ಕೇಂದ್ರ ಹಸುವಲ್ಲ, ಏಕೆಂದರೆ ಅವರಿಗೆ ಹಸುವಿನ ರಾಜಕೀಯ ಎಷ್ಟು ಮುಖ್ಯವೆಂಬುದು ಎಲ್ಲರಿಗೂ ತಿಳಿದಿರುವಂಥದ್ದೇ. ಅದು ಎಷ್ಟು ಮುಖ್ಯವೆಂದರೆ ಇದೀಗ ಕೇಂದ್ರ ಸರ್ಕಾರವು ದೇಶದ ಎಲ್ಲಾ ದನಕರುಗಳಿಗೂ ಆಧಾರ್ ರೀತಿಯ ಕಾರ್ಡೊಂದನ್ನು ನೀಡಲು ನಿರ್ಧರಿಸಿದೆ. ಇದು ನಂಬಲು ಅಸಾಧ್ಯವೆನಿಸಿದರೂ ನಿಜ. ಏಕೆಂದರೆ ಸಾಕ್ಷಾತ್ ಗೃಹ ಇಲಾಖೆಯ ಜಂಟಿ ಕಾರ್ಯದರ್ಶಿಯ ನೇತೃತ್ವದಲ್ಲಿ ರಚಿಸಲಾದ ಸಮಿತಿಯೊಂದು ಇತ್ತೀಚೆಗೆ ಸಭೆ ಸೇರಿ ಬಾಂಗ್ಲಾದೇಶಕ್ಕೆ ನಡೆಯುವ ದನಗಳ ಕಳ್ಳ ಸಾಗಾಟವನ್ನು ತಡೆಯಬೇಕೆಂದರೆ ದೇಶದ ಎಲ್ಲಾ ದನಕರುಗಳಿಗೂ ತಿದ್ದಲು ಅಸಾಧ್ಯವಾಗಿರುವ ಪಾಲಿಯುರೇಥೀನ್ ಪಟ್ಟಿಯೊಂದನ್ನು ಹಚ್ಚುವುದೇ ಏಕೈಕ ಮಾರ್ಗವೆಂದು ತೀರ್ಮಾನಿಸಿದೆ. ಸರ್ಕಾರದ ಸಾಲಿಸಿಟರ್ ಜನರಲ್ ಅವರೇ ಸುಪ್ರೀಂಕೋರ್ಟಿನಲ್ಲಿ ಮುದ್ದಾಂ ಈ ಹೇಳಿಕೆಯನ್ನು ನೀಡಿರಲಿಲ್ಲವೆಂದರೆ ಇದೊಂದು ಕೇವಲ ವದಂತಿಯೆಂದು ಮಾತ್ರವಲ್ಲ ಸುಳ್ಳುಸುದ್ದಿಯೆಂದೇ ನಾವು ಭಾವಿಸಿಬಿಡುತ್ತಿದ್ದೆವು.


ಪ್ರಾಣಿಗಳಿಗೆ ಗುರುತಿನ ಚೀಟಿಯನ್ನು ಲಗತ್ತಿಸುವ ಈ ತೀರ್ಮಾನ ರಂಜಕವೆನಿಸಿದರೂ ಇದರ ಆಳದಲ್ಲಿ ತನಗಿಷ್ಟ ಬಂದಂತೆ ಕಾನೂನು ಮತ್ತು ನ್ಯಾಯವನ್ನು ಬಗ್ಗಿಸಬಲ್ಲೆನೆಂಬ ಕಟು ಸಂದೇಶವಿದೆ. ಆಳುವ ಸರ್ಕಾರದ ಧೋರಣೆಗೆ ಪೂರಕವಾಗಿದ್ದರೆ ಮಾತ್ರ ಕಾನೂನು ಸಂಪೂರ್ಣವಾಗಿ ಜಾರಿಯಾಗುತ್ತದೆ. ಒಂದು ವೇಳೆ ಅದರ ರಾಜಕೀಯ ಅಜೆಂಡಾಗೆ ಪೂರಕವಾಗಿರದಿದ್ದಲ್ಲಿ ಕಾನೂನು ಉಲ್ಲಂಘನೆಯನ್ನು ಬಹಿರಂಗವಾಗಿಯೇ ಪ್ರೋತ್ಸಾಹಿಸಲಾಗುತ್ತದೆ. ಈ ನೀತಿ ನಿಜಕ್ಕೂ ಆತಂಕಕಾರಿಯಾಗಿದೆ. ಹೀಗಾಗಿ ಕಾಶ್ಮೀರದ ಯುವಜನತೆ ಭಾರತದ ಪ್ರಭುತ್ವ ಬಗ್ಗೆ ತಮಗಿರುವ ಸಂಪೂರ್ಣ ತಿರಸ್ಕಾರವನ್ನು ಕಾಶ್ಮೀರದ ಬೀದಿಬೀದಿಗಳಲ್ಲಿ ಕಲ್ಲೆಸೆತದ ಮೂಲಕ ವ್ಯಕ್ತಪಡಿಸುವುದನ್ನು ಅಪರಾಧವೆಂದು ಪರಿಗಣಿಸಲಾಗುತ್ತದೆ, ಬಂಧಿಸಲಾಗುತ್ತದೆ, ಚಿತ್ರಹಿಂಸೆಗೆ ಗುರಿಮಾಡಲಾಗುತ್ತದೆ ಮತ್ತು ಗುಂಡಿಟ್ಟು ಕೊಲ್ಲಲಾಗುತ್ತದೆ. ಆದರೆ ಕಾನೂನನ್ನು ಕೈಗೆತ್ತಿಕೊಂಡು ಅಮಾಯಕ ಮುಸ್ಲಿಂ ಪುರುಷರನ್ನು ಬೀದಿಬೀದಿಗಳಲ್ಲಿ ಹೊಡೆದು-ಬಡಿದು ಕೊಲ್ಲುತ್ತಿರುವ ಗೋರಕ್ಷಕ ಕೊಲೆಗಡುಕ ಪಡೆಗಳನ್ನು ಮಾತ್ರ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿರುವ ದೇಶಭಕ್ತರೆಂದು ಪರಿಗಣಿಸಲಾಗುತ್ತದೆ. ಸಾಧ್ವಿ ಕಮಾಲ್ ದೀದಿಯೆಂಬ ರಾಜಸ್ಥಾನದ ಪ್ರಮುಖ ಗೋರಕ್ಷಕರೊಬ್ಬರಂತೂ ಪೆಹ್ಲೂ ಖಾನ್ ಮೇಲೆ ದಾಳಿ ನಡೆಸಿದವರನ್ನು ಭಗತ್ ಸಿಂಗ್ ಮತ್ತು ಚಂದ್ರಶೇಖರ್ ಆಜಾದ್‌ಗೆ ಹೋಲಿಸಿದ್ದಾರೆ.

ತನ್ನ ದೇಶದ ಅಲ್ಪಸಂಖ್ಯಾತ ಜನತೆ ಏನೆಂದು ಭಾವಿಸುತ್ತದೆ ಅಥವಾ ಆಲೋಚಿಸುತ್ತದೆ ಎಂಬುದನ್ನು ಉದ್ದೇಶಪೂರ್ವಕವಾಗಿ ತಿರಸ್ಕರಿಸುವ ಈ ಸುಸ್ಪಷ್ಟ ಪಕ್ಷಪಾತಿತನದ ಸಂದೇಶವು ಈ ದೇಶದ ಪ್ರಜಾತಂತ್ರದ ಭವಿಷ್ಯಕ್ಕಿರುವ ಆತಂಕಗಳಿಗೆ ಹಿಡಿದಿರುವ ಕನ್ನಡಿಯಾಗಿದೆ. ಈಗಾಗಲೇ ಬಿರುಕುಬಿಟ್ಟಿರುವ ಈ ಸಮಾಜವನ್ನು ಛಿದ್ರಗೊಳಿಸುವುದಕ್ಕೆ ದೊಡ್ಡಮಟ್ಟದ ಕೋಮುಗಲಭೆಗಳ ಅಗತ್ಯವೇನೂ ಇಲ್ಲ. ಈ ಕೊಲೆಗಡುಕ ಗೋರಕ್ಷಕ ಗುಂಪು ತನ್ನ ದಾಳಿಗಳ ಬಗ್ಗೆ ಕೊಚ್ಚಿಕೊಳ್ಳುತ್ತಾ ನೀಡುವ ಪ್ರತಿ ಹೇಳಿಕೆಗಳೂ ಈ ಬಿರುಕನ್ನು ಹೆಚ್ಚಿಸುತ್ತಾ ಹೋಗುತ್ತವೆ. ಅಲ್ವಾರ್, ದಾದ್ರಿ, ಲತೇಹರ್, ಊನಾ, ಸೋನಿಪತ್, ಮಂಡ್‌ಸೌರ್ ಅಥವಾ ಬೇರೆಲ್ಲೋ ನಡೆದ ಇಂಥಾ ಪ್ರಕರಣಗಳು ಒಂದಕ್ಕೊಂದು ಸಂಬಂಧವಿಲ್ಲದಂತೆ ನಡೆಯುತ್ತಿರುವ ದಾಳಿಗಳಲ್ಲ, ಇವೆಲ್ಲವೂ ನರೇಂದ್ರ ಮೋದಿಯವರು ಇತ್ತೀಚೆಗೆ ಪದೇ ಪದೇ ಪ್ರಸ್ತಾಪಿಸುವ 'ನವ ಭಾರತದ' ನಮೂನೆಗಳಾಗಿವೆ. ಅಲ್ಲಿ ಪವಿತ್ರ ಗೋವು ಮನುಷ್ಯರ ಪ್ರಾಣಕ್ಕಿಂತ ಮಿಗಿಲಾಗಿರುತ್ತದೆ. ■

ಹಿಂದೂ ಅಲ್ಲದ ಜೈನರಿಗೇ ಮುಸ್ಲಿಮರ ಬಗ್ಗೆ ಹೆಚ್ಚು ದ್ವೇಷ



ಉತ್ತರ ಪ್ರದೇಶದ ಮೀರತ್ ನಗರದ ರಿಷಭ ಪಬ್ಲಿಕ್ ಸ್ಕೂಲ್ ಎಂಬ ಪ್ರತಿಷ್ಠಿತ ಇಂಗ್ಲಿಷ್ ಮಾಧ್ಯಮ ಶಾಲೆ ಜೈನರ ಆಡಳಿತದ್ದು, ಅಲ್ಲಿ ಯೋಗಿ ಮುಖ್ಯಮಂತ್ರಿ ಆದ ಮೇಲೆ ಆ ಶಾಲೆಯ ಆಡಳಿತ ತಮ್ಮ ಶಾಲೆಯ ಪ್ರತಿಯೊಬ್ಬ ಗಂಡು ಹುಡುಗರೂ ಯೋಗಿ ಆದಿತ್ಯನಾಥ್ ಸ್ಟೈಲ್ ಹೇರ್ ಕಟ್ (ಅಂದರೆ ಬೋಳು ತಲೆ) ಮಾಡಿಸಬೇಕು ಎಂದು ಸುತ್ತೋಲೆ ಹೊರಡಿಸಿದೆ. ಜತೆಗೆ ಎಲ್ಲಾ ವಿದ್ಯಾರ್ಥಿಗಳು ಜೈನ್ ಆಹಾರ ಪದ್ಧತಿ ಅನುಸರಿಸಬೇಕಂತೆ. ಟಿಫಿನ್ ಬಾಕ್ಸ್‌ನಲ್ಲಿ ಮಾಂಸಾಹಾರ ತರುವಂತಿಲ್ಲ, ಈರುಳ್ಳಿ ಬೆಳ್ಳುಳ್ಳಿ ಸಹ ನಿಷೇಧಿತ. ಈ ಶಾಲೆಯಲ್ಲಿ ಮುಸ್ಲಿಂ ಹುಡುಗರು ಗಡ್ಡ ಬಿಡುವುದು ವರ್ಜ್ಯ, ಕಾರಣ ಇದು ಮದ್ರಾಸಾ ಅಥವಾ ಮಸ್ಜಿದ್ ಅಲ್ಲ ಎಂಬುದು ಕಾರ್ಯದರ್ಶಿ ರಂಜಿತ್ ಜೈನನ ಬಹಿರಂಗ ಹೇಳಿಕೆ. (ಕೇವಲ ಮುಸ್ಲಿಂ ಹುಡುಗರು ಮಾತ್ರ ಗಡ್ಡ ಬಿಡುವುದು ಎಂದು ಈ ಜೈನನಿಗೆ ಹೇಳಿದವರು ಯಾರೋ! ನಮ್ಮ ಸಿ.ಟಿ.ರವಿ ಸಮೇತ ಕರ್ನಾಟಕ, ಮಹಾರಾಷ್ಟ್ರ ಹಾಗೂ ಕೇರಳದಲ್ಲಿ ಹೆಚ್ಚಿನ ಸಂಘ ಪರಿವಾರದವರು, ಬಜರಂಗಿಗಳು ಮತ್ತು ಶಿವಸೇನೆಯವರು ಗಡ್ಡ ಬಿಡುತ್ತಾರೆ. ಹಾಗಾದರೆ ಸಂಘಿಗಳು ಗಡ್ಡ ಬಿಡುವುದು ಗುಟ್ಟಾಗಿ ನಮಾಜ್ ಮಾಡಲು ಇರಬಹುದೇ!).



ಆ ಶಾಲೆಯಲ್ಲಿ ಮುಸ್ಲಿಂ ಹುಡುಗರು ಜೈನ ಹುಡುಗಿಯರ ಜತೆ ಮಾತನಾಡುವಂತಿಲ್ಲ, ಕಾರಣ ಅವರು ಲವ್-ಜಿಹಾದಿಗೆ ಬಲಿಯಾಗುತ್ತಾರೆ ಎಂಬುದು ಈ ಶಾಲೆಯ ಮುಖ್ಯಸ್ಥನ ನಂಬಿಕೆ. ಈ ಮೇಲಿನ ವಿಷಯವೆಲ್ಲಾ ಹಿಂದುಸ್ತಾನ್ ಟೈಮ್ಸ್‌ನಲ್ಲಿ ವರದಿಯಾಗಿದೆ. ಜೈನರ ಪಕ್ಕಾ ಸ್ಯಾಹಾರಿ ಹುಡುಗಿಯರು ಮಾಂಸಾಹಾರಿ ಲವ್ ಜಿಹಾದಿಗಳಿಗೆ ಇಷ್ಟು ಬೇಗ ಬಲಿಯಾಗುತ್ತಾರೆ ಎಂಬ ಭಾವನೆ ಮೀರತ್ ನಗರದ ಜೈನರಲ್ಲಿ ಬೆಳೆಯಲು ಕಾರಣವೇನು? ತಮ್ಮ ಸ್ವಂತ ಹುಡುಗಿಯರ ಗುಣನಡತೆಯ ಬಗ್ಗೆಯೇ ಜೈನರಿಗೆ ಅನುಮಾನವೇ?

ಹಿಂದೂ ಬ್ರಾಹ್ಮಣರಿಗಿಂತ ಹೆಚ್ಚಾಗಿ ಹಿಂದೂ ಅಲ್ಲದ ಜೈನರಿಗೇ ಮುಸ್ಲಿಮರ ಬಗ್ಗೆ ಹೆಚ್ಚು ದ್ವೇಷ! ಭಾರತದ ಚರಿತ್ರೆಯಲ್ಲಿ ಜೈನರಿಗೆ ಮುಸ್ಲಿಂ ರಾಜರಿಂದ ಅನ್ಯಾಯವಾದ ಒಂದೂ ಉದಾಹರಣೆ ಇಲ್ಲ, ಒಂದೇ ಒಂದು ಜೈನ ಬಸದಿ ಅಥವಾ ಜಿನಾಲಯವನ್ನು ಮುಸ್ಲಿಂ ರಾಜರು ತಮ್ಮ ಆಳ್ವಿಕೆಯ 700 ವರ್ಷಗಳ ಅವಧಿಯಲ್ಲಿ ಆಕ್ರಮಿಸಿಕೊಂಡಿರುವ ದಾಖಲೆ ಇಲ್ಲ; (ಇನ್ನು ಮುಂದೆ ಈ ಬಗ್ಗೆ ಸಂಘಿಗಳು ತಿರುಚಿದ ಕಾಲ್ಪನಿಕ ಇತಿಹಾಸ ಬರೆಯಲೂಬಹುದು). ಜೈನರು ಹಿಂದೂಗಳಲ್ಲದಿದ್ದರೂ ಅವರು ವೈದಿಕರಿಗಿಂತ ಹೆಚ್ಚು ಅಪಾಯಕಾರಿ ಹಿಂದೂತ್ವವಾದಿ ಆಗಲು ಕಾರಣವೇನು? ಇದರ ಹಿಂದೆ ಯಾವ ಜೈನ-ಬನಿಯಾ ವ್ಯಾಪಾರಿ ಲೆಕ್ಕಾಚಾರ ಅಡಗಿದೆ? ಜೈನರು ಎಲ್ಲದರಲ್ಲಿಯೂ ತಮ್ಮ ವ್ಯಾಪಾರಿ ಲೆಕ್ಕಾಚಾರ ತೋರಿಸಿಯೇ ತೋರಿಸುತ್ತಾರೆ. ಹಾಗಾಗಿ ಜಾತ್ಯತೀತ ಆಗುವುದಕ್ಕಿಂತ ಸಂಕುಚಿತ ಹಿಂದೂತ್ವವಾದಿ ಆಗುವುದರಲ್ಲಿ ಹೆಚ್ಚು ಆರ್ಥಿಕ ಲಾಭವಿದೆ ಎಂದು ವ್ಯಾಪಾರಿ ಬುದ್ಧಿಯ ಬನಿಯಾ-ಜೈನರಿಗೆ ಸರಿಯಾಗಿ ಅರ್ಥವಾಗಿದೆ. ಯಾವ ಹಿಂದೂವೂ ಜೈನರಷ್ಟು ಮುಸ್ಲಿಮರನ್ನು ದ್ವೇಷಿಸುವು ದಿಲ್ಲವೇನೋ!?

1992 ರಲ್ಲಿ ರಾಜೀವ ಗಾಂಧಿ ಹತ್ಯೆಯ ಹಿಂದೆ ತಮಿಳ್ ಟೈಗರ್‌ಗಳೊಂದಿಗೆ ಕೈಜೋಡಿಸಿದ ಆರೋಪ ಹೊತ್ತಿದ್ದ ಚಂದ್ರಾಸ್ವಾಮಿ ಸಹ ಮೂಲತಃ ಜೈನನಾಗಿದ್ದ. ಈಗಿನ ವಿಎಚ್‌ಪಿ ಇರುವುದು ಜೈನರ ಕೈಯಲ್ಲಿ, ಮೋದಿ ಇರುವುದು ಜೈನ ಅದಾಣಿಯ ಜೇಬಲ್ಲಿ, ಗುಜರಾತಿನಲ್ಲಿ 2002 ರ ನರಮೇಧ ಮತ್ತು ನಂತರ ಅಲ್ಲಿ ಹಲವು ನಕಲಿ ಎನ್‌ಕೌಂಟರ್ ಮಾಡಿಸಿದವನು ಜೈನೇಶಾ.

ವಿದೇಶಕ್ಕೆ ಅತ್ಯಧಿಕ ಗೋಮಾಂಸ ರಫ್ತು ಮಾಡುವವರೂ ಜೈನರೇ. ದೇಶದಲ್ಲಿ ಅತಿಹೆಚ್ಚು ರಕ್ತ ಹೀರುವ ಬಡ್ಡಿ ವ್ಯವಹಾರ ಲೇವಾದೇವಿ ಮತ್ತು ದವಸ ಧಾನ್ಯಗಳ ಕಾಳಸಂತೆ ಮಾಡುವವರೂ ರಾಜಸ್ತಾನಿ ಜೈನರೇ. ಒಟ್ಟಾರೆ ದೇಶದ ಜನಸಂಖ್ಯೆಯ 1% ಮಾತ್ರ ಇರುವ ಈ ಪಕ್ಕಾ ಅಹಿಂಸಾವಾದಿ ಜನಾಂಗವು ನಿಜವಾದ ಹಿಂಸೆಯಲ್ಲಿ ಮತ್ತು ಆರ್ಥಿಕ ಅಪರಾಧಗಳಲ್ಲಿ ಯಾಕೆ 20% ಪಾಲು ಹೊಂದಿದ್ದಾರೆ? ಹಣವೇ ಸರ್ವಸ್ವ ಎಂದು ಭಾವಿಸಿರುವುದೇ ಈ ಹಿಂಸೆಗೆ ಕಾರಣ ಇರಬಹುದೇ? ಅಹಿಂಸೆಯಲ್ಲಿ ಕೇವಲ ಅಧ್ಯಾತ್ಮವಿದೆ ಆದರೆ ಹಿಂಸೆಯಲ್ಲಿ ಪಕ್ಕಾ ಲಾಭವಿದೆ ಎಂದು ಅಮಿತ್ ಶಾನನ್ನು ನೋಡಿ ಜೈನರು ಸರಿಯಾಗಿ ಕಲಿತಿರುವರು.

- ರಾಮಕೃಷ್ಣ ಎ.ಕೆ. ಬೆಂಗಳೂರು

ಬಿಜೆಪಿ ದಲಿತರನ್ನು ಹೀನಸ್ಥಿತಿಗೆ ದೂಡುತ್ತಿದೆ

ರಾಜಸ್ತಾನದಲ್ಲಿ ದಲಿತ ಮದುಮಗ ಕುದುರೆ ಮೇಲೆ ಮದುವೆ ಬರಾತ್ ಹೋಗುವಂತಿಲ್ಲ, ಕುದುರೆ ಮೇಲೆ ಹೋದರೆ ದಲಿತ ಗಂಡು ಹೆಣ್ಣುಗಳಿಗೆಲ್ಲಾ ಜೈಪುರದಲ್ಲಿ ಮೇಲ್ಜಾತಿಯಿಂದ ಒದೆ ಬೀಳುತ್ತದೆ. ದಲಿತರ ಬರಾತ್ ಕಾಲ್ನಡಿಗೆಯಲ್ಲಿ ಮಾತ್ರ ಹೋಗಬೇಕು. ಮಧ್ಯಪ್ರದೇಶದಲ್ಲಿ ದಲಿತರು ಮೋಟರ್ ಬೈಕ್ ಮೇಲೆ ಮದುವೆ ಮೆರವಣಿಗೆ ಹೋಗುವಂತಿಲ್ಲ, ಮದುಮಗ ಬೈಕ್ ಮೇಲೆ ಹೋದರೆ ಮೇಲ್ಜಾತಿಯವರು ದಲಿತರು ಕುಡಿಯುವ ನೀರಿನ ಬಾವಿಗೆ ಸೀಮೆಎಣ್ಣೆ ಸುರಿಯುತ್ತಾರೆ. ದಲಿತರು ಲೌಡ್ ಸ್ಪೀಕರ್ ಬಳಸುವಂತಿಲ್ಲ, ಅವರ ಮದುವೆ ಮೆರವಣಿಗೆಯಲ್ಲಿ ಡ್ಯಾನ್ಸ್ ಮಾಡುವಂತಿಲ್ಲ, ಅವರು ಊರಬಾವಿಯಿಂದ ನೀರು ಸೇದುವಂತಿಲ್ಲ, ದಲಿತರು ಬೆಳೆದ ಹಸಿ ತರಕಾರಿ ಮಾರಲು ಹೋದರೆ ಮೇಲ್ಜಾತಿ ಹೆಂಗಸರು ಅದನ್ನು ಮುಟ್ಟುವುದಿಲ್ಲ, ದಲಿತರ ಕಿರಾಣಿ ಅಂಗಡಿಯಿಂದ ಮೇಲ್ಜಾತಿಯವರು ರೇಷನ್ ಕೊಳ್ಳುವುದಿಲ್ಲ, ಶಾಲೆಯಲ್ಲಿ ದಲಿತರು ಮಧ್ಯಾಹ್ನದ ಬಿಸಿ ಊಟ ತಯಾರಿಸಿದರೆ ವಿದ್ಯಾರ್ಥಿಗಳು ಅದನ್ನು ತಿನ್ನದಂತೆ ಪಾಲಕರು ತಡೆಯುತ್ತಾರೆ. ದಲಿತರು ಸಾಕಿದ ಆಕಳು-ಎಮ್ಮೆಯ ಹಾಲು ಕೊಳ್ಳುವವರಿಲ್ಲ, ಅದಕ್ಕಾಗಿ ಆ ಆಕಳನ್ನು ಕಡಿದು ಮಾಂಸ ಮಾಡಿದರೆ ಸಂಘಿ ಪುಂಡರು ಬಂದು ಬಡಿದು ದಲಿತರನ್ನು ಕೊಲ್ಲುತ್ತಾರೆ.

ಈ ಘೋರ ಅನ್ಯಾಯಗಳ ವಿರುದ್ಧ ಈಗಿನ ದಲಿತ ಯುವಕರು ಸಿಡಿದು ಪ್ರತಿಭಟಿಸಿದರೆ ಅವರಿಗೆ ನಕ್ಸಲರು ಎಂಬ ಹಣೆಪಟ್ಟಿ ತಾಗಿಸಿ ನಕಲಿ ಎನ್‌ಕೌಂಟರ್ ಮಾಡಲಾಗುತ್ತದೆ. ಇಂತಹ ಹೀನ ಧರ್ಮದೊಳಗೆ ನಾವು ಇರುವುದಿಲ್ಲ ಎಂದು ದಲಿತರು ಹೇಳಿದರೆ ಅದು ಬಲಾತ್ಕಾರದ ಮತಾಂತರ ಆಮಿಷೆಯ ಮತಾಂತರ ಎಂದು ಬೊಬ್ಬೆ ಹಾಕಿ ದಲಿತರಿಗೆ ಥಳಿಸಿ ಸಹಾಯ ಮಾಡಲು ಬಂದ ಅನ್ಯ ಧರ್ಮದವರಿಗೆ ಬೆಂಕಿ ಹಚ್ಚಿ ಕೊಲ್ಲುತ್ತಾರೆ. ಇಂತಹ ದೇಶದಲ್ಲಿ ನಾವು ಇರುವುದಿಲ್ಲ ನಮಗೆ ಪ್ರತ್ಯೇಕ ಹೋಮ್ ಲ್ಯಾಂಡ್ ಬೇಕು ಎಂದು ದಲಿತರು ಹೇಳಿದರೆ ಅವರನ್ನು ದೇಶದ್ರೋಹಿ ಎಂದು ಹೇಳಿ ಪೊಲೀಸರು ಕಿರುಕುಳ ಕೊಡುತ್ತಾರೆ. ಇಷ್ಟೆಲ್ಲಾ ಆದರೂ "ನಾವೆಲ್ಲಾ ಹಿಂದೂ ನಾವೆಲ್ಲಾ ಒಂದು" ಎಂದು ಘೀಳಿಡುವ ಸಂಘ ಪರಿವಾರ ಮಾಯವಾಗಿರುತ್ತದೆ. ಹಿಂದೂ ಧರ್ಮದೊಳಗೆ ಇಷ್ಟೊಂದು ಅಸಹನೀಯ ಪರಿಸ್ಥಿತಿ ಇದ್ದರೂ ನಮ್ಮದು ಮಹಾನ್ ಸಂಸ್ಕೃತಿ, ಉದಾತ್ತ ಪರಂಪರೆ, ಭವ್ಯ ಸಂಪ್ರದಾಯ ಎಂದು ಅಧ್ಯಾತ್ಮ ಬೊಗಳುವವರಿಗೆ ಕೊರತೆಯಿಲ್ಲ. ಜಗತ್ತಿನ ಯಾವುದೇ ಮೂಲೆಯಲ್ಲಿಯಾದರೂ ಇಂತಹ ಘೋರ ಜಾತಿವ್ಯವಸ್ಥೆ ಇದೆಯೇ? ಆಫ್ರಿಕಾದ ಸೊಮಾಲಿಯಾದಲ್ಲೂ ಇಂತಹ ಹೀನ ಸ್ಥಿತಿ ಇಲ್ಲ. ವಿಐಪಿ ಸಂಸ್ಕೃತಿ ತೊಡೆದು ಹಾಕುವುದಾಗಿ ಬೊಬ್ಬಿರಿಯುತ್ತಾ ಸರಕಾರಿ ಕಾರಿನಿಂದ ಕೆಂಪು ದೀಪ ತೆಗೆದಿದ್ದೇ ಮಹಾಸಾಧನೆ ಎಂದು ಬಡಾಯಿ ಕೊಚ್ಚುವ, ಹತ್ತು ಲಕ್ಷ ರೂಪಾಯಿ ಸೂಟು ತೊಡುವ ಪ್ರಧಾನ ಮಂತ್ರಿಯ ಜಾತಿವಾದಿ ಪಕ್ಷವೇ ದಲಿತರನ್ನು ಇನ್ನೂ ಹೆಚ್ಚು ಹೀನಸ್ಥಿತಿಗೆ ನೂಕಲು ಮೂಲ ಕಾರಣ. ಇಂತಹ ಪ್ರಧಾನಿಯು ಜಾತಿಯನ್ನು ತೊಡೆದುಹಾಕಲು ಪ್ರಯತ್ನಿಸಿದ ಬಸವಣ್ಣನ ಜಯಂತಿ ಸಮಾರಂಭದಲ್ಲಿ ಹುಂಬನಂತೆ ಮುಸ್ಲಿಮರ ತಲಾಖಿನ ಬಗ್ಗೆ ಲೇವಡಿ ಮಾಡುತ್ತಾರೆ! ಬೌದ್ಧಿಕವಾಗಿ ದಿವಾಳಿಯಾಗಿರುವ ಇಂತಹ ಜನರ ಕೈಯಲ್ಲಿ ಈ ದೇಶ ಸಿಕ್ಕಿ ಬಿದ್ದಿರುವುದು ಭಾರತ ದೇಶದ ದುರದೃಷ್ಟ.

- ಏಕಲವ್ಯ
ಮುಂಡಾಲ,
ಮಂಗಳೂರು






ಕೃಪೆ: ಸತೀಶ್ ಆಚಾ

ಅತ್ತೆಯ ಸಿಟ್ಟು ಕೊತ್ತಿಯ ಮೇಲೆ

ಉಳಿದ ಪಕ್ಷಗಳಿಗಿಂತ ತಮ್ಮದು ವಿಭಿನ್ನತೆಯ ಎಂದು ಸುಳ್ಳು ಸುಳ್ಳೇ ಜನರೆದುರು ಕೊಚ್ಚಿಕೊಂಡು ಯಾಮಾರಿಸುತ್ತಿದ್ದ ಬಿಜೆಪಿ ಮತ್ತೊಮ್ಮೆ ತನ್ನ ಅಸಲಿ ರಾಜ್ಯದಲ್ಲಿ ಹೊರಗೆಡವಿಕೊಂಡಿದೆ.

ಬಿಜೆಪಿಯ ರಾಜ್ಯಾಧ್ಯಕ್ಷ ಹಾಗು ವಿರೋಧ ನಾಯಕತ್ವದಂತಹ ಮುಖ್ಯ ಜವಾಬ್ದಾರಿಯುತ ಹ ಲ್ಲಿದ್ದೂ ಕೂಡ ಈಶ್ವರಪ್ಪ ಹಾಗು ಯಡ್ಡಿಗಳು ಬೀದಿ ಗಳಂತೆ ಕಚ್ಚಾಡಿಕೊಂಡು ದೇಶದಲ್ಲಿ ರಾಜ್ಯದ ಮಾನ

⏭




ಮುಸ್ಲಿಂ ರಕ್ತದಿಂದ ಬಾಯಿಗೆ ಅಧಿಕಾರ ಎನ್ನುತ್ತಾರೆ ಮೋ

ಮುಸ್ಲಿಮರು ಏನು ತಿನ್ನುತ್ತಾರೆ, ಏನು ತೊಡುತ್ತಾರೆ, ಹೇಗೆ ಅಜಾನ್ ಹೇಳುತ್ತಾರೆ, ಹೇಗೆ ಗಡ್ಡ ಬಿಡುತ್ತಾರೆ ಮತ್ತು ಮೀಸೆ ಬೋಳಿಸುತ್ತಾರೆ, ಹೇಗೆ ಮದುವೆಯಾಗುತ್ತಾರೆ ಮತ್ತು ವಿಚ್ಛೇದನ ಪಡೆಯುತ್ತಾರೆ, ಎಷ್ಟು ಮಕ್ಕಳಾಗುತ್ತವೆ, ಮುಸ್ಲಿಂ ಮಹಿಳೆಯರು ಹೇಗೆ ಬುರ್ಖಾ-ಸ್ಕಾರ್ಫ್ ತೊಡುತ್ತಾರೆ... ಹೀಗೆ ಕೇವಲ ಮುಸ್ಲಿಮರ ಆಲೋಚನೆಯಲ್ಲಿಯೇ ಮೋದಿ, ಬಿಜೆಪಿ ಹಾಗೂ ಆರೆಸ್ಸೆಸಿಗರ ಜೀವನ ಕಳೆದುಹೋಗುತ್ತಿದೆ.

ಇವರೆಲ್ಲಾ ಮುಸ್ಲಿಮರ ಜಪ ಮಾಡುವ ಬದಲು ತಮ್ಮ ಕುಲದೇವರ ಇಷ್ಟೊಂದು ಜಪ ಮಾಡುತ್ತಿದ್ದರೆ ಇಷ್ಟೊತ್ತಿಗೆ ಇವರ ಏಕಾಗ್ರತೆಗೆ ಮೆಚ್ಚಿ ದೇವರು ಪ್ರತ್ಯಕ್ಷನಾಗಿ ಬಿಡುತ್ತಿದ್ದ. ಸಂಘಿಗಳು ರಾತ್ರಿ ಮಲಗುವಾಗ ರಾಮ ರಾಮ ಎನ್ನುವ ಬದಲು ಮುಸ್ಲಿಂ ಮುಸ್ಲಿಂ ಎನ್ನುತ್ತಾರಂತೆ. ಕನಸಿನಲ್ಲೂ ಮುಸ್ಲಿಂ ಮುಸ್ಲಿಂ ಎಂದು ಬಡಬಡಿಸುತ್ತಾ ನಿದ್ದೆಯಲ್ಲಿ ನಡೆದಾಡುತ್ತಾರಂತೆ, ಬೆಳಗ್ಗೆ ಏಳುವಾಗಲೂ ಅಂಗೈ ನೋಡಿ ಲಕ್ಷ್ಮಿ, ಸರಸ್ವತಿ "ನಮೋ" ಎನ್ನುವ ಬದಲು "ಮುಸ್ಲಿಂ ಮುಸ್ಲಿಂ ನೋ ಮೋರ್" ಎನ್ನುತ್ತಾರಂತೆ.

ಮೋದಿ ಗ್ಯಾಂಗ್ ಮುಸ್ಲಿಮರ ಮೇಲಿನ ನಕಲಿ ಕಾಳಜಿಯನ್ನು ಸ್ವಲ್ಪ ಬದಿಗಿಟ್ಟು ಹರಿಯಾಣ ಮತ್ತು ರಾಜಸ್ತಾನದ ಹಿಂದೂಗಳಲ್ಲಿ ಭೀಕರವಾಗಿ ಆಗುತ್ತಿರುವ ಹೆಣ್ಣು ಭ್ರೂಣಹತ್ಯೆ, ಹುಡುಗಿಯರ ವರದಕ್ಷಿಣೆ ಹತ್ಯೆ ಹಾಗೂ ಮರ್ಯಾದಾ ಹತ್ಯೆಗಳ ಬಗ್ಗೆ ಸ್ವಲ್ಪವಾದರೂ ಯೋಚಿಸಿದರೆ ಒಳಿತು. ಅಲ್ಲಿ ಹೆಣ್ಣು ಭ್ರೂಣಹತ್ಯೆಯಿಂದ ಹೆಣ್ಣು-ಗಂಡುಗಳ ಅನುಪಾತದಲ್ಲಿ ಎಷ್ಟೊಂದು ಏರುಪೇರಾಗಿದೆಯೆಂದರೆ ಹರ್ಯಾಣದ ಹಿಂದೂಗಳಿಗೆ ವಧು ಸಿಗದೇ ಅವರು ಬಿಹಾರ್ ರಾಜ್ಯದ ಹೆಣ್ಣುಗಳನ್ನು ಮದುವೆ ಆಗುತ್ತಾರೆ, ಅದೂ ಮೂರು-ನಾಲ್ಕು ಜನ ಅಣ್ಣ-ತಮ್ಮಂದಿರು ಕೂಡಿ ಒಬ್ಬಳೇ ಹುಡುಗಿಯನ್ನು ವರಿಸುತ್ತಾರೆ, ಥೇಟ್ ದ್ರೌಪದಿ ಪಾಂಡವರ ತರಹ! ಅಷ್ಟೊಂದು ಹುಡುಗಿಯರ ಕೊರತೆ ಅಲ್ಲಿದೆ.

ರಾಜಸ್ತಾನದ ಜೈನರು ಮತ್ತು ಬನಿಯಾಗಳು ನಮ್ಮ ಉತ್ತರ ಕರ್ನಾಟಕಕ್ಕೆ ಬಂದು ನಮ್ಮಲ್ಲಿಯ ಬಡ ಕನ್ನಡಿಗರ ಹೆಣ್ಣುಗಳನ್ನು ಬ್ರೋಕರ್ ಮೂಲಕ ಮದುವೆಯಾಗಿ ನಂತರ ಮನೆ ಕೆಲಸದಾಳಿನಂತೆ ಹೀನಾಯವಾಗಿ ನೋಡಿಕೊಳ್ಳುತ್ತಾರೆ. ಹಲವು ಬಡ ಕನ್ನಡಿಗ ಹುಡುಗಿಯರು ಇಂತಹ ನೀಚ ರಾಜಸ್ತಾನಿ ಜೈನ-ಬನಿಯಾಗಳ ಕುಟುಂಬದ ಕೈಯಲ್ಲಿ ಸಿಕ್ಕಿಬಿದ್ದು ನರಕಸದೃಶ ಜೀವನದಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರದ ಹಳ್ಳಿಗಳಲ್ಲಿ ಈಗಲೂ ದಲಿತ ಹೆಣ್ಣುಗಳನ್ನು ಬಲವಂತವಾಗಿ ದೇವದಾಸಿಯಾಗಿಸಿ ದೇವರ ಹ ವೇಶ್ಯಾವೃತ್ತಿಗೆ ದೂಡಲಾಗುತ್ತಿದೆ.



ಹಿಂದೂ ಧರ್ಮರಕ್ಷಕರು ಎಂದು ಬಿರುದು ಹೊ ಮೋದಿ ಮತ್ತು ಸಂಘಿಗಳಿಗೆ ಹಿಂದೂ ಹೆಣ್ಣುಗ ಘೋರ ಶೋಷಣೆ ಕಾಣಿಸದಿರುವುದು ಖೇದಕರ. ಕ ಯಶೋದಾ ಬೆನ್ ಹೇಗಿದ್ದಾರೆ ಎಂದು ಒಮ್ಮೆಯಾ ಮೋದಿ ವಿಚಾರಿಸಿದರೆ ಒಳಿತು.

ಪ್ರತಿಯೊಬ್ಬ ಬಿಜೆಪಿ ಸಂಸದ ಮತ್ತು ಶಾ ಈಗಾಗಲೇ ಅಮಿತ್ ಶಾ ಕೊಟ್ಟಿರುವ ಖಡಕ್ ಏನೆಂದರೆ- ಅವರಿಗೆ ಅವಕಾಶ ಸಿಕ್ಕಲ್ಲಿ ಎಲ್ಲೆಡೆ ತಲಾಖ್ ವಿಷಯ ಎತ್ತಿ ಪ್ರಚೋದನಕಾರಿ ಕೊಡುತ್ತಲೇ ಇರಬೇಕು ಎಂದು. ಹಾಗಾಗಿ ಈಗ ಸದಸ್ಯರಿಗೆ ರಾಮಮಂದಿರ ಮರೆತು ಹೋಗಿ, ಹೋದಲ್ಲೆಲ್ಲಾ ತ್ರಿವಳಿ ತಲಾಖ್ ಬಿಟ್ಟು ಬೇರೆ ಮಾತನಾಡುತ್ತಿಲ್ಲ, ಅವರೆಲ್ಲರಿಗೆ ಮಾದರಿಯಾಗಿ ಮೋದಿಯೇ ಹೋದಲ್ಲೆಲ್ಲಾ ತ್ರಿವಳಿ ತಲಾಖ್ ಹ ಬೇರೆ ಏನೂ ವಿಷಯ ಎತ್ತುತ್ತಿಲ್ಲ.

ಜಗಜ್ಯೋತಿ ಬಸವೇಶ್ವರರು ಕಾಯಕವೇ ಎಂದರೆ ಮೋದಿ ಮುಸ್ಲಿಂ ದ್ವೇಷವೇ ಕಾಯಕ ಎ ಬಸವಣ್ಣ ಕೈಕೆಸರಾದರೆ ಬಾಯಿ ಮೊಸರು ಎಂದರೆ ಮುಸ್ಲಿಂ ರಕ್ತದಿಂದ ಕೈ ಕೆಸರಾದರೆ ಬಾಯಿಗೆ ಅಧಿಕಾ ಮೊಸರು ಎನ್ನುತ್ತಾರೆ. ಇಂತಹ ವ್ಯಕ್ತಿ ನಮ್ಮ ಪ್ರ

- ವೀರಪ್ಪ ಡಿ.ಎನ್, ಮ

ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವ Bengaluru

■ ಕೆಪ್ಷನೆರಾಜ್ 10

ಅರಿವಿಗೆ ಕತ್ತಲು ಕವಿಯುವ ಹೊತ್ತು

2009ರ ತನ್ನ ಮೊದಲ ಕಥಾಚಿತ್ರದ ಮೂಲಕ ಗಮನ ಸೆಳೆದಿದ್ದ ಅನೋಚ ಸುವಿಕಾರ್ನೋಮೋಂಗ್ (41) ಇದೀಗ ಎರಡನೆಯ ಕಥಾಚಿತ್ರ ನೀಡಿದ್ದಾಳೆ; ಸಿನಿಮಾ ಕಲಾಸಕ್ತರು ಆಸಕ್ತಿಯಿಂದ ಹುಡುಕಿಕೊಂಡು ತನ್ನ ಕೃತಿಗಳನ್ನು ಕಾಣುವಂತೆ ಮಾಡುವಲ್ಲಿ ಯಶಸ್ವಿಯೂ ಆಗಿದ್ದಾಳೆ. ಥೈಲ್ಯಾಂಡ್ ಸಿನಿಮಾದತ್ತ ಸಿನಿಮಾ ಕಲಾಸಕ್ತರ ಕತ್ತು ತಿರುಗುವಂತೆ ಮಾಡಿದ ಖ್ಯಾತ ನಿರ್ದೇಶಕ ಅಪಿಚತ್ಪಾಂಗ್ ವೀರಸೆತಕುಲ್‌ನ ಜೊತೆಯ ಹೋಲಿಕೆಯನ್ನು ವಿನಯದಿಂದ ನಿರಾಕರಿಸುವ ಅನೋಚ, ತನ್ನದೇ ವಿಶಿಷ್ಟ ಸಿನಿಮಾ ವ್ಯಾಕರಣವನ್ನು ರೂಢಿಸಿಕೊಳ್ಳಬಲ್ಲ ಸೃಜನಾಶೀಲಳು ಎಂಬ ವಿಶ್ವಾಸ ಪ್ರಸ್ತುತ ಸಿನಿಮಾದಲ್ಲಿ ಪ್ರಕಟವಾಗಿದೆ.

'ಕಲಾತ್ಮಕ ಸಿನಿಮಾ' ಹಾಗು 'ಜನಪ್ರಿಯ ಸಿನಿಮಾ'ಗಳೆಂಬ ಭೇದವು ಅಷ್ಟೇನೂ ಸರಿಯಲ್ಲ 'ಉತ್ತಮ ಸಿನಿಮಾ' ಎಂದಷ್ಟೇ ಮಾತಾಡಿದರೆ ಸಾಕು–ಎಂಬ ವಾದವೊಂದು ಇತ್ತೀಚಿಗೆ ಹೆಚ್ಚಾಗಿ ಕೇಳಿಬರುತ್ತಿದೆ. ಸರಿಯೇ. ಆದರೆ 'ಉತ್ತಮ ಸಿನಿಮಾ'ವೆಂದರೆ 'ಜನ ಮೆಚ್ಚುವ ಸಿನಿಮಾ'– ಅರ್ಥಾತ್ ಕೋಟ್ಯಾಂತರ ಲಾಭ ಗಳಿಸುವ ಸಿನಿಮಾವೆಂಬ ಒತ್ತನ್ನೂ ಹಾಕಲಾಗುತ್ತಿದೆ! ಈ ಮೂಲಕ ಹಾಕಿದ ಬಂಡವಾಳವನ್ನು ಸರಿಯಾಗಿ ಪಡೆಯಲಾಗದ 'ಕಲಾತ್ಮಕ ಸಿನಿಮಾ'ಗಳನ್ನು 'ಜನ' ನಿರಾಕರಿಸುತ್ತಿರುವುದರಿಂದ, ಅವನ್ನು 'ಉತ್ತಮ ಸಿನಿಮಾ'ವೆಂದು ಯಾಕೆ ಪರಿಗಣಿಸಬೇಕು ಎಂಬ ನಿಲುವನ್ನು ಜನಮಾನಸದಲ್ಲಿ ಸಹಜಗೊಳಿಸುವ ಮಾತುಗಳ ಭರಾಟೆಯೂ ಹೆಚ್ಚಾಗುತ್ತಿದೆ. ಜನರ ಬುದ್ಧಿಯಲ್ಲಿರುವ ವಿವೇಕ–ವಿವೇಚನಾಶಕ್ತಿಯನ್ನು ಅಳಿಸಿ ಹಾಕಿ, ಉಣಬಡಿಸುವ ಉನ್ಮಾದವನ್ನು ವಿವೇಚನಾಹೀನವಾಗಿ ಗಬಗಬ ತಿನ್ನುವ 'ಗ್ರಾಹಕ'ರನ್ನಾಗಿಸುವ ವ್ಯಾಪಾರದ ಸರಕಿನ ಉತ್ಪಾದನೆಗೂ ಸಿನಿಮಾ ಕಲೆಯನ್ನು ಹಿಂಡಲಾಗುತ್ತಿದೆ (ಈ ಮಾರ್ಗವನ್ನು 'ವ್ಯಾಪಾರಿ ಸಿನಿಮಾ'ವೆಂದು ಕರೆಯಲು ಅಡ್ಡಿ ಇಲ್ಲವಷ್ಟೇ!). ಅಂತೆಯೇ, ಒಂದು ಸಮಾಜದ ಸ್ಥಿತಿಗತಿಗೆ ಮುಖಾಮುಖಿಯಾಗಿ, ಸಮಾಜವಾಸಿ ಜನರ ಸ್ಥಾಪಿತ ವಿವೇಕಗಳನ್ನು ವಿಮರ್ಶಿಸುತ್ತಾ ನೋಡುವ ಪ್ರೇಕ್ಷಕರ ಜೊತೆ ಸಾಮಾಜಿಕ ವಿವೇಚನೆಯ ಸಂವಾದಕ್ಕೆ ವೇದಿಕೆಯಾಗಿಸುವತ್ತಲೂ ಕಲೆಯನ್ನು ದುಡಿಸಿಕೊಳ್ಳುವ ನಿರ್ದೇಶಕರ ಸಿನಿಮಾಗಳಿವೆ ('ಸಂವಾದಿ ಸಿನಿಮಾ' *(Augmentative Cinema)*, 'ಸಂವೇದನೆಯ ಸಿನಿಮಾ' *(Cinema of Sensibilities)*, 'ಪ್ರಜ್ಞಾ ಪ್ರವಾಹದ ಸಿನಿಮಾ' *(Cinema of Stream of Conciousness')*- ಎಂಬಿತ್ಯಾದಿಯಾಗಿ ಗುರುತಿಸಬಹುದಾದ ಸಿನಿಮಾಗಳು); ಈ ಬಗೆಯ ಸಿನಿಮಾಗಳು ಸಮಾಜವಾಸಿ ಜನರನ್ನು ಹೆಚ್ಚು ವಿವೇಚನಾ ಸ್ವಾತಂತ್ರ್ಯ ಪಡೆಯುವ, ಆ ಮೂಲಕ ತಮ್ಮ ಸಾಮಾಜಿಕ ಅಸ್ತಿತ್ವವನ್ನು ಕಟ್ಟಿ ಹಾಕಿರುವ ಸಂಕೋಲೆಗಳನ್ನು ಕಾಣುವಂತೆ ಪ್ರೇರೇಪಿಸುತ್ತವೆ. ಪ್ರೇಕ್ಷಕರನ್ನು ಸಂವಾದಕ್ಕೆ ಪ್ರಚೋದಿಸುವುದೇ ಈ ಸಿನಿಮಾಗಳ ಗುಣವಾಗಿರುವುದರಿಂದ, ಒಂದು ಮಟ್ಟದ ಸಿನಿಮಾ ಕಲೆಯ ಸೂಕ್ಷ್ಮಗಳ ಅರಿವಿನ ತಯಾರಿ ಇರುವ ಪ್ರೇಕ್ಷಕರನ್ನು ಇವು ಬೇಡುತ್ತವೆ. ಅನೋಚ ಎರಡನೇ ರೀತಿಯ ಸಿನಿಮಾಕಲಾವಿದೆ.

ಕಲೆಯ ಮೂಲಕ ತಮ್ಮನ್ನು ಸಾಮಾಜಿಕ ಅರಿವಿರುವ ಸುಶಿಕ್ಷಿತರನ್ನಾಗಿಸುವ ಸಿನಿಮಾಗಳಿಗಿಂತ, ತಮ್ಮಲ್ಲಿರುವ ಇದ್ದುಬದ್ದ ಅರಿವನ್ನೂ ಒರೆಸಿ ಹಾಕಿ, ದಾಸ 'ಗ್ರಾಹಕ'ರನ್ನಾಗಿಸುವ ಸಿನಿಮಾಗಳತ್ತಲೇ ಪ್ರೇಕ್ಷಕರು ಯಾಕೆ ವಾಲುತ್ತಾರೆ? ಎನ್ನುವ ಪ್ರಶ್ನೆ ಬರಿ ಸಿನಿಮಾಕ್ಕೆ ಸೀಮಿತವಾದುದ್ದಲ್ಲ, ಸಾಮಾಜಿಕ ರಾಜಕೀಯಕ್ಕೆ ವಿಸ್ತರಿಸುವಂಥದ್ದು. ಈ ಅರ್ಥದಲ್ಲಿ ನಾವು ನೋಡುವ ಪ್ರತಿ ಸಿನಿಮಾವೂ ರಾಜಕೀಯ ಸಿನಿಮಾವೇ ಎಂಬ ನೆಲೆಯಿಂದ ನಾವು ಅನೋಚಳ ಪ್ರಸ್ತುತ ಕೃತಿಯನ್ನು ನೋಡಬೇಕು.

ಸಿನಿಮಾದ ಕಥಾಸಾರಾಂಶ

ಈ ಸಿನಿಮಾಕ್ಕೆ ಒಂದು ಕತೆ ಎಂಬುದಿಲ್ಲ. ಇರುವುದು– ಇಂದಿನ ಸಮಾಜ ಜೀವನಕ್ಕೂ ವಿಸ್ತರಿಸಿರುವ ಒಂದು ಚಾರಿತ್ರಿಕ ಹಿಂಸೆಯ ನೆನಪನ್ನು ಜೀವಂತವಾಗಿಟ್ಟುಕೊಳ್ಳಲು ಸಾಧ್ಯವೇ? ಆ ರೀತಿಯಲ್ಲಿ ಜೀವಂತ ನೆನಪನ್ನು ಉಳಿಸಿಕೊಳ್ಳಲು ತಡೆಯಾಗುತ್ತಿರುವ ಇಂದಿನ ವಿದ್ಯಮಾನಗಳು ಯಾವುವು? ಆ ಹಿಂಸೆಯನ್ನು ಜೈವಿಕವಾಗಿ ಅನುಭವಿಸದೆ ಒಂದು ಸ್ವಸ್ಥ ಸಮಾಜವನ್ನು ಕಟ್ಟಿಕೊಳ್ಳುವ ಸಾಧ್ಯತೆಗಳು ಇವೆಯಾ? – ಎನ್ನುವ ಸಮಸ್ಯೆಗಳ ಸರಣಿ. ಆ ಚಾರಿತ್ರಿಕ ಹಿಂಸೆಯ ವಿದ್ಯಮಾನವೇನು, ಅದಕ್ಕಿರುವ ಹಿನ್ನೆಲೆ ಏನು ಹಾಗು ಇಂದಿನ ಥೈಲ್ಯಾಂಡಿನ ಸಮಾಜವಾಸಿಗಳಿಗೆ ಅದು ಯಾಕೆ ಮುಖ್ಯವಾಗಬೇಕು? ಎಂಬ ಅರಿವಿಲ್ಲದೆ, ಅನೋಚ ಮಂಡಿಸುವ ಸಮಸ್ಯೆ ಹಾಗು ಸಂವಾದಗಳು ನಮಗೆ ಅರ್ಥವಾಗುವುದಿಲ್ಲ. ಅವುಗಳನ್ನು ಕೊಂಚ ವಿವರಿಸಬಹುದು.

ಈಶಾನ್ಯ ಏಶಿಯಾದ ದೇಶಗಳಲ್ಲಿ, ವಸಾಹತುಶಾಹಿಯ ನೇರ ಆಳ್ವಿಕೆಗೆ ಒಳಗಾಗದ ಒಂದೇ ಒಂದು ಭೂಪ್ರದೇಶ ಥೈಲ್ಯಾಂಡ್! 1930ರವರೆಗೂ ಈ ಭೂಭಾಗದ ಅರಸು ಪಾಳಯ ಬ್ರಿಟಿಷ್, ಡಚ್ ಹಾಗು ಜಪಾನಿ ವಸಾಹತುಶಾಹಿಗಳ ಜೊತೆ ಹೊಂದಾಣಿಕೆ ಮಾಡಿಕೊಂಡು ಅರಸೊತ್ತಿನ ಆಳ್ವಿಕೆ ಉಳಿಸಿಕೊಂಡಿತ್ತು. ಹಾಗಂತ ಆಧುನಿಕ ಬದಲಾವಣೆಗಳ ಹವಾ, ಹಾಯದಂತಿಡಲು ಸಾಧ್ಯವಿರಲಿಲ್ಲ. 1930ರ ದಶಕದಲ್ಲಿ ಒಂದು ಬಗೆಯ ಸಂವಿಧಾನಿಕ ಪ್ರಭುತ್ವದ ಪ್ರಯತ್ನ ನಡೆಯಿತು; ಆದರೆ ಅದು ಬಾಳಿಕೆಯದಾಗಿರಲಿಲ್ಲ. ನಂತರದ ಮೂರು ದಶಕಗಳ ಕಾಲ ಅರಸೊತ್ತಿಗೆಯನ್ನು ಬೆಂಬಲಿಸುವ ಮಿಲಿಟರಿ ಸರ್ವಾಧಿಕಾರ ಸರ್ಕಾರಗಳು ನಡೆದವು. ಥೈಲ್ಯಾಂಡನ್ನು ಸುತ್ತುವರೆದ ದೇಶಗಳ ಸಮಾಜವಾದಿ ಚಳವಳಿಗಳ ಪ್ರಭಾವವು ಥೈಲ್ಯಾಂಡಿನ ಯುವಕರನ್ನು ಆವರಿಸಿತು. 1973ರಲ್ಲಿ





ಚಿತ್ರ: ಬೈ ದಿ ಟೈಂ ಇಟ್ ಗೆಟ್ಸ್ ಡಾರ್ಕ್ (ದಾವ್ರೋ ಕನೋಂಗ್) (2016)
ದೇಶ: ಥೈಲ್ಯಾಂಡ್ ಚಿತ್ರಕತೆ-ನಿರ್ದೇಶನ: ಅನೋಚ ಸುವಿಸಕಾರ್ನೋಮೋಂಗ್
ಛಾಯಾಗ್ರಹಣ: ಮಿಂಗ್ ಕೈ ಲಿಯುಂಗ್
ಸಂಕಲನ: ಲೀ ಚಟಮೆಟಕೂಲ್, ಉಂಗ್ ಶ್ರೀವೋಂಗ್

ವಿದ್ಯಾರ್ಥಿ ಪ್ರತಿರೋಧದ ಪರಿಣಾಮವಾಗಿ ಮೂವರು ನಿರಂಕುಶ ಮಿಲಿಟರಿ ಅಧಿಕಾರಿಗಳು ದೇಶ ತ್ಯಜಿಸಬೇಕಾಯಿತು. ನಂತರದ ಮೂರು ವರ್ಷಗಳಲ್ಲಿ ಎಡಪಂಥೀಯ ವಿದ್ಯಾರ್ಥಿ ಚಳವಳಿ ಪ್ರಬಲವಾಗುತ್ತಿದ್ದಂತೆ ಅರಸೊತ್ತಿಗೆಯು–ಬೌದ್ಧ ಧರ್ಮಗುರುಗಳ ಸಕ್ರಿಯ ಸಮ್ಮತಿಯ ಸಹಿತವಾಗಿ–ಅವರ ವಿರುದ್ಧ ಫ್ಯಾಸಿಸ್ಟ್ ಮಾದರಿಯ ಗೂಂಡಾಪಡೆಗಳನ್ನು ಬೆಳೆಸತೊಡಗಿತು; ಹಾಗು 1976ರಲ್ಲಿ ದೇಶಭ್ರಷ್ಟರಾಗಿದ್ದ ಮೂವರು ನಿರಂಕುಶ ಮಿಲಿಟರಿ ಅಧಿಕಾರಿಗಳನ್ನು ವಾಪಸು ಕರೆಸಿಕೊಂಡಿತು. ಅವರ ವಾಪಸಾತಿಯನ್ನು ವಿರೋಧಿಸಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಬೃಹತ್ ಚಳವಳಿಯನ್ನು ನಡೆಸತೊಡಗಿದರು. ಥಮ್ಮಸಾತ್ ವಿಶ್ವವಿದ್ಯಾಲಯವು ಈ ಪ್ರತಿರೋಧದ ಕೇಂದ್ರವಾಗಿತ್ತು. 1976ರ ಅಕ್ಟೋಬರ್ 6ರಂದು ಸೇನೆಯು ವಿಶ್ವವಿದ್ಯಾಲಯಕ್ಕೆ ನುಗ್ಗಿ ಗುಂಡಿನ ಮಳೆಗರೆಯಿತು; ನೂರಾರು ವಿದ್ಯಾರ್ಥಿಗಳು ಹತರಾದರು, ಸಾವಿರಾರು ವಿದ್ಯಾರ್ಥಿಗಳನ್ನು ಸೆರೆಗೆ ತಳ್ಳಲಾಯಿತು. ಥಮ್ಮಸಾತ್ ಹತ್ಯಾಕಾಂಡವೆಂದೇ ನೆನಪಿಡಲಾಗುವ ಈ ವಿದ್ಯಮಾನದ ಬಗ್ಗೆ ಯಾವ ತನಿಖೆಯೂ ನಡೆಯಲಿಲ್ಲ. ವಿದ್ಯಮಾನದ ಹಿನ್ನೆಲೆ ಹಾಗು ಹಿಂಸೆಯ ವಿವರಗಳು ಬಹಿರಂಗಗೊಳ್ಳದಂತೆ ಥೈಲ್ಯಾಂಡಿನ ಪ್ರಭುತ್ವವು ಮುಚ್ಚಿ ಹಾಕಿತು; ಇಂದಿಗೂ ಆ ವಿದ್ಯಮಾನದ ಬಗ್ಗೆ ಮಾತನಾಡುವುದನ್ನು ಪ್ರಭುತ್ವ ವಿರೋಧಿ ಕಾರ್ಯವೆಂದೇ ಕಾಣಲಾಗುತ್ತದೆ. ಆನಂತರದಲ್ಲಿ 1997-2006 ರವರೆಗಿನ ಅಲ್ಪಕಾಲಾವಧಿಯಲ್ಲಿ ಸಂವಿಧಾನಾಧಾರಿತ ಬಹುಪಕ್ಷೀಯ ಪ್ರಜಾಪ್ರಭುತ್ವ ವ್ಯವಸ್ಥೆ ಇತ್ತು. 2006 ನಂತರ ಮತ್ತೆ ಮಿಲಿಟರಿ ಸರ್ವಾಧಿಕಾರಗಳು ಆಡಳಿತ ನಡೆಸುತ್ತಿವೆ. ಸ್ವತಃ 1976ರಲ್ಲಿ ಹುಟ್ಟಿದ ಅನೋಚ, ಥಮ್ಮಸಾತ್ ಹತ್ಯಾಕಾಂಡದ ವಿವರಗಳನ್ನು ಪ್ರಭುತ್ವವು ಪ್ರಜ್ಞಾಪೂರ್ವಕವಾಗಿ ಒರೆಸಿ ಹಾಕುವುದರಲ್ಲಿ ತೊಡಗಿರುವಾಗ, ಸಮಾಜವು ಅದನ್ನು ಜೀವಂತ ನೆನಪಾಗಿ ಇಟ್ಟುಕೊಳ್ಳುವಷ್ಟು ಶಕ್ತವಾಗಿದೆಯೋ? ಅದು ಬರಿ ಒಂದು ಮಾಹಿತಿ ಮಾತ್ರವಾಗಿರದೆ, ಪ್ರಸ್ತುತ ಸಮಾಜದಲ್ಲಿ ಜೀವಂತವಾಗಿರುವ ಹಲವು ಬಗೆಯ ಹಿಂಸೆಗಳ ವಿನಾಶಕಾರಿ ಕೇಂದ್ರವೆಂಬ ಅರಿವನ್ನು ಇಂದಿನ ಯುವಜನಾಂಗ ಅರಿಯಲು ಇರುವ ಅಡ್ಡಿಗಳು ಯಾವುವು? ಎನ್ನುವ ಜಿಜ್ಞಾಸೆಯನ್ನು ಸಿನಿಮಾದ ಮುಖ್ಯ ಸೂತ್ರವಾಗಿಟ್ಟು ಕೊಂಡಿದ್ದಾಳೆ; ನಾಲ್ಕು ದೃಶ್ಯ ಎಳೆಗಳನ್ನು ನೇಯುವ ಮೂಲಕ ಚರಿತ್ರೆಯನ್ನು ಜೀವಂತವಾಗಿ ಅರಿಯುವ ಕಠಿಣತೆಯನ್ನು ಕಾಣಿಸುವುದು ಅನೋಚಳ ಮುಖ್ಯ ಉದ್ದೇಶವಾಗಿದೆ.

ಒಂದನೇ ಕತೆಯ ಎಳೆ: ಥಮ್ಮಸಾತ್ ಹತ್ಯಾಕಾಂಡವನ್ನು ಒಂದು ಸಾಕ್ಷ್ಯ ಚಿತ್ರದ ಮೂಲಕ ಜೀವಂತಗೊಳಿಸುವ ಇರಾದೆ ಇಟ್ಟುಕೊಂಡ ಯುವ ನಿರ್ದೇಶಕಿಯೊಬ್ಬಳು, ಒಂದು ಪ್ರಶಾಂತವಾದ ರಿಸಾರ್ಟಿನಲ್ಲಿ, 1976 ಚಳವಳಿಯಲ್ಲಿ ಭಾಗಿಯಾಗಿ ಉಳಿದಿರುವ ನಾಯಕಿಯೊಬ್ಬಳನ್ನು ಕ್ಯಾಮೆರ ಸಹಿತ ನಡೆಸುವ ಸಂದರ್ಶನ. ಚಳವಳಿಯ ನಾಯಕಿ, ಹಿಂಸೆಯ ವಿವರಗಳನ್ನು ಪ್ರಸ್ತುತ ಪಡಿಸುತ್ತಲೇ, ನಿರ್ದೇಶಕಿಯ ಜೊತೆ ಸಂವಾದಕ್ಕಿಳಿಯುತ್ತಾಳೆ; ಈ ಸಂದರ್ಶನದ ಮುಖೇನ ಏನನ್ನು ಸಾಧಿಸ ಹೊರಟಿರುವೆ? ಎಂಬ ಸಂದಿಗ್ಧದ ಸವಾಲು ಹಾಕುತ್ತಾಳೆ! ಯುವ ನಿರ್ದೇಶಕಿಗೆ 'ತಾನು ಸಾಮಾನ್ಯಳು', ತನ್ನ ಎದುರಿಗಿರುವ ನಾಯಕಿ 'ಅಸಾಮಾನ್ಯಳು' ಎನ್ನುವ ಕಲ್ಪನೆಯನ್ನು ವಿವರಿಸುತ್ತಾಳೆ. ಈ ನಿಲುವಿಂದ ಹಿಂಸೆಯ ಅನುಭವವನ್ನು ಜೀವಂತವಾಗಿಸಲು ಸಾಧ್ಯವೇ? ಎನ್ನುವ ನಾಯಕಿಯ ಸವಾಲಿಗೆ ನಿರ್ದೇಶಕಿಯ ಬಳಿ ತಕ್ಕ ಉತ್ತರವಿಲ್ಲ. ಈ ನಿರ್ದೇಶಕಿ, ಬರಿ ಪ್ರಸ್ತುತ ಸಮಸ್ಯೆಯನ್ನು ಭೇದಿಸುವ ಏಕೋದ್ದೇಶದ ವ್ಯಕ್ತಿ ಮಾತ್ರವಾಗಿರದೇ, ತನ್ನ ಬಾಲ್ಯ, ತಾರುಣ್ಯ ಸಂಸಾರ ಸಂಬಂಧಗಳ ಗೋಜಲಿನಲ್ಲಿ ಸಿಕ್ಕಿ ಬಿದ್ದಿರುವ ಜೀವಿಯೂ ಹೌದು – ಆ ವಿವರಗಳು ಅವಳ ಚಿತ್ರದ ಉದ್ದೇಶದ ಜೊತೆ ಅವಿನಾಭಾವ ಸಂಬಂಧ ಹೊಂದದೇ ಇರುವುದರ ಬಗ್ಗೆಯೂ ನಾಯಕಿ ಹಾಗು ನಿರ್ದೇಶಕಿಯ ನಡುವಿನ ಆಪ್ತ ಮಾತುಕತೆಗಳಲ್ಲಿ ಬಿಚ್ಚಿಕೊಳ್ಳುತ್ತದೆ. ನಿರ್ದೇಶಕಿ ನಾಯಕಿಯ ಮೂಲಕ ಚಾರಿತ್ರಿಕ ವಿದ್ಯಮಾನವೊಂದನ್ನು ಜೀವಂತ ವಾಗಿಸಲು ಹೆಣಗುತ್ತಿರುವಂತೇ, ನಾಯಕಿಯು ತನ್ನ ಮಾತಿನ ವಿವರಗಳಿಗೆ ಈ ಹುಡುಗಿಯ ಯೋಜನೆಯು ಜೀವಂತ ವೇದಿಕೆಯಾಗಿದೆಯೋ? ಅಥವ ತಾನೊಂದು ಕ್ಯಾಮೆರದ ಎದುರು ನಟಿಸುತ್ತಿರುವ ಪಾತ್ರವೋ ಎಂಬ ಅನುಮಾನವೂ ಇದೆ.

ಎರಡನೇ ಕತೆಯ ಎಳೆ: ಮೊದಲ ಕತೆಯ ಎಳೆಯಲ್ಲಿ ರಿಸಾರ್ಟಿನ ಪರಿಚಾರಿಕೆಯಾಗಿ ಬರುವ ಪುಟ್ಟ ಹುಡುಗಿಯು, ತನ್ನ ಹೊಟ್ಟೆಪಾಡಿಗೆ-ಬೌದ್ಧ ವಿಹಾರವನ್ನು ಸ್ವಚ್ಛಗೊಳಿಸುವ ಸಹಿತವಾದ- ಥೈಲ್ಯಾಂಡಿನ ಸಮಾಜದಲ್ಲಿ ಲಭ್ಯವಿರುವ ಅನೇಕ ಬಗೆಯ ಚಾಕರಿಗಳನ್ನು ಮಾಡುವ ಚಿತ್ರದ ತುಣುಕುಗಳ ಸಂಯೋಜನೆ ಇದೆ. ಮಾತಿಲ್ಲದ ಮೌನ ಕತೆ ಇದು.

ಮೂರನೆಯದ್ದು: ಪಾಪ್ ಸಂಗೀತ ಆಲ್ಬಂ, ತಂಬಾಕು ಉತ್ಪಾದನಾ ಕಾರ್ಖಾನೆಯ ಸಾಕ್ಷ್ಯ ಚಿತ್ರ ಹಾಗು ಒಂದು ರಮ್ಯ ಪ್ರೇಮಕತೆಯ ಸಿನಿಮಾ–ಯಾವುದಕ್ಕೂ ಸಲ್ಲುವ ನಾಯಕ, ಅವನ ಪ್ರೇಮ ಪ್ರಸಂಗಗಳು ಹಾಗು ಕಾರು ಅಪಘಾತವೊಂದರಲ್ಲಿ ಅವನ ಸಾವನ್ನು ದಾಖಲಿಸುವ ದೃಶ್ಯಾವಳಿಗಳು ಇವೆ; ಇವನು ಮೊದಲಿನ ಎರಡು ಎಳೆಗಳಿಂದ ಸ್ವತಂತ್ರನಾಗಿರುವವನು.

ನಾಲ್ಕನೆಯ ದೃಶ್ಯಾವಳಿಗಳು: ಸೆಟ್‌ನಲ್ಲಿ ಥಮ್ಮಸಾತ್ ಹತ್ಯಾಕಾಂಡದ ಚಿತ್ರೀಕರಣ; ಹತ್ಯಾಕಾಂಡದ ಹಿಂದಿನ ರಾತ್ರಿ ವಿದ್ಯಾರ್ಥಿಗಳು ನಡೆಸುವ ಚಟುವಟಿಕೆಗಳ ಚಿತ್ರೀಕರಣ; ಆ ಚಿತ್ರೀಕರಣದಲ್ಲಿ ಭಾಗಿಯಾಗುವ ಪಾತ್ರಗಳ ವೈಯಕ್ತಿಕ ಸಖಿ ಅಲೆದಾಟಗಳ ಚಿತ್ರಗಳು; ಬೌದ್ಧ ಭೋದೆಯ ಬೃಹತ್ ಸಭೆಯಲ್ಲಿ ಚಾಕರಿಯ ಹುಡುಗಿಯ ಅಲೆದಾಟ; ಕತ್ತಲು ಬೆಳಕಿನಾಟದ ಡಿಸ್ಕೋತೆಕ್ಕಿನಲ್ಲಿ ಯುವಜನರ ಉನ್ಮತ್ತ ನರ್ತನ; ಇವುಗಳಿಗೆ ಸಂಬಂಧವಿರದಂತೆ ಪ್ರಕೃತಿಯಲ್ಲಿ ಸಹಜವಾಗಿ ನಡೆಯುವ ಹುಟ್ಟುಸಾವಿನ ಆವರ್ತಗಳು.

ಈ ಸಿನಿಮಾ ಯಾಕೆ ಮುಖ್ಯ

ಮನುಷ್ಯ ಸಮಾಜದ ಚರಿತ್ರೆಯನ್ನು ನಿರೂಪಿಸುವಲ್ಲಿ ನಿಷ್ಪಕ್ಷಪಾತವಾದ ಒಂದು ಮಾರ್ಗವಿಲ್ಲದಿರಬಹುದು; ಆದರೆ ಒಂದು ಗೊತ್ತಾದ ನಿಲುವಿನಿಂದ, ವಸ್ತುನಿಷ್ಠವಾಗಿ ಚರಿತ್ರೆಯನ್ನು ನಿರೂಪಿಸುತ್ತಾ, ಮಿಕ್ಕ ನಿಲುವುಗಳೊಂದಿಗೆ ಮುಖಾಮುಖಿಯಾಗುವ ವೈವಿಧ್ಯಮಯ ದಾರಿಗಳನ್ನು ಸಿನಿಮಾಕಲೆಗಾರರು ಅನ್ವೇಷಿಸುತ್ತಿದ್ದಾರೆ. ಲವ್ ಡಿಯಾಜ್, ಅಪಿಚತ್ಪಾಂಗ್ ತಮ್ಮ 'ನಿಧಾನಗತಿಯ ಸಿನಿಮಾ' ಮೂಲಕ, ಪ್ಯಾಟ್ರಿಸಿಯೊಗುಜ್ಮಾನ್ ಹಾಗು ಜೋಷುವ ಓಪನ್‌ಹಿಮರ್ ತಮ್ಮ ಸಾಕ್ಷ್ಯ ಕಥನಗಳ ಮೂಲಕ ಈ ಬಗೆಯ ಸಂವಾದಗಳನ್ನು ನಡೆಸುವ ಪ್ರಯೋಗಗಳನ್ನು ಮಾಡುತ್ತಿದ್ದಾರೆ (ಇವು ಪ್ರಾತಿನಿಧಿಕ ಹೆಸರುಗಳು ಮಾತ್ರ). ಇವುಗಳ ಜೊತೆ ಅನೋಚಳದ್ದೂ ಒಂದು ಪ್ರಯೋಗವಾಗಿದೆ.

ಚರಿತ್ರೆಯ ವಿದ್ಯಮಾನಗಳನ್ನು ಜೀವಂತವಾಗಿ, ಪ್ರಸ್ತುತವಾಗಿಟ್ಟುಕೊಳ್ಳುವಂತೆ ನೋಡಿಕೊಳ್ಳುವಲ್ಲಿ ಇರುವ ಗೋಜಲುಗಳನ್ನು ನಿರೂಪಿಸುವ ಮೂಲಕ, ಚರಿತ್ರೆಯ ಪ್ರಜ್ಞೆಯನ್ನು ಪ್ರಾಮಾಣಿಕವಾಗಿ ಪಡೆಯುವಲ್ಲಿರುವ ಕಠಿಣತೆಯನ್ನು ಅರಿಯುವುದು 'ಚಾರಿತ್ರಿಕ ಪ್ರಜ್ಞೆ'ಯನ್ನು ಪಡೆಯುವ ಭಾಗವೇ ಆಗಿರುತ್ತದೆ ಎನ್ನುವ ತಾತ್ವಿಕ ನಿಲುವು ಅನೋಚಳದ್ದು. ಸಿನಿಮಾ ಚಿತ್ರೀಕರಣ ಮಾಡುವಾಗ ದೃಶ್ಯಾವಳಿಗಳನ್ನು ಪ್ರತ್ಯೇಕವಾಗಿಯೇ ಚಿತ್ರಿಸಿ, ಆ ನಂತರದಲ್ಲಿ ದೃಶ್ಯ ಸಂಯೋಜನೆಯ ಮೂಲಕ ತಮ್ಮ ನಿಲುವನ್ನು ಕಟ್ಟಿಕೊಡುವುದು ನಿರ್ದೇಶಕರ ಸೃಜನಶೀಲತೆ. ಅನೋಚ ತಾನು ಚಿತ್ರೀಕರಿಸಿದ ನಾಲ್ಕು ಬಗೆಯ ದೃಶ್ಯಾವಳಿಗಳನ್ನು, ಒಂದು ನೇರ ಕಥನವಾಗಿಯೂ ಕಟ್ಟಿಕೊಡಬಹುದಿತ್ತು; ಆದರೆ ಅದು ಚರಿತ್ರೆಯನ್ನು ಅರಿಯುವಲ್ಲಿ ಸಮಾಜವಾಸಿಗಳಲ್ಲಿ ಇರುವ ತಡೆಗಳ ಬಗ್ಗೆ ಏನನ್ನೂ ಹೇಳುವುದಿಲ್ಲ. ಉದಾಹರಣೆಗೆ: ನಾಯಕಿ–ನಿರ್ದೇಶಕಿಯರ ನಡುವೆ ಸಂದರ್ಶನ ನಡೆಯುತ್ತಿರುವ ಕಾಲದಲ್ಲೇ, ಹುಡುಗಿ ಪರಿಚಾರಿಕೆಯಲ್ಲಿ ತೊಡಗಿರುತ್ತಾಳೆ, ಯುವ ಹೀರೋ ಪಾಪ್ ಆಲ್ಬಂನ ಚಿತ್ರೀಕರಣದಲ್ಲಿ ತೊಡಗಿರುತ್ತಾನೆ, ನಿರ್ದೇಶಕಿಯ ಬಾಲ್ಯದ ಪ್ರಸಂಗಗಳು ಎದ್ದು ನೆನಪಿಗೆ ಬರುತ್ತಿರುತ್ತವೆ, ಪ್ರಕೃತಿಯಲ್ಲಿ ನೈಸರ್ಗಿಕ ಹುಟ್ಟು ಸಾವುಗಳು ನಡೆಯುತ್ತಿರುತ್ತವೆ. ಪ್ರತ್ಯೇಕವಾಗಿ ಗೋಚರಿಸುವ ವಿದ್ಯಮಾನಗಳನ್ನು ಪರಸ್ಪರ ಜೋಡಿಸುವುದು ಹೇಗೆ? ಒಂದರ ಅರಿವನ್ನು ಮತ್ತೊಂದಕ್ಕೆ ಜೋಡಿಸಿ, ಪ್ರೇಕ್ಷಕರಲ್ಲಿ ಚರಿತ್ರೆಯ ಹಿಂಸೆಯನ್ನು ಜೀವಂತವಾಗಿ ಇಡಬಹುದೇ? ಎಂಬ ಸಾಹಸದಲ್ಲಿ ಅನೋಚ ದೃಶ್ಯಾವಳಿಗಳನ್ನು ನೇಯ್ದಿದ್ದಾಳೆ. ನಾಲ್ಕು ದೃಶ್ಯಾವಳಿಗಳನ್ನು ಪ್ರತ್ಯೇಕ ಖಂಡಗಳಾಗಿ ನಿರೂಪಿಸದೇ, ದೃಶ್ಯಾವಳಿಗಳ ಒಂದು ನೂಲನ್ನು ಮತ್ತೊಂದರ ಜೊತೆ ಹೆಣೆಯುವ ಮೂಲಕ, ಹಲವು ಸ್ವತಂತ್ರವೆಂಬಂತೆ ಕಾಣುವ ವಿದ್ಯಮಾನಗಳನ್ನು ಹೆಣೆದುಕೊಳ್ಳುವ ಮೂಲಕ ಚರಿತ್ರೆಯನ್ನು ಜೀವಂತಿಕೆಯಲ್ಲಿ ಪ್ರಸ್ತುತಗೊಳಿಸಿಕೊಳ್ಳುವಂತೆ ಪ್ರೇಕ್ಷಕರನ್ನು ಅನೋಚ ಒತ್ತಾಯಿಸುತ್ತಾಳೆ.

---

14 ◀◀

ತ್ತಿದ್ದಾರೆ. ಯಡ್ಡಿಯಂತೂ ಬಿಜೆಪಿ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಯಾರೋ ಮಲ್ಲಿಕಾರ್ಜುನ ಎಂಬ ಟೈಪಿಸ್ಟ್‌ನನ್ನು "ಆ ಮಗನೇ/ ಈ ಮಗನೇ" ಎಂದು ಬಾಯಿಗೆಬಂದಂತೆ ಬೈದು ಕೆಲಸಕ್ಕೆ ಬಾರದಂತೆ ತಾಕೀತು ಮಾಡಿ ವಿರೋಧಿಗಳ ಮೇಲಿದ್ದ ಸಿಟ್ಟನ್ನು ಈ ಬಡಪಾಯಿಯ ಮೇಲೆ ತೀರಿಸಿಕೊಳ್ಳುವ ಮೂಲಕ ಮತ್ತಷ್ಟು ನಗೆಪಾಟಲಿ ಗೀಡಗಿದ್ದಾರೆ.

ಹಿಂದೆ ಅಧಿಕಾರ ನಡೆಸಿದ್ದ ಬಿಜೆಪಿ ಅದರ ಕಚ್ಚಾಟ ಹಾಗು ದುರಾಡಳಿತದ ಕಾರಣಕ್ಕೆ ಮರಳಿ ಅಧಿಕಾರಕ್ಕೆ ಬರುವುದು ಸಂಶಯವಿತ್ತು, ಕಳೆದ ವಿಧಾನಸಭಾ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸುತ್ತಿದ್ದಾಗ ಚಡ್ಡಿಗಳು ಒಬ್ಬ ಅಭ್ಯರ್ಥಿಯ ಸೋಲಿಗೆ ಸಂಭ್ರಮಿಸುತ್ತಿದ್ದರು. ಆ ಅಭ್ಯರ್ಥಿ ಬೇರೆ ಯಾರೂ ಅಲ್ಲ ಬಿಜೆಪಿಯಿಂದ ಸಿಡಿದು ಕೆಜೆಪಿ ಕಟ್ಟಿದ್ದ ಯಡ್ಡಿ ಮಹಾತ್ಮ.

ಯಡ್ಡಿ ಹಾಗು ಆತನ ಚೇಲಾಗಳ ಜಬರ್ದಸ್ತಿನ ಅಧಿಕಾರದಡಿಯಲ್ಲಿ ಕೆಲಸ ಮಾಡೋದು ಕಷ್ಟ. ಹಾಗಾಗಿ ಆತ ಸೋತಾದರೂ ಆತನ ಜಬರ್ದಸ್ತು ಮತ್ತು ಕೈಹಿಡಿತ ತಪ್ಪುವಂತಾಗಲಿ ಎಂಬುವುದೇ ಅವರ ಆಶಯವಾಗಿತ್ತು, ಈ ಕಾರಣಕ್ಕೇ ನಂತರ ರಾಜ್ಯಾಧ್ಯಕ್ಷ ಸ್ಥಾನ ಕೊಡುವಾಗಲೂ ಯಡಿಯೂರಪ್ಪನನ್ನು ಬಹಳಷ್ಟು ಸತಾಯಿಸಲಾಗಿತ್ತು.

ಯಡಿಯೂರಪ್ಪ ಕೆಜೆಪಿ ಕಟ್ಟಿದಾಗ ಬಿಜೆಪಿ ಪಕ್ಷವನ್ನು ಹಾಗು ಅದರ ನಾಯಕರನ್ನು ಬಾಯಿಗೆಬಂದಂತೆ ಬೈದದ್ದನ್ನು ಖಂಡಿತಾ ಯಾರೂ ಮರೆತಿಲ್ಲ, ಅದೇರೀತಿ ಯಡ್ಡಿಯನ್ನೂ ಚಡ್ಡಿಗಳು ಜೈಲುವಾಸಿ,ಭ್ರಷ್ಟ ಎಂದೆಲ್ಲ ಉಗಿದಿದ್ದರು. ಸದಾನಂದಗೌಡರಂತೂ ಭ್ರಷ್ಟ ಯಡ್ಡಿ ಹೋಗಿ ಈಗ ನಮ್ಮ ಪಾರ್ಟಿ ಕ್ಲೀನ್ ಆಗಿದೆ ಎಂದು ಟಾಂಗ್ ಕೊಟ್ಟಿದ್ದರು.

ನಂಜನಗೂಡು ಉಪಚುನಾವಣೆಯನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿಸಿದ್ದರೂ, ಶ್ರೀನಿವಾಸ ಪ್ರಸಾದ್ ಹಾಗು ಕೃಷ್ಣರಂತವರನ್ನು 'ಆಪರೇಷನ್' ಮಾಡಿಸಿಯೂ ಅದರಿಂದ ಯಡ್ಡಿಗೆ ನಷ್ಟ ಆಯಿತೇ ಹೊರತು ಬಿಡಿಕಾಸಿನ ಲಾಭವಾಗಲಿಲ್ಲ, ಇದನ್ನೇ ಮುಂದಿಟ್ಟುಕೊಂಡು ಬಾಯಿಬಡುಕ ಈಶ್ವರಪ್ಪನನ್ನು ಛೂಬಿಟ್ಟು ಯಡ್ಡಿಯ ಕೈಕಟ್ಟುವ ತಂತ್ರವನ್ನು ಇದೀಗ ಹೆಣೆಯಲಾಗಿದೆ. ಇವರಿಬ್ಬರಲ್ಲಿ ಜಗಳ ಹತ್ತಿಸಿ ಯಾವುದೋ ಸಂತೋಷನಂತಹ ಆರೆಸ್ಸೆಸ್ ವ್ಯಕ್ತಿಯ ಹಿಡಿತಕ್ಕೆ ಕರ್ನಾಟಕವನ್ನು ಒಪ್ಪಿಸುವುದು ಇದರ ಹಿಂದಿರುವ ತಂತ್ರ.

ಇಲ್ಲಿ ಯಡ್ಡಿ ಮತ್ತು ಈಶ್ವರಪ್ಪನಿಗೆ ಅವರ ಪಕ್ಷ ದ್ರೋಹಕ್ಕಾಗಿ ಶಿಕ್ಷೆ ನೀಡಿದರೆ ಜಾತಿಯಾಧಾರಿತ ಓಟಿಗೆ ಪೆಟ್ಟು ನಿಶ್ಚಿತ. ಆದರೆ ಅವರವರೇ ಕಚ್ಚಾಡಿಕೊಂಡರೆ ಅದಕ್ಕೆ ಅವರೇ ಹೊಣೆಗಾರರು ಆಗ ಮೂರನೇ ವ್ಯಕ್ತಿಯ ಎಂಟ್ರಿಗೆ ಹಾದಿ ಸುಗಮ. ನಮೋ ಬ್ರಿಗೇಡ್ ಕಟ್ಟಿ ಮೋದಿ ಗೆಲ್ಲಿಸುವಲ್ಲಿ ತನ್ನ ಕೊಡುಗೆ ನೀಡಿದ ನರೇಶ್ ಶೆಣೈಯ ಜಿಎಸ್‌ಬಿ ಸಮುದಾಯದ ಕುಲ ಬಂಧುವೇ ಆಗಿರುವ ಕಾರ್ಕಳ ಮೂಲದ ಸಂತೋಷ್ ರಾಜ್ಯ ಬಿಜೆಪಿಯ ತೆರೆಯ ಹಿಂದಿನ ಸೂತ್ರಧಾರಿಕೆ ನಿರ್ವಹಿಸಿದ ಅನುಭವಿ. ಈ ಪ್ರಹಸನದಲ್ಲಿ ಹೆಚ್ಚು ಸುದ್ದಿಯಾಗುತ್ತಿರುವುದು ಇದೇ ಹೆಸರು.

- ಓದುಗ, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಇಲ್ಲಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 17-05-2017 RNI No. KARKAN200

ಸುದೀಪ್ ಎದುರು ಮಿಥುನ್ ಚಕ್ರವರ್ತಿ

ಶಿವರಾಜ್‌ಕುಮಾರ್ ಮತ್ತು ಸುದೀಪ್ ಕಾಂಬಿನೇಷನ್‌ನ 'ದಿ ವಿಲನ್' ಸಿನಿಮಾದಲ್ಲಿ ನಟಿಸಲು ಬಾಲಿವುಡ್‌ನ ಹಿರಿಯ ನಟ ಮಿಥುನ್ ಚಕ್ರವರ್ತಿ ಒಪ್ಪಿಕೊಂಡಿದ್ದಾರೆ. ನಿರ್ದೇಶಕ ಪ್ರೇಮ್ ಈಗಾಗಲೇ ಮಿಥುನ್ ಜತೆ ಮಾತಾಡಿದ್ದು ಮುಂದಿನ ವಾರದಿಂದಲೇ ಇವರು ಶೂಟಿಂಗ್‌ನಲ್ಲೂ ಪಾಲ್ಗೊಳ್ಳಲಿದ್ದಾರೆ.



ವಿಶೇಷವೆಂದರೆ ಭಾರೀ ಮೊತ್ತ ಕೊಟ್ಟು ಈ ಬಾಲಿವುಡ್ ನಟನನ್ನು ಕರೆತರಲಾಗಿದೆಯಂತೆ.

ಮುಂದಿನ ವಾರ ಬೆಳಗಾವಿಯಲ್ಲಿ ಎರಡನೇ ಹಂತದ ಶೂಟಿಂಗ್ ನಡೆಯಲಿದ್ದು, ಸುದೀಪ್ ಮತ್ತು ಮಿಥುನ್ ಚಕ್ರವರ್ತಿ ನಟನೆಯ ದೃಶ್ಯಗಳನ್ನು ಚಿತ್ರೀಕರಿಸಲಾಗುತ್ತದೆ. ಈ ಕುರಿತು ಪ್ರೇಮ್ ಹೇಳುವುದು ಹೀಗೆ: "ಪಾತ್ರಗಳ ಆಯ್ಕೆಯ ವಿಚಾರದಲ್ಲಿ ನಾನು ಯಾವತ್ತೂ ಕಾಂಪ್ರಮೈಸ್ ಮಾಡಿಕೊಂಡಿಲ್ಲ. ನಾನು ಸೃಷ್ಟಿಸಿದ ಪಾತ್ರಕ್ಕೆ ಯಾವ ಕಲಾವಿದರು ಬೇಕು ಅಂತ ಅನಿಸುತ್ತದೆಯೋ, ಅವರನ್ನೇ ಹುಡುಕಿಕೊಂಡು ಹೋಗಿದ್ದೇನೆ. ಅವರು ಕೂಡ ಅಷ್ಟೇ ಪ್ರೀತಿಯಿಂದ ಒಪ್ಪಿಕೊಂಡಿದ್ದಾರೆ. ಹಾಗಾಗಿ ದೊಡ್ಡ ದೊಡ್ಡ ಕಲಾವಿದರ ಜತೆ ನಾನು ಕೆಲಸ ಮಾಡಲು ಸಾಧ್ಯವಾಗಿದೆ."

'ವಿಲನ್' ಸಿನಿಮಾದ ಕತೆ ಕೇಳಿದ ತಕ್ಷಣವೇ ಮಿಥುನ್ ಚಕ್ರವರ್ತಿ ಒಪ್ಪಿಕೊಂಡರಂತೆ. ಕನ್ನಡ ಸಿನಿಮಾರಂಗವನ್ನು ಬಲ್ಲ ಇವರು, ಇಲ್ಲಿನ ಪ್ರೇಕ್ಷಕರು ಇಷ್ಟ ಪಡುವಂತಹ ಪಾತ್ರ ಮಾಡುತ್ತಿದ್ದಾರಂತೆ.

ಸಂಜನಾ ಮತ್ತು ಅವನು

ಈ ಬಾರಿಯ ಬಿಗ್‌ಬಾಸ್ ಸ್ಪರ್ಧಿಗಳಲ್ಲಿ ಸಾಕಷ್ಟು ಕುತೂಹಲ ಮೂಡಿಸಿದವರು ಸಂಜನಾ, ಭುವನ್ ಮತ್ತು ಪ್ರಥಮ್. ಈ ಇಬ್ಬರು ಹುಡುಗರು ಸಂಜನಾ ಹಿಂದೆ ಬಿದ್ದಿದ್ದಾರೆ ಅನ್ನುವುದೇ ಬ್ರೇಕಿಂಗ್ ನ್ಯೂಸ್ ಆಗಿತ್ತು. ಭುವನ್ ಮತ್ತು ಸಂಜನಾ ಮಧ್ಯೆ ಪ್ರೇಮಾಂಕುರ ಆಗಿದೆ ಎಂಬರ್ಥದಲ್ಲಿ ಮಾತುಗಳು ಕೇಳಿಬಂದವು. ಈ ಪ್ರಣಯ ಪಕ್ಷಿಗಳ ಮಧ್ಯೆ ಪ್ರಥಮ್ ಹೆಸರು ಕೇಳಿಬಂತು.



ಒಂದು ರೀತಿಯಲ್ಲಿ ಅದು ತ್ರಿಕೋನ ಪ್ರೇಮಕತೆಯಂತೆಯೇ ರಚಿತವಾಯಿತು. ಈಗ ಅದನ್ನೇ ಧಾರಾವಾಹಿ ಮಾಡುತ್ತಿದೆ ಕಲರ್ಸ್ ವಾಹಿನಿ. ಅದಕ್ಕೆ ಸಂಜು ಮತ್ತು ನಾನು ಎಂದು ಹೆಸರಿಡಲಾಗಿದೆ.

ಬಿಗ್‌ಬಾಸ್ ಮನೆಯಿಂದ ಆಚೆ ಬಂದಾದ ಮೇಲೂ ಪ್ರಥಮ್ ಮತ್ತು ಭುವನ್ ಜತೆ ಒಂದಷ್ಟು ಪಾರ್ಟಿಗಳಲ್ಲಿ ಕಾಣಿಸಿಕೊಂಡರು ಸಂಜನಾ. ಹಾಗಾಗಿ ಈ ಮೂವರ ಬಗ್ಗೆ ಅನುಮಾನದ ಮಾತುಗಳೂ ಕೇಳಿಬಂದವು. ಈ ಎಲ್ಲ ಅನುಮಾನಗಳಿಗೂ ಧಾರಾವಾಹಿಯಲ್ಲಿ ಉತ್ತರವಿದೆಯಂತೆ. ಹಾಗಂತ ಇದು ಪ್ರತಿ ದಿನ ಪ್ರಸಾರವಾಗುವ ಸೀರಿಯಲ್ ಅಲ್ಲ. ವೀಕೆಂಡ್‌ನಲ್ಲಿ ಮಾತ್ರ ಮೂವರ ದರ್ಶನ. ಈಗಾಗಲೇ ಸಂಜನಾ ಬಗ್ಗೆ ಸಲ್ಲದ ಆರೋಪಗಳು ಕೇಳಿಬರುತ್ತವೆ. ಧಾರಾವಾಹಿ ಪ್ರಸಾರವಾದ ನಂತರ ಆ ಹುಡುಗಿಯ ಬಗ್ಗೆ ಏನೆಲ್ಲ ಮಾತುಗಳು ಹುಟ್ಟಿಕೊಳ್ಳುತ್ತವೆಯೋ ಕಾದು ನೋಡಬೇಕು.

ಅಂಜನಿಪುತ್ರನಿಗಾಗಿ ಕುಣಿದ ಹರಿ

ಹ[illegible] ಕಾಣಿಸಿಕೊಂಡಿದ್ದ 'ನೀರ್‌ದೋಸೆ' ಸಿನಿಮಾದ ನಂತರ ಕೆಲವು ತಿಂಗಳುಗಳ ಕಾಲ ಮನೆಯಲ್ಲೇ ಕೂತಿದ್ದ ಇವರಿಗೆ ಎರಡು ಸಿನಿಮಾಗಳು ಹುಡುಕಿಕೊಂಡು ಬಂದಿವೆ. ಜತೆಗೆ ಪುನೀತ್ ರಾಜ್‌ಕುಮಾರ್ ನಟನೆಯ 'ಅಂಜನಿಪುತ್ರ' ಸಿನಿಮಾದ ಹಾಡಿಗೆ ಹೆಜ್ಜೆ ಹಾಕಲು ಹರಿಪ್ರಿಯಾ ಒಪ್ಪಿಕೊಂಡಿದ್ದಾರೆ. ಕೇವಲ ಹಾಡಿನಲ್ಲಿ ಕಾಣಿಸಿಕೊಳ್ಳುವುದಕ್ಕೆ ಅವರು ಕಾರಣವನ್ನೂ ಕೊಟ್ಟಿದ್ದಾರೆ.

"ನನಗೆ ಪುನೀತ್ ಅವರು ಅಂದರೆ ತುಂಬಾ ಇಷ್ಟ. ತುಂಬಾ ಚೆನ್ನಾಗಿ ಡಾನ್ಸ್ ಮಾಡುತ್ತಾರೆ. ಅವರ ಜತೆ ಗೀತೆಯೊಂದಕ್ಕೆ ಹೆಜ್ಜೆ ಹಾಕಲು ಅವಕಾಶ ಸಿಕ್ಕಾಗ ಬೇಡ ಅಂತ ಅನ್ನುವುದಕ್ಕೆ ಆಗಲಿಲ್ಲ. ಒಂದು ಹಾಡಾದರೂ ಸರಿ ಅಂತ ಒಪ್ಪಿಕೊಂಡಿದ್ದೇನೆ. ಆ ಕುರಿತು ಖುಷಿ ಇದೆ" ಅಂತಾರೆ ಹರಿಪ್ರಿಯಾ.

ಹರ್ಷ ನಿರ್ದೇಶನದಲ್ಲಿ ಮೂಡಿಬರುತ್ತಿರುವ 'ಅಂಜನಿಪುತ್ರ' ಸಿನಿಮಾದಲ್ಲಿ ನಾಯಕನ ಇಂಟ್ರೊಡಕ್ಷನ್ ಸಾಂಗ್ ಇದೆ. ಈ ಹಾಡಿಗೆ ಪುನೀತ್ ಮತ್ತು ಹರಿಪ್ರಿಯಾ ಹೆಜ್ಜೆ ಹಾಕುತ್ತಿದ್ದಾರೆ. ರವಿ ಬಸ್ರೂರ್ ಸಂಗೀತ ಸಂಯೋಜನೆಯಲ್ಲಿ ಗೀತೆ ಮೂಡಿ ಬಂದಿದೆ.

ಈ ಹಾಡಿನ ಚಿತ್ರೀಕರಣಕ್ಕಾಗಿ ಹರಿಪ್ರಿಯಾ ರಿಹರ್ಸಲ್ ಬೇರೆ ಮಾಡಿಕೊಂಡಿದ್ದಾರೆ. ವಿಭಿನ್ನ ಕಾಸ್ಟ್ಯೂಮ್ ಕೂಡ ರೆಡಿ ಆಗಿದೆ. ನಿರ್ದೇಶಕ ಹರ್ಷ ಸ್ವತಃ ಕೊರಿಯೋಗ್ರಾಫರ್ ಆಗಿರುವ ಕಾರಣದಿಂದಾಗಿ ಹೊಸ ರೀತಿಯಲ್ಲಿ ಗೀತೆಯನ್ನು ಚಿತ್ರೀಕರಿಸಲು ಪ್ಲಾನ್ ಮಾಡಿದ್ದಾರಂತೆ.



ಸಿನಿಮಾವಾಗಿ ಕುಮಾರಸ್ವಾಮಿ

ಮಾಜಿ ಮುಖ್ಯಮಂತ್ರಿ, ಎಚ್.ಡಿ.ಕುಮಾರಸ್ವಾಮಿ ಕು[illegible] ಸಿನಿಮಾವೊಂದು ಸ್ಯಾಂಡಲ್‌ವುಡ್‌ನಲ್ಲಿ ಮೂಡಿಬರಲಿದೆ. ಹಾಗಂತ [illegible] ಇವರ ಜೀವನ ಕುರಿತಾದ ಸಿನಿಮಾವೆಂದು ಭಾವಿಸಬೇಕಿಲ್ಲ. ಕುಮಾ[illegible] ಅವರ ಜನಪ್ರಿಯ ಕಾರ್ಯಕ್ರಮವನ್ನು ಆಧರಿಸಿ ಚಿತ್ರಕತೆ ಬರೆದಿದ್ದಾರಂತೆ ನಿ[illegible] ಎಸ್.ನಾರಾಯಣ್. ಅದರಲ್ಲೂ ಕುಮಾರಸ್ವಾಮಿ ಅವರು ಇಪ್ಪತ್ತು [illegible] ಮುಖ್ಯಮಂತ್ರಿಯಾಗಿದ್ದ ಕಾಲಾವಧಿಯನ್ನಷ್ಟೇ ಸಿನಿಮಾ ಮಾಡು[illegible] ನಿರ್ದೇಶಕರು. ಚಿತ್ರಕ್ಕೆ 'ಭೂಮಿಪುತ್ರ' ಎಂದು ಹೆಸರಿಡಲಾಗಿದೆ. [illegible]



ರಿಂದ ಶೂಟಿಂಗ್ ಪ್ರಾರಂಭವಾಗಲಿದ್ದು, ಕುಮಾರಸ್ವಾಮಿ ಅವರ ಪಾತ್ರವನ್ನು ಅರ್ಜುನ್ ಸರ್ಜಾ ನಿರ್ವಹಿಸಲಿದ್ದಾರೆ. ಈ ಸಿನಿಮಾವನ್ನೇ ನಾರಾಯಣ್ ಕೈಗೆತ್ತಿಕೊಳ್ಳಲು ಕಾರಣವಿದೆ. ಇವತ್ತು ಎಸ್.ನಾರಾಯಣ್ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆಂದರೆ ಅದಕ್ಕೆ ಕಾರಣ ಕುಮಾರಸ್ವಾಮಿ. ಈ ರೀತಿಯಾಗಿ ಋಣಸಂದಾಯವಾಗುತ್ತಿದೆ.

ಈ ಸಿನಿಮಾ ಕುರಿತು ಗಾಂಧಿನಗರದಲ್ಲಿ ಹಲವು ರೀತಿಗಳಲ್ಲಿ ಚರ್ಚೆ ಶುರು[illegible] ಹತ್ತಿರದಲ್ಲಿಯೇ ಚುನಾವಣೆ ಇರುವ ಕಾರಣಕ್ಕಾಗಿ ಈ ಸಿನಿಮಾ ತ[illegible] ನಡೆಯುತ್ತಿದೆಯಂತೆ. ಸಿನಿಮಾದ ಮೂಲಕ ಕುಮಾರಸ್ವಾಮಿ ಅವರ ಜ[illegible] ಯೋಜನೆಗಳನ್ನು ಜನರಿಗೆ ತಲುಪಿಸುವ ಉದ್ದೇಶ ಕೂಡ ಇದೆ. ಹಾಗಾಗಿ ನಾರಾ[illegible] ನೇತೃತ್ವದಲ್ಲಿ ಕೆಲಸ ನಡೆಯುತ್ತಿದೆ. ಆದರೆ, ಕುಮಾರಸ್ವಾಮಿ ಹೇಳುವುದೇ[illegible] ಸಿನಿಮಾಗೂ ಚುನಾವಣೆಗೂ ಯಾವುದೇ ಸಂಬಂಧವಿಲ್ಲವಂತೆ. ಸಿನಿಮಾ ಮಾಡು[illegible] ನಿರ್ದೇಶಕರು ಹೇಳಿದಾಗ ಮೊದಲು ಬೇಡ ಅಂದರಂತೆ. ಒತ್ತಾಯ ಮಾ[illegible] ಒಪ್ಪಿಕೊಂಡಿದ್ದಾರಂತೆ. ಏನೇ ಆಗಲಿ ತೆರೆಯ ಮೇಲೆ ಕುಮಾರಸ್ವಾಮಿ ರಾಜಕಾರಣದ ಒಂದು ಭಾಗ ಸಿನಿಮಾವಾಗಿ ಮೂಡಿಬರುತ್ತಿರುವುದು ಅಭಿಮಾನಿಗಳಿಗೆ ಖುಷಿ ತಂದಿದೆ.

ರಾಧೆಯ ಹಿಂದೆ ಬಿದ್ದ ವಿಜಯ್ ರಾಘವೇ[illegible]

'ಮಾಸ್ ಲೀಡರ್' ಸಿನಿಮಾದ ನಂತರ ವಿಜಯ್ ರಾಘ[illegible] ಮತ್ತೊಂದು ಹೊಸ ಸಿನಿಮಾ ಒಪ್ಪಿಕೊಂಡಿದ್ದಾರೆ. ರಾಜಶೇಖರ್ ನಿರ್ದೇಶ[illegible] ಮೂಡಿಬಂದಿರುವ 'ರಾಜ ಲವ್ಸ್ ರಾಧೆ' ಸಿನಿಮಾದಲ್ಲಿ ಅವರು ಲವರ್‌ಬ[illegible] ಆಗಿ ಕಾಣಿಸಿಕೊಂಡಿದ್ದಾರೆ. ಇದು ಪಕ್ಕಾ ತುಂಟನ ಪಾತ್ರವಾದ್ದರಿಂದ ಕಥಾನಾಯಕನಿಗೆ ರಾಜ ಎಂದು ಹೆಸರಿಟ್ಟಿದ್ದಾರಂತೆ ನಿರ್ದೇಶಕರು.



'ಪಂಟ' ಸಿನಿಮಾ ಖ್ಯಾತಿಯ ರಿತೀಕ್ಷಾ ಈ ಚಿತ್ರದ ನಾಯಕಿ. ವಿಜಯ್ ಮತ್ತು ರಿತೀಕ್ಷಾ ಕಾಂಬಿನೇಷನ್ ಕತೆಗೆ ಪಕ್ಕಾ ಒಪ್ಪಿದೆಯಂತೆ. ಮುದ್ದಾದ ಲವ್‌ಸ್ಟೋರಿಯೇ ಸಿನಿಮಾದ ಜೀವಾಳ. ಮನೆಮಂದಿ ಕೂತು ನೋಡುವ ಸಿನಿಮಾ ಆಗಿದ್ದರಿಂದ ಮನರಂಜನೆಗೆ ಹೆಚ್ಚು ನೀಡಿದ್ದಾರಂತೆ ನಿರ್ದೇಶಕರು. ಪ್ರೇಮಕತೆಯ ಜತೆಗೆ ತಾಯಿ ಮಗನ ಸೆಂಟಿಮೆ[illegible] ಗೆಳೆತನ, ಪ್ರೀತಿಯ ತ್ಯಾಗ, ಆಕ್ಷನ್ ಹಾಗೂ ಹಾಸ್ಯ ದೃಶ್ಯಗಳು ಇವೆಯ[illegible] ವಿಜಯ್ ರಾಘವೇಂದ್ರ ಈ ಎಲ್ಲ ದೃಶ್ಯಗಳಿಗೂ ಜೀವ ತುಂಬಿದ್ದಾರಂತೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com